ಭಾನುವಾರ, ಜೂನ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 162 | ಪುಟ 20

• www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ರಾಜ್ಯದಲ್ಲಿ ಎಷ್ಟೊಂದು ಜೇನು ಕಾಲೊನಿಗಳು! ಏನೆಲ್ಲ ರೋಚಕ ಕಥೆಗಳು!

ನಾಗರಿಕರ ಹತ್ಯೆ ಪ್ರಕರಣ: 30 ಯೋಧರ ವಿರುದ್ಧ ಚಾರ್ಜ್‌ಶೀಟ್ 7

ರಾಜ್ಯಸಭೆ ಚುನಾವಣೆ: ಎರಡು ಹೆಚ್ಚುವರಿ ಸ್ಥಾನ ಗೆದ್ದ ಕಮಲ ಪಾಳಯ

ಒಡನಾಡಿಗಳ ನೆನಪಿನಂಗಳದಲ್ಲಿ ಕವಿ ಸಿದ್ಧಲಿಂಗಯ್ಯ 6

ಬಿಜೆಪಿಗೆ ಉಲ್ಲಾಸ: ಕಾಂಗ್ರೆಸ್‌ಗೆ ಆಘಾತ 7

ಪಠ್ಯ ಪರಿಷ್ಕರಣೆಯ ಬಿರುಗಾಳಿ; ಕಲಿಕಾ ಗುಣಮಟ್ಟದ ದುಃಸ್ಥಿತಿ

ಶೈಕ್ಷಣಿಕ ‘ಪ್ರಗತಿ’ ಅಧೋಗತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಇತ್ತ ಪಠ್ಯಪುಸ್ತಕ ಪರಿಷ್ಕರಣೆ ವಿಷಯ ಬಿರುಗಾಳಿ ಎಬ್ಬಿಸಿದೆ. ಅತ್ತ ಸದ್ದಿಲ್ಲದೆ ಬಹಿರಂಗವಾದ ‘ರಾಷ್ಟ್ರೀಯ ಸಾಧನಾ ಸಮೀಕ್ಷೆ -2021’ಯ (ಎನ್‌ಎಎಸ್) ವರದಿಯಲ್ಲಿರುವ ರಾಜ್ಯದ ಶಾಲಾ ಮಕ್ಕಳ ಶೈಕ್ಷಣಿಕ ಗುಣಮಟ್ಟದ ಅಂಕಿ–ಅಂಶ, ಇಡೀ ವ್ಯವಸ್ಥೆ ಅಧೋಗತಿಗೆ ಇಳಿದಿರುವ ದುಃಸ್ಥಿತಿಯ ಪುಟಗಳನ್ನು ತೆರೆದಿಟ್ಟಿದೆ. ಕಲಿಸುವ ಶಿಕ್ಷಕರೂ ಕಲಿಯುವುದನ್ನು ನಿಲ್ಲಿಸಿರುವ ಚಿತ್ರಣವನ್ನು ಬಿಚ್ಚಿಟ್ಟಿದೆ!

ಅದರಲ್ಲೂ, ಕೋವಿಡ್‌ನಿಂದಾಗಿ ಶಿಕ್ಷಣ ವಲಯದಲ್ಲಿ ‘ಶೂನ್ಯ’ ಆವರಿಸಿದೆ. ಈ ಅವಧಿಯಲ್ಲಿ ಶಾಲೆಗಳ ಮುಖವನ್ನೇ ನೋಡದ, ಭೌತಿಕ ತರಗತಿಗಳಿಲ್ಲದೆ ಪರ್ಯಾಯ ಬೋಧನಾ ವ್ಯವಸ್ಥೆಗೆ (ಆನ್‌ಲೈನ್) ಅನಿವಾರ್ಯವಾಗಿ ಆತುಕೊಂಡ ಮಕ್ಕಳ ಶೈಕ್ಷಣಿಕ ‘ಅವಸ್ಥೆ’ ಯಾವ ಮಟ್ಟಕ್ಕೆ ಇಳಿದಿತ್ತು ಎನ್ನುವುದಕ್ಕೆ ವಾಟ್ಸ್‌ಆ್ಯಪ್‌ಗಳಲ್ಲಿ ಹರಿದಾಡುತ್ತಿದ್ದ ತರಹೇವಾರಿ ಸಂದೇಶಗಳು ಪುರಾವೆಯಾಗಿದ್ದವು. ಕಲಿಕೆ ಇನ್ನೇನು ಚೇತರಿಕೆಯತ್ತ ಮರಳಿ ಮುಖಮಾಡಬೇಕು ಎನ್ನುವಷ್ಟರಲ್ಲಿ ಏನನ್ನು ಕಲಿಸಬೇಕು, ಏನನ್ನು ಕಲಿಸಬಾರದೆಂಬ ಚರ್ಚೆ ಜೋರಾಗಿದೆ.

ಒಳನೋಟ

ಶಿಕ್ಷಣದ ದುಃಸ್ಥಿತಿ: ಸಮೀಕ್ಷೆ ಕನ್ನಡಿ

ಪ್ರತಿಕ್ರಿಯಿಸಿ: 9606038256

feedback@prajavani.co.in

ಕೇಂದ್ರ ಶಿಕ್ಷಣ ಇಲಾಖೆಯು 3, 5, 8 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ 2021ರ ನವೆಂಬರ್‌ನಲ್ಲಿ ನಡೆಸಿದ 2020–21ನೇ ಸಾಲಿನ ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ಸ್ಯಾಂಪಲ್ ಸಮೀಕ್ಷೆಯಲ್ಲಿ ರಾಜ್ಯದ ಆಯ್ದ 7,210 ಶಾಲೆಗಳ 31,875 ಶಿಕ್ಷಕರು, 2,11,705 ಮಕ್ಕಳು ಭಾಗವಹಿಸಿದ್ದರು. ವರದಿಯಲ್ಲಿರುವ ಮಕ್ಕಳ ಕಲಿಕಾಮಟ್ಟ ಮತ್ತು ಶಿಕ್ಷಣ– ಶಿಕ್ಷಕರ ಬೋಧನಾ ಗುಣಮಟ್ಟ, ಕೋವಿಡ್ ಸಾಂಕ್ರಾಮಿಕ ಉಂಟು ಮಾಡಿದ ಪರಿಣಾಮದ ನೋಟ ಗಾಬರಿ ಹುಟ್ಟಿಸುತ್ತದೆ.

ಹಾಗೆಂದು, ಕೋವಿಡ್‌ಗೂ ಮೊದಲು ಶೈಕ್ಷಣಿಕ ಗುಣಮಟ್ಟ ಉತ್ತಮವಿತ್ತು ಎಂದಲ್ಲ. 10ನೇ ತರಗತಿಯ ಮೆಟ್ಟಿಲು ಹತ್ತಿದ್ದ ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ವಿರುದ್ಧಾರ್ಥಕ ಪದ ಬರೆಯಲು, 7ನೇ ತರಗತಿ ವಿದ್ಯಾರ್ಥಿಗಳಿಗೆ ಆಹಾರದ ಮೂಲ ಪರಿಕಲ್ಪನೆ, 4ನೇ ತರಗತಿ ಮಕ್ಕಳಿಗೆ ಕಾಡು ಪ್ರಾಣಿಗಳನ್ನೇ ಗುರುತಿಸಲು ಬರುವುದಿಲ್ಲ ಎನ್ನುವುದು ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ‘ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್’ (ಕೆಎಸ್‌ಕ್ಯೂಎಎಸಿ) ನಡೆಸಿದ್ದ ‘ಗಣತಿ ಆಧಾರಿತ ರಾಜ್ಯ ಸಾಧನಾ ಸಮೀಕ್ಷೆ–2018’ರ ವರದಿಯಲ್ಲಿತ್ತು.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದುಃಸ್ಥಿತಿ

ರಾಜ್ಯಮಟ್ಟದಲ್ಲಿ ‘ಕಲಿಕಾ ಸಾಧನಾ ಸಮೀಕ್ಷೆ’

ವರ್ಷ	ಶಾಲೆಗಳು	ತರಗತಿ	ವಿದ್ಯಾರ್ಥಿಗಳು	ಶೇಕಡಾವಾರು ಸಾಧನೆ
2013–14	2,040	2,4,6	1,42,404	60.75
2014–15	225	2,3,8	18,276	58.07
2015–16	1,095	3,5,8	66,810	63.31
2016–17	46,438	4,6	12,34,348	68.77
2017–18	55,453	4-9	36,96,791	64
2018–19	53,964	4-10	40,73,293	63

(2019–20ರ ನಂತರ ರಾಜ್ಯಮಟ್ಟದಲ್ಲಿ ಕಲಿಕಾ ಸಾಧನಾ ಸಮೀಕ್ಷೆ ನಡೆದಿಲ್ಲ)

4ನೇ ಪುಟ ನೋಡಿ

ಕಲಿಕಾಮಟ್ಟ ಗ್ರಹಿಸಲು ಈ ವರ್ಷ ಸಮೀಕ್ಷೆ

ಪ್ರಸಕ್ತ ಸಾಲಿನಲ್ಲಿ (2022–23) ರಾಜ್ಯಮಟ್ಟದ ಸಾಧನಾ ಸಮೀಕ್ಷೆ ನಡೆಸುವ ಪ್ರಸ್ತಾವವನ್ನು ‘ಸಮಗ್ರ ಶಿಕ್ಷಣ ಕರ್ನಾಟಕ’ (ಎಸ್‌ಎಸ್‌ಕೆ) ಮೂಲಕ ಕೇಂದ್ರ ಶಿಕ್ಷಣ ಇಲಾಖೆಯ ಯೋಜನಾ ಮಂಜೂರಾತಿ ಮಂಡಳಿಗೆ (ಪಿಎಬಿ) ಕೆಎಸ್‌ಕ್ಯೂಎಎಸಿ ಕಳುಹಿಸಿದೆ.

2021ನೇ ಸಾಲಿನಲ್ಲಿ 3, 5, 8 ಮತ್ತು 10ನೇ ತರಗತಿಯ ಮಕ್ಕಳ ರಾಷ್ಟ್ರೀಯ ಸಾಧನಾ ಸಮೀಕ್ಷೆ ನಡೆದಿರುವುದರಿಂದ ಪ್ರಸಕ್ತ ಸಾಲಿನಲ್ಲಿ (2022–23) ಒಟ್ಟು ಸರ್ಕಾರಿ ಶಾಲೆಗಳ ಪೈಕಿ ಶೇ 10ರಷ್ಟು ಶಾಲೆಗಳ (ಸುಮಾರು 4,700) 4, 6, 7 ಮತ್ತು 9ನೇ ತರಗತಿಯ 1.81 ಕೋಟಿ ಮಕ್ಕಳ ಸಮೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ವಿಶ್ವಸಂಸ್ಥೆ ಮುಖ್ಯಸ್ಥರ ಪ್ರತಿನಿಧಿಯಾಗಿ ಗಿಲ್

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟನಿ ಗುಟೆರಸ್ ಅವರ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತಿನಿಧಿಯಾಗಿ ಭಾರತದ ಹಿರಿಯ ರಾಜತಾಂತ್ರಿಕರಾದ ಅಮನ್‌ದೀಪ್ ಸಿಂಗ್ ಗಿಲ್ ಅವರನ್ನು ನೇಮಕ ಮಾಡಲಾಗಿದೆ.

7ನೇ ಪುಟ ನೋಡಿ





ರಾಂಚಿ: ಗುಂಡೇಟಿನಿಂದ ಗಾಯಗೊಂಡಿದ್ದ ಇಬ್ಬರ ಸಾವು

ಹೌರಾದಲ್ಲಿ ಮನೆಗಳಿಗೆ ಬೆಂಕಿ

ಕೋಲ್ಕತ್ತ (ಪಿಟಿಐ): ಪ್ರವಾದಿ ಮಹಮ್ಮದರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಬಿಜೆಪಿಯ ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ಅವರನ್ನು ತಕ್ಷಣ ಬಂಧಿಸಬೇಕೆಂದು ಆಗ್ರಹಿಸಿ ಸತತ ಎರಡನೇ ದಿನವಾದ ಶನಿವಾರವೂ ಪಶ್ಚಿಮ ಬಂಗಾಳದ ಹೌರಾದಲ್ಲಿ ಪ್ರತಿಭಟನೆ ನಡೆದಿದ್ದು, ಹಲವು ಮನೆಗಳು ಬೆಂಕಿಗಾಹುತಿಯಾಗಿವೆ.

ಮತ್ತೊಂದೆಡೆ, ಜಾರ್ಖಂಡ್‌ನ ರಾಂಚಿಯಲ್ಲಿ ಶುಕ್ರವಾರ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಗುಂಡೇಟಿನಿಂದ ಗಾಯಗೊಂಡಿದ್ದ ಇಬ್ಬರು ಪ್ರತಿಭಟನಕಾರರು ಶನಿವಾರ ಮೃತಪಟ್ಟಿದ್ದಾರೆ. ನಗರದ ಹಲವು ಭಾಗಗಳಲ್ಲಿ ಬಿಗುವಿನ ಪರಿಸ್ಥಿತಿಯಿದ್ದು, ನಿಷೇಧಾಜ್ಞೆ ಹೇರಲಾಗಿದೆ.

ಘರ್ಷಣೆ: ಹೌರಾದ ಪಂಚಲಾ ಬಜಾರ್ ಎಂಬಲ್ಲಿ ಪೊಲೀಸರ ಜೊತೆ ಪ್ರತಿಭಟನಕಾರರು ಶನಿವಾರ ಘರ್ಷಣೆಗಿಳಿದು, ಕಲ್ಲು ತೂರಾಟ ನಡೆಸಿದರು. ಬಿಜೆಪಿ ಕಚೇರಿಯ ಮೇಲೆ ದಾಳಿ ನಡೆಯಿತು. ಗುಂಪು ಚದುರಿಸಲು ಅಶ್ರುವಾಯು ಸಿಡಿಸಬೇಕಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂಸಾಪೀಡಿತ ಹೌರಾಕ್ಕೆ ತೆರಳುತ್ತಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುಕಾಂತ್ ಮಜುಂದಾರ್ ಅವರನ್ನು ಪೊಲೀಸರು ಮಾರ್ಗಮಧ್ಯೆ ತಡೆದು ಬಂಧಿಸಿದರು.

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಸಹ ಮುಸ್ಲಿಮರು ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಬಿಜೆಪಿ ಎಸಗುವ ಪಾಪಗಳಿಗೆ ಸಾಮಾನ್ಯ ಜನರನ್ನು ಏಕೆ ಬಲಿಪಶು ಮಾಡಲಾಗುತ್ತಿದೆ. ಹೌರಾ ಹಿಂಸಾಚಾರದ ಹಿಂದೆ ಕೆಲವು ರಾಜಕೀಯ ಪಕ್ಷಗಳ ಕೈವಾಡವಿದೆ

ಮಮತಾ ಬ್ಯಾನರ್ಜಿ

ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕಟ್ಟುನಿಟ್ಟಿನ ಕ್ರಮ: ಮುಖ್ಯಮಂತ್ರಿ

ಹುಬ್ಬಳ್ಳಿ: ‘ಪ್ರವಾದಿ ಮಹಮ್ಮದ್ ಅವರ ಬಗ್ಗೆ ನೂಪುರ್ ಶರ್ಮಾ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎನ್ನುವ ಕುರಿತು ದೇಶದ ಕೆಲವೆಡೆ ಪ್ರತಿಭಟನೆ ನಡೆಯುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯದಲ್ಲಿ ಬಂದೋಬಸ್ತ್ ಏರ್ಪಡಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಶನಿವಾರ ನಗರದ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪೊಲೀಸ್ ಹಿರಿಯ ಅಧಿಕಾರಿಗಳಿಗೆ ತುರ್ತು ಕ್ರಮ ಕೈಗೊಂಡು ಕಟ್ಟೆಚ್ಚರದಿಂದ ಇರಲು ಈಗಾಗಲೇ ಸೂಚಿಸಲಾಗಿದೆ. ರಾಜ್ಯದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಪ್ರತಿಯೊಂದು ಠಾಣೆಯ ಸಿಪಿಐ ಅವರನ್ನು ಉಸ್ತುವಾರಿ ಮಾಡಿ, ಎಲ್ಲ ಸಮುದಾಯದವರ ಜತೆ ಸೌಹಾರ್ದ ವಾತಾವರಣ ನಿರ್ಮಿಸುವಂತೆ ಸೂಚಿಸಲಾಗಿದೆ’ ಎಂದರು.

ಇನ್ನಷ್ಟು ಸುದ್ದಿಗಳು 7

ಒಳ ಪುಟ

ಎರಡು ಪ್ರತ್ಯೇಕ ಎನ್‌ಕೌಂಟರ್: ಇಬ್ಬರು ಉಗ್ರರ ಹತ್ಯೆ 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ದೇಶದಲ್ಲಿ 8,329 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 8,329 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 40,370ಕ್ಕೆ ಏರಿಕೆಯಾಗಿದೆ.



ಮಹಾರಾಷ್ಟ್ರದಲ್ಲಿ 2,922 ಪ್ರಕರಣಗಳು ದೃಢಪಟ್ಟಿದ್ದು, ಶುಕ್ರವಾರಕ್ಕೆ ಹೋಲಿಸಿದರೆ (3,081) ದೃಢ ಪ್ರಮಾಣದಲ್ಲಿ 159ರಷ್ಟು ಇಳಿಕೆ ಕಂಡಿದೆ.

ದೇಶದಲ್ಲಿ ಇದೇ ಅವಧಿಯಲ್ಲಿ 10 ಮಂದಿ ಮೃತಪಟ್ಟಿದ್ದು, ಈವರೆಗೆ ಕೋವಿಡ್‌ಗೆ 5,24,757 ಮಂದಿ ಮೃತಪಟ್ಟಂತಾಗಿದೆ. ಕಳೆದ 103 ದಿನಗಳಲ್ಲಿ ಇದೇ ಮೊದಲ ಬಾರಿಗೆ ದೇಶದಲ್ಲಿ 8,000 ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದೆ. ಸದ್ಯ ದೇಶದ ದೈನಂದಿನ ಪಾಸಿಟಿವಿಟಿ ದರ ಶೇ 2.41ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಮತ್ತೆ ಏರಿಕೆಯಾಗಿದ್ದು, ಶನಿವಾರ 562 ಪ್ರಕರಣಗಳು ದೃಢಪಟ್ಟಿವೆ. ಆದರೆ, ಸೋಂಕು ದೃಢ ಪ್ರಮಾಣ ಇಳಿಕೆಯಾಗಿದ್ದು, ಶೇ 2.07ರಷ್ಟು ವರದಿಯಾಗಿವೆ. ಹತ್ತು ದಿನಗಳಿಂದ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಶುಕ್ರವಾರ 525, ಗುರುವಾರ 471 ಪ್ರಕರಣ ದೃಢಪಟ್ಟಿದ್ದವು. ದೃಢಪ್ರಮಾಣವು ಕ್ರಮವಾಗಿ ಶೇ 2.31ರಷ್ಟು ಮತ್ತು ಶೇ 2.14ರಷ್ಟಿತ್ತು. ಬೆಂಗಳೂರು ನಗರದಲ್ಲೇ ಶನಿವಾರ ಅತಿ ಹೆಚ್ಚಿನ 545 ಪ್ರಕರಣ ವರದಿಯಾಗಿವೆ. ಉಳಿದಂತೆ, ಮೈಸೂರಿನಲ್ಲಿ ನಾಲ್ಕು, ದಕ್ಷಿಣ ಕನ್ನಡದಲ್ಲಿ ಮೂರು, ಚಿತ್ರದುರ್ಗದಲ್ಲಿ ಎರಡು ಮತ್ತು ಬಾಗಲಕೋಟೆ, ಬೆಳಗಾವಿ, ಬೀದರ, ಧಾರವಾಡ, ಹಾಸನ, ತುಮಕೂರು, ಉಡುಪಿ, ಉತ್ತರ ಕನ್ನಡದಲ್ಲಿ ತಲಾ ಒಂದು ಪ್ರಕರಣ ದೃಢಪಟ್ಟಿವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 3,387ಕ್ಕೆ ಏರಿದೆ. ಇದರಲ್ಲಿ ಬೆಂಗಳೂರಿನಲ್ಲೇ 3,263 ಪ್ರಕರಣಗಳಿವೆ ಎಂದು ಆರೋಗ್ಯ ಇಲಾಖೆಯು ಮಾಹಿತಿ ನೀಡಿದೆ. ಒಂದು ದಿನದಲ್ಲಿ 27,123 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ.

ಮರು ಪರಿಷ್ಕರಣೆ ಮಾಡುವುದಾಗಿ ಭರವಸೆ ನೀಡಿದ್ದ ಸರ್ಕಾರ

ಶಾಲೆ ತಲುಪಿದ ಪರಿಷ್ಕೃತ ಪಠ್ಯಪುಸ್ತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕಗಳಲ್ಲಿರುವ ಆಕ್ಷೇಪಾರ್ಹ ಅಂಶಗಳು, ಗೊಂದಲಗಳಿಗೆ ಕಾರಣವಾದ ಪಠ್ಯ ಭಾಗವನ್ನು ಪರಿಶೀಲಿಸಿ ಮರು ಪರಿಷ್ಕರಣೆ ಮಾಡಲಾಗುವುದು ಎಂದು ಸರ್ಕಾರ ಹೇಳಿತ್ತು. ಏತನ್ಮಧ್ಯೆಯೇ ಶಾಲೆಗಳಿಗೆ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನೇ ಪೂರೈಕೆ ಮಾಡಲಾಗುತ್ತಿದೆ.

ಪರಿಷ್ಕರಿಸಿದ ಪಠ್ಯಪುಸ್ತಕಗಳಲ್ಲಿ ನಾಡು ಕಂಡ ದಾರ್ಶನಿಕರಿಗೆ ಅವಮಾನ ಮಾಡಲಾಗಿದೆ ಎಂಬ ಆರೋಪ ವ್ಯಕ್ತವಾಗಿತ್ತು. ವಿವಿಧ ಸಮುದಾಯಗಳ ಮಠಾಧೀಶರು, ಸಾಹಿತ್ಯ–ಶೈಕ್ಷಣಿಕ ವಲಯದ ಪ್ರಮುಖರು ಪರಿಷ್ಕೃತ ಪಠ್ಯಪುಸ್ತಕ ಸರಿಯಿಲ್ಲ; ಬದಲಾವಣೆ ಮಾಡಬೇಕು ಎಂದು ಆಗ್ರಹಿಸಿದ್ದರು.

ಪರಿಷ್ಕೃತ ಪಠ್ಯಪುಸ್ತಕ

ಈ ಬಗ್ಗೆ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು, ಆಕ್ಷೇಪಾರ್ಹ ಅಂಶಗಳಿದ್ದರೆ ಮತ್ತೆ ಪರಿಶೀಲನೆಗೆ ಒಳಪಡಿಸಿ ಯಾರಿಗೂ ನೋವಾಗದಂತೆ ಪರಿಷ್ಕರಿಸಲಾಗುವುದು ಎಂದಿದ್ದರು. ವಿವಾದಾಸ್ಪದವಾಗಿದ್ದ, 10 ನೇ ತರಗತಿಯ ಕನ್ನಡ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ಪೂರೈಸಲಾಗುತ್ತಿದೆ.

‘ಪರಿಷ್ಕೃತ ಪಠ್ಯಪುಸ್ತಕ ಶೇ 80ಕ್ಕೂ ಹೆಚ್ಚು ಮುದ್ರಣವಾಗಿದೆ. ಮುದ್ರಣವಾಗುತ್ತಿದ್ದಂತೆ ಶಾಲೆಗಳಿಗೆ ವಿತರಣೆ ಕಾರ್ಯವೂ ನಡೆಯುತ್ತಿದೆ. ಪರಿಷ್ಕೃತ ಪಠ್ಯಪುಸ್ತಕಗಳ ಮುದ್ರಣ ಕಾರ್ಯಸ್ಥಗಿತಗೊಳಿಸಿಲ್ಲ’ ಎಂದು ಕರ್ನಾಟಕ ಪಠ್ಯಪುಸ್ತಕ ಸಂಘದ ಮೂಲಗಳು ತಿಳಿಸಿವೆ.

‘ಮತ್ತೆ ಪಠ್ಯಪುಸ್ತಕಗಳ ಪರಿಷ್ಕರಣೆ ಕೈಗೊಳ್ಳಲು ಹೊಸ ಸಮಿತಿ ರಚಿಸುವ ಉದ್ದೇಶ ಇಲ್ಲ. ಸಾರ್ವಜನಿಕರು ಮತ್ತು ವಿವಿಧ ಸಂಘ–ಸಂಸ್ಥೆಗಳು ಸಲ್ಲಿಸುವ ಆಕ್ಷೇಪಗಳನ್ನು ವಿಷಯ ತಜ್ಞರು ಮತ್ತು ಶಿಕ್ಷಕರು ಪರಿಶೀಲಿಸಲಿದ್ದಾರೆ. ಈ ಉದ್ದೇಶಕ್ಕಾಗಿ ಇಬ್ಬರು ಹಿರಿಯ ಅಧಿಕಾರಿಗಳನ್ನು ಕರ್ನಾಟಕ ಪಠ್ಯಪುಸ್ತಕ ಸೊಸೈಟಿ ನೇಮಿಸಿದೆ. ಮರುಪರಿಷ್ಕರಣೆ ಪ್ರಕ್ರಿಯೆಯ ಉಸ್ತುವಾರಿಯನ್ನು ಈ ಅಧಿಕಾರಿಗಳು ಕೈಗೊಳ್ಳಲಿದ್ದಾರೆ. ಆ ಬಳಿಕ, ಒಪ್ಪಿತವಾದ ಭಾಗವನ್ನು ಮಕ್ಕಳಿಗೆ ಕಲಿಸುವಂತೆ ಪ್ರತ್ಯೇಕ ಸುತ್ತೋಲೆ ಸೂಚಿಸುವ ಬಗ್ಗೆಯೂ ಚರ್ಚೆ ನಡೆದಿದೆ.’ ಎಂದು ಹೆಸರು ಹೇಳಲು ಬಯಸದ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

‘ಈ ಮೂರೂ ಸಮಿತಿಗಳು (ರೋಹಿತ್ ಚಕ್ರತೀರ್ಥ, ಮುಡಂಬಡಿತ್ತಾಯ ಮತ್ತು ಬರಗೂರು ರಾಮಚಂದ್ರಪ್ಪ ಸಮಿತಿ) ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು ಸಾರ್ವಜನಿಕ ಅಭಿಪ್ರಾಯ ಆಧರಿಸಿ ಮರುಪರಿಷ್ಕರಿಸಲಾಗುವುದು. ಇದಕ್ಕಾಗಿ ಮೂರೂ ಸಮಿತಿಗಳು ಪರಿಷ್ಕರಿಸಿದ್ದ ಪಠ್ಯಗಳ ಕರಡನ್ನು ಎಲ್ಲರಿಗೂ ಲಭ್ಯವಾಗುವಂತೆ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು’ ಎಂದು ಬಿ.ಸಿ.ನಾಗೇಶ್ ತಿಳಿಸಿದ್ದರು.

#ಎಮ್‌ಆರ್‌ಪಿ ₹(ಎಲ್ಲಾ ತೆರಿಗೆಗಳೂ ಸೇರಿ). ಸೀಮಿತ ಅವಧಿಯ ಆಫರ್ ಆಯ್ದ ನಗರಗಳು ಮತ್ತು ಔಟ್‌ಲೆಟ್‌ಗಳಲ್ಲಿ ಮಾನ್ಯ. ಈ ಆಫರ್ ಇಲ್ಲದ ಪ್ಯಾಕ್ ಕೂಡ ಲಭ್ಯ.

ಯಲಹಂಕ ಉಪನಗರದಲ್ಲಿ ನಾಗಾರ್ಜುನ ಸಮೂಹಶಿಕ್ಷಣ ಸಂಸ್ಥೆಯು ನೂತನವಾಗಿ ಆರಂಭಿಸಿರುವ 'ನೋವಸ್' ಮಕ್ಕಳ ಆರಂಭಿಕ ಕಲಿಕಾ ಕೇಂದ್ರವನ್ನು ಚಿತ್ರನಟ ರಮೇಶ್ ಅರವಿಂದ್ ಉದ್ಘಾಟಿಸಿದರು. ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ, ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪೆನಿಯ ನಿರ್ದೇಶಕ ಜೆ.ವಿ.ರಂಗರಾಜು, ಶ್ರೀದೇವಿ ರಂಗರಾಜು, ಸೌಜನ್ಯಾ ಹಾಜರಿದ್ದರು

ನೋವಸ್ ಮಕ್ಕಳ ಆರಂಭಿಕ ಕಲಿಕಾ ಕೇಂದ್ರಕ್ಕೆ ಚಾಲನೆ

ಯಲಹಂಕ: 'ಮಕ್ಕಳು ಹೇಳುವುದನ್ನು ಆಲಿಸುವ, ಗೌರವಿಸುವ ಹಾಗೂ ಒಳ್ಳೆಯದನ್ನು ಪ್ರೋತ್ಸಾಹಿಸುವ ಗುಣವನ್ನು ಪೋಷಕರು ಬೆಳೆಸಿಕೊಳ್ಳಬೇಕು' ಎಂದು ನಟ ರಮೇಶ್ ಅರವಿಂದ್ ಹೇಳಿದರು.

ಯಲಹಂಕ ಉಪನಗರದಲ್ಲಿ ನಾಗಾರ್ಜುನ ಸಮೂಹಶಿಕ್ಷಣ ಸಂಸ್ಥೆಯು ನೂತನವಾಗಿ ಆರಂಭಿಸಿರುವ 'ನೋವಸ್' ಮಕ್ಕಳ ಆರಂಭಿಕ ಹಂತದ ಕಲಿಕಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಮಾತನಾಡಿ, 'ಅನುಭವಾತ್ಮಕ ಕಲಿಕೆಗೆ ನಾವು ಹೆಚ್ಚಿನ ಪ್ರೋತ್ಸಾಹ ನೀಡಬೇಕಾದ ಅಗತ್ಯವಿದ್ದು, ಪ್ರತಿಯೊಂದು ಮಕ್ಕಳು ಸೃಜನಾತ್ಮಕ ಗುಣಗಳನ್ನು ಹೊಂದಿರುತ್ತಾರೆ. ಅದಕ್ಕೆ ಸಾಮಾಜಿಕ ಪರಿಸರವು ಬಹಳ ಪ್ರಮುಖವಾಗಿದ್ದು, ಇಂತಹ ವಾತಾವರಣದಲ್ಲಿ ಹಲವಾರು ವಿಷಯಗಳನ್ನು ಕಲಿಯುತ್ತಾರೆ. ಅವರ ಕಲಿಕೆಯನ್ನು ನಾವೆಲ್ಲರೂ ಪ್ರೋತ್ಸಾಹಿಸಬೇಕು' ಎಂದು ತಿಳಿಸಿದರು

ಜೆ.ವಿ.ರಂಗರಾಜು, ಜೆ.ವಿ. ರಂಗರಾಜು, ಶ್ರೀದೇವಿ ರಂಗರಾಜು,ಸೌಜನ್ಯ ಹಾಜರಿದ್ದರು.

ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಗೆ ಗುತ್ತಿಗೆ

ವಿಮಾನ ನಿಲ್ದಾಣ ಮೆಟ್ರೊ ಕಾಮಗಾರಿ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದ ಮೆಟ್ರೊ ರೈಲು ಕಾಮಗಾರಿ ಚುರುಕು ಪಡೆದಿದ್ದು, ಮೊದಲ ಗರ್ಡರ್ ನಿರ್ಮಾಣ ಕಾಮಗಾರಿ ಆರಂಭವಾಗಿದೆ.

ಮೆಟ್ರೊ ರೈಲು ಮಾರ್ಗದ ಸಿವಿಲ್ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸಲು ಮುಂದಾಗಿರುವ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್), ಚಿಕ್ಕಜಾಲ ಬಳಿ ಮೊದಲ ಪಿಲ್ಲರ್ ನಿರ್ಮಾಣ ಕಾಮಗಾರಿಯನ್ನು ಮೇ 10ರಂದು ಆರಂಭಿಸಿತ್ತು. ಪಿಲ್ಲರ್‌ಗಳ ಮೇಲೆ ಅಳವಡಿಸುವ 'ಯು' ಆಕಾರದ ಗರ್ಡರ್ ನಿರ್ಮಾಣ ಕಾಮಗಾರಿಯನ್ನು ಶುಕ್ರವಾರ ಆರಂಭಿಸಿದೆ.

ಕೆ.ಆರ್.ಪುರ–ಹೆಬ್ಬಾಳ ಮಾರ್ಗದ ಮೂಲಕ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ 36.44 ಕಿ.ಮೀ. ಉದ್ದದ ಸಿವಿಲ್ ಕಾಮಗಾರಿಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಮೂರು ಪ್ಯಾಕೇಜ್‌ಗಳ ಗುತ್ತಿಗೆಯನ್ನು ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಪಡೆದುಕೊಂಡಿದೆ. ಈ ಮಾರ್ಗದ ವಯಡಕ್ಟ್ ಮತ್ತು ನಿಲ್ದಾಣಗಳಿಗೆ ಅಗತ್ಯ ಇರುವ 2.23 ಲಕ್ಷ ಚದರ ಮೀಟರ್ ಜಾಗದ ಪೈಕಿ 2.15 ಲಕ್ಷ ಚದರ ಮೀಟರ್ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ.

ಕೆ.ಆರ್.ಪುರದಿಂದ ಹೆಬ್ಬಾಳ ತನಕದ ಮಾರ್ಗಕ್ಕೆ ಮರಗಳ ಸ್ಥಳಾಂತರ ಆಗಬೇಕಿರುವುದರಿಂದ ಕಾಮಗಾರಿ ವಿಳಂಬವಾಗಿದೆ. ಹೆಬ್ಬಾಳದಿಂದ ವಿಮಾನ ನಿಲ್ದಾಣ ತನಕದ ಕಾಮಗಾರಿ ವೇಗವಾಗಿ ನಡೆಯುತ್ತಿದೆ.

ಟಿನ್ ಫ್ಯಾಕ್ಟರಿ ಬಳಿ ದೊಡ್ಡ ದೊಡ್ಡ ಕ್ರೇನ್‌ಗಳ ಸಹಾಯದಿಂದ ಉಕ್ಕಿನ ಗರ್ಡರ್ ಅಳವಡಿಕೆ ಮಾಡುತ್ತಿರುವುದು

ಉಕ್ಕಿನ ಗರ್ಡರ್ ಅಳವಡಿಕೆ

ಟಿನ್ ಫ್ಯಾಕ್ಟರಿ ಬಳಿ ನಿಲ್ದಾಣ ಕಾಮಗಾರಿಯೂ ಚುರುಕಿನಿಂದ ನಡೆಯುತ್ತಿದ್ದು, ಉಕ್ಕು ಮತ್ತು ಕಬ್ಬಿಣದಿಂದ ತಯಾರಿಸಿದ ಸುಮಾರು 150 ಟನ್ ತೂಕದ ಎರಡು ಗರ್ಡರ್‌ಗಳನ್ನು ಅಳವಡಿಸಲಾಯಿತು. ಸಾಮಾನ್ಯವಾಗಿ ದೊಡ್ಡ ರಸ್ತೆ ಅಥವಾ ಸೇತುವೆಗಳ ನಿರ್ಮಾಣದ ವೇಳೆ ಈ ರೀತಿಯ ಉಕ್ಕಿನ ಗರ್ಡರ್‌ಗಳನ್ನು ಅಳವಡಿಸಲಾಗುತ್ತದೆ. ಈ ಮಾರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಐಟಿಡಿ ಸಿಮೆಂಟೇಷನ್ ಇಂಡಿಯಾ ಕಂಪನಿಯು ಎ.ಎಸ್. ಕ್ರೇನ್ ಸರ್ವೀಸ್‌ನಿಂದ ದೊಡ್ಡ ಕ್ರೇನ್‌ಗಳನ್ನು ಪಡೆದು ಈ ಗರ್ಡರ್ ಅಳವಡಿಸಿತು.

ಸುದ್ದಿ 2 ನಿಮಿಷ

ತೃತೀಯ ಲಿಂಗಿಗಳ ವಸತಿ ಯೋಜನೆಗೆ 14ರಂದು ಚಾಲನೆ

ಬೆಂಗಳೂರು: ರಾಜ್ಯದಲ್ಲಿರುವ ತೃತೀಯ ಲಿಂಗಿಗಳ ಪ್ರಥಮ ವಸತಿ ಯೋಜನೆಗೆ ಕೆಂಗೇರಿ ಹೋಬಳಿಯ ಮಾಳಿಗೊಂಡನಹಳ್ಳಿಯಲ್ಲಿ ಜೂನ್ 14ರಂದು ಕೊಳೆಗೇರಿ ಅಭಿವೃದ್ಧಿ ಮಂಡಳಿ ಚಾಲನೆ ನೀಡಲಿದೆ.

'ವಸತಿ ಯೋಜನೆಯ ಅಡಿಗಲ್ಲು ಸಮಾರಂಭ 14ರಂದು ನಡೆಯಲಿದ್ದು, ವಸತಿ ಸಚಿವ ವಿ. ಸೋಮಣ್ಣ ನೆರವೇರಿಸಲಿದ್ದಾರೆ. ತೃತೀಯ ಲಿಂಗಿಗಳ ಬದುಕುವ ಹಕ್ಕು ಮತ್ತು ಅವರ ಜೀವನದ ಸುಧಾರಣೆಗೆ ಸಮತಾ ಸೈನಿಕ ದಳ ನಡೆಸಿದ ನಿರಂತರ ಹೋರಾಟಕ್ಕೆ ದೊರಕಿದ ಪ್ರಥಮ ಜಯ ಇದಾಗಿದೆ' ಎಂದು ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಡಾ.ಎಂ. ವೆಂಕಟಸ್ವಾಮಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ಸರ್ಕಾರ ಮಂಜೂರು ಮಾಡಿರುವ ಎರಡೂವರೆ ಎಕರೆ ಭೂಮಿಯಲ್ಲಿ ಸುಮಾರು 200 ಫಲಾನುಭವಿಗಳಿಗೆ ಪುನರ್ವಸತಿ ಕಲ್ಪಿಸಿದಂತಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಈ ಯೋಜನೆ ವಿಸ್ತರಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಈ ಹೊಸ ಗ್ರಾಮವನ್ನು 'ಮಂಗಳಗ್ರಾಮ' ಎಂದು ನಾಮಕರಣ ಮಾಡಲಾಗುವುದು. ಮಂಗಳಮುಖಿಯರ ಸಮಾವೇಶವೂ ಅದೇ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಮಂಗಳಮುಖಿಯರ ರಾಜ್ಯ ಘಟಕದ ಅಧ್ಯಕ್ಷೆ ಗಾಯತ್ರಿ, ಕಾರ್ಯದರ್ಶಿ ಸವಿತಾ ಇದ್ದರು.

'ಮಕ್ಕಳ ಬೆಳವಣಿಗೆಗೆ ಪೋಷಕರು, ಶಿಕ್ಷಕರು ಜವಾಬ್ದಾರರು'

ರಾಜರಾಜೇಶ್ವರಿ ನಗರ: 'ಬಾಲ್ಯದಲ್ಲಿಯೇ ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಚಿಂತನೆ ಹಾಗೂ ಮಾರ್ಗದರ್ಶನ ನೀಡಿದರೆ ಪ್ರತಿಭಾವಂತರಾಗಿ ಯಶಸ್ಸಿನ ಹಾದಿಯಲ್ಲಿ ನಡೆಯಲಿದ್ದಾರೆ' ಎಂದು ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ತಿಳಿಸಿದರು.

ಕೋಣನಕುಂಟೆಯ ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಭವ ಕಲಿಕೆಯ ಉದ್ಘಾಟಿಸಿ ಅವರು ಮಾತನಾಡಿದರು.

'ಕಲಿಕೆ ಎಂಬುದು ಹರಿಯುವ ನೀರು. ಮಕ್ಕಳ ಬೆಳವಣಿಗೆಗೆ ಪೋಷಕರು-ಶಿಕ್ಷಕರು ಜವಾಬ್ದಾರರು. ಮನೆಯಲ್ಲಿ ಮಕ್ಕಳ ಚಲನವಲನದ ಮೇಲೆ ನಿಗಾವಹಿಸಿ, ಉತ್ತಮ ದಾರಿ ತೋರುವ ಮೂಲಕ ಮಕ್ಕಳನ್ನು ದೇಶದ ಆಸ್ತಿಗಳನ್ನಾಗಿ ಮಾಡಬೇಕು' ಎಂದು ಕರೆ ನೀಡಿದರು.

ಸಿಲಿಕಾನ್ ಸಿಟಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಲ್.ರವಿ ಮಾತನಾಡಿ, 'ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರಕಿಸಿಕೊಡಬೇಕೆಂಬ ದೃಷ್ಟಿಯಿಂದ ನಮ್ಮ ಸಂಸ್ಥೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಿಕೊಂಡು ಕಲಿಕೆಯ ವಿಧಾನಗಳನ್ನು ಅನುಸರಿಸಲಾಗುತ್ತಿದೆ' ಎಂದರು. ಸಿಸಿಇ ಫಿನ್‌ಲ್ಯಾಂಡ್‌ನ ನಿರ್ದೇಶಕ ಹೇರಂಭ ಕುಲಕರ್ಣಿ ಮಾತನಾಡಿದರು. ಸಿಸಿಇ ಫಿನ್‌ಲ್ಯಾಂಡ್ ಶಿಕ್ಷಣ ನಾಯಕಿ ಸಿಮ್ರಾನ್ ಬಲ್ಲಾನಿ, ಪ್ರಾಂಶುಪಾಲರಾದ ಸುಮಾಲಿನಿ ಬಿ. ಸ್ವಾಮಿ, ಸಿಲಿಕಾನ್ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ಅಧ್ಯಕ್ಷ ಸಮೀರ ಸಿಂಹ ಇದ್ದರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 11 UBL 2022-23
ದಿನಾಂಕ: 06.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ –ಹುಬ್ಬಳ್ಳಿ:- ಎಲ್ಲಾ ಸೇವಾ ಕಟ್ಟಡಗಳು ಮತ್ತು ಎಸ್‌ಇ/ವರ್ಕ್ಸ್/ಎಸ್‌ಡಬ್ಲ್ಯೂ-2/ಹುಬ್ಬಳ್ಳಿ (ವಿಶೇಷ ಕೆಲಸ-11) ವ್ಯಾಪ್ತಿಯಲ್ಲಿರುವ ಪ್ರದೇಶ ಸೇರಿದಂತೆ ಹುಬ್ಬಳ್ಳಿ ನಿಲ್ದಾಣಕ್ಕೆ ವಿವಿಧ ನಿರ್ವಹಣೆ ಚಟುವಟಿಕೆಗಳು.	ರೂ. 1,23,07,610/-
2	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯ ಕೇಶ್ವಾಪುರ ಕಾಲೋನಿಯಲ್ಲಿ ರಸ್ತೆ ದುರಸ್ತಿ.	ರೂ. 29,99,746/-
3	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯಲ್ಲಿ ಗದಗ ರಸ್ತೆಯ ಎಡಭಾಗದ ಉಳಿದ ಕ್ವಾರ್ಟರ್ಸ್‌ಗೆ ಮೇಲ್ಛಾವಣಿಯ ಶೀಟಿಂಗ್ ದುರಸ್ತಿ.	ರೂ. 44,56,623/-
4	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯ ವಿನೋಭಾ ನಗರ, ಕೇಶ್ವಾಪುರ ಮತ್ತು ಹಳೆಯ ಆಸ್ಪತ್ರೆಯ ಕಾಂಪೌಂಡ್ ಕಾಲೋನಿಯಲ್ಲಿ ಅಂಡರ್ ಗ್ರೌಂಡ್ ಒಳಚರಂಡಿ ಮತ್ತು ತೆರೆದ ಒಳಚರಂಡಿ ಮಾರ್ಗಗಳ ದುರಸ್ತಿ.	ರೂ. 46,46,641/-
5	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯಲ್ಲಿ ಡೌನ್ ಚಾಲ್ ಮತ್ತು ಸಿಮೆಂಟ್ ಚಾಲ್ ಕಾಲೋನಿಯ ಸರ್ವಿಸ್ ರಸ್ತೆ ದುರಸ್ತಿ.	ರೂ. 48,67,332/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23-06-2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನೀಯರ್ / ಕೋ-ಆರ್ಡ್
ಹುಬ್ಬಳ್ಳಿ

PUB/144/AAV/PRB/SWR/2022-23

S.W.Railways SWRRLY SWRRLY

ಕುಡಿದು ಚಾಲನೆ: ಕಾರು ಜಪ್ತಿ

ಬೆಂಗಳೂರು: ಮದ್ಯದ ಅಮಲಿನಲ್ಲಿ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿ ಬೈಕ್‌ಗೆ ಡಿಕ್ಕಿ ಹೊಡೆದ ಆರೋಪದಡಿ ವಿಜಯ್ ಭಾರದ್ವಾಜ್ (30) ಎಂಬುವರ ಕಾರನ್ನು ಮಡಿವಾಳ ಸಂಚಾರ ಪೊಲೀಸರು ಜಪ್ತಿ ಮಾಡಿದ್ದಾರೆ.

'ಬಿಹಾರದ ವಿಜಯ್, ಎಂಬಿಬಿಎಸ್ ಪದವೀಧರ. ಕಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಎಂ.ಎಸ್ ವ್ಯಾಸಂಗ ಮಾಡುತ್ತಿದ್ದಾನೆ. ಕುಡಿದು ವಾಹನ ಚಲಾಯಿಸಿದ್ದಕ್ಕಾಗಿ ಕಾರು ಜಪ್ತಿ ಮಾಡಿ, ದಂಡ ಕಟ್ಟಲು ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಆರೋಪಿ ವಿಜಯ್, ಈ ಹಿಂದೆ ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಮಹಿಳೆ ಹಾಗೂ ಅವರ ಹೆಣ್ಣು ಮಕ್ಕಳಿದ್ದ ಕಾರು ಹಿಂಬಾಲಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಪ್ರಕರಣದಲ್ಲಿ ಬಂಧಿತನಾಗಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದ' ಎಂದೂ ತಿಳಿಸಿವೆ.

ಸಂತ್ರಸ್ತೆ 18 ವರ್ಷ ದಾಟಿದ್ದರೆ ಪಾಟಿ ಸವಾಲಿಗೆ ಅಭ್ಯಂತರವಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಸಂತ್ರಸ್ತ ಮಗುವನ್ನು ಮತ್ತೆ ಮತ್ತೆ ಪಾಟಿ ಸವಾಲಿಗೆ ಒಳಪಡಿಸಬಾರದು ಎಂಬ ನಿಯಮವಿದೆಯಾದರೂ, ಸಂತ್ರಸ್ತರಿಗೆ 18 ವರ್ಷ ತುಂಬಿದರೆ ಆಗ ಅವರನ್ನು ಮತ್ತೆ ಪಾಟಿ ಸವಾಲಿಗೆ ಒಳಪಡಿಸಲು ಯಾವುದೇ ಅಭ್ಯಂತರವಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಪೋಕ್ಸೊ ಪ್ರಕರಣವೊಂದರ ಸಂತ್ರಸ್ತೆಯನ್ನು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಕಲಂ 311ರ ಪ್ರಕಾರ ಮರು ವಿಚಾರಣೆಗೆ ಕರೆಸಿಕೊಳ್ಳಬೇಕು ಎಂದು ಕೋರಿ ಜಾಲಹಳ್ಳಿ ನಿವಾಸಿಯಾದ ಆರೋಪಿ ಮೊಹಮ್ಮದ್ ಅಲಿ ಅಕ್ಬರ್ (23) ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ವಜಾಗೊಳಿಸಿತ್ತು. ಈ ಆದೇಶವನ್ನು ಹೈಕೋರ್ಟ್ ನಲ್ಲಿ ಪ್ರಶ್ನಿಸಲಾಗಿತ್ತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪೋಕ್ಸೊ ಪ್ರಕರಣಗಳ ಸಂತ್ರಸ್ತರನ್ನು ಮತ್ತೆ ಮತ್ತೆ ನ್ಯಾಯಾಲಯಗಳಿಗೆ ಕರೆಸಿಕೊಂಡು ವಿಚಾರಣೆಗೆ ಒಳಪಡಿಸಬಾರದು ಎಂದು ಕಾಯ್ದೆಯ ಕಲಂ 33 (5) ಹೇಳುತ್ತದೆ. ಆದರೆ, ಈ ಪ್ರಕರಣದಲ್ಲಿ ಸಂತ್ರಸ್ತೆಯ ವಯಸ್ಸು 18 ದಾಟಿರುವ ಕಾರಣ ಸೆಕ್ಷನ್ 33 (5)ರ ಕಾಠಿಣ್ಯತೆ ದುರ್ಬಲಗೊಳ್ಳುತ್ತದೆ. ಆದ್ದರಿಂದ, ಆರೋಪಿಯ ಮನವಿಯಂತೆ ಸಂತ್ರಸ್ತೆಯನ್ನು ಪಾಟಿ ಸವಾಲಿಗೆ ಒಳಪಡಿಸಬಹುದು ಎಂದು ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: 'ಮೊಹಮ್ಮದ್ ಅಲಿ ನನ್ನ ಅಪ್ರಾಪ್ತ ವಯಸ್ಕ ಮಗಳ ಮೇಲೆ 2018ರ ಏಪ್ರಿಲ್ ನಲ್ಲಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂದು ಆರೋಪಿಸಿ ಸಂತ್ರಸ್ತೆಯ ತಾಯಿ ಪೊಲೀಸರಿಗೆ ದೂರು ನೀಡಿದ್ದರು.

ದೂರುದಾರ ಮಹಿಳೆ ಆರೋಪಿಯ ಸೋದರತ್ತೆ. ಪ್ರಕರಣ ದಾಖಲು ಮಾಡಿಕೊಂಡಿದ್ದ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ಸದ್ಯ ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ಏತನ್ಮಧ್ಯೆ, ಸಂತ್ರಸ್ತೆಯನ್ನು ಹೆಚ್ಚಿನ ಪಾಟಿ ಸವಾಲಿಗೆ ಒಳಪಡಿಸುವಂತೆ ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿತ್ತು.

ರೌಡಿ ಬಂಧನ

ಬೆಂಗಳೂರು: ಎದುರಾಳಿ ಹತ್ಯೆಗೆ ಸಂಚು ರೂಪಿಸಿ, ನಾಡ ಪಿಸ್ತೂಲ್ ಇಟ್ಟುಕೊಂಡು ಓಡಾಡುತ್ತಿದ್ದ ಆರೋಪದಡಿ ರೌಡಿ ಸೈಯದ್ ಸುಭಾನ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಡಿ.ಜೆ.ಹಳ್ಳಿ ಬಳಿಯ ಆದರ್ಶನಗರ ಮುಖ್ಯರಸ್ತೆಯಲ್ಲಿ ಜೂನ್ 10ರಂದು ಸುಭಾನ್ ಸುತ್ತಾಡುತ್ತಿದ್ದ. ನಾಡ ಪಿಸ್ತೂಲ್ ಇಟ್ಟುಕೊಂಡು ಎದುರಾಳಿ ಮೇಲೆ ಗುಂಡು ಹಾರಿಸಲೆಂದು ಕಾಯುತ್ತಿದ್ದ. ಈ ವೇಳೆ ಕಾರ್ಯಾಚರಣೆ ನಡೆಸಿ ರೌಡಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು. 'ಕೊಲೆ, ದರೋಡೆ, ಜೀವ ಬೆದರಿಕೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಸೈಯದ್ ಹೆಸರು, ಪುಲಿಕೇಶಿನಗರ ಠಾಣೆ ರೌಡಿ ಪಟ್ಟಿಯಲ್ಲಿದೆ' ಎಂದರು.

SSC BANK LTD.
ESTD : 1971

ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
SREE SUBRAMANYESWARA CO-OPERATIVE BANK LTD.,
RBI Licence No. UBD KA 550P

ಆಡಳಿತ ಕಛೇರಿ : 'ರಜತ ಭವನ', ನಂ. 106, ಆರ್.ವಿ. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು – 560 004.
ಫ್ಯಾಕ್ಸ್ : 080-41312650, ಇ–ಮೇಲ್ : sscbank@yahoo.com ವೆಬ್‌ಸೈಟ್ : www.subcobank.com

0% Processing Charges During Loan Mela

ಸಾಲ ಮೇಳ
(ಪ್ರಾರಂಭ ಜೂನ್ 15 ರಿಂದ ಜುಲೈ 31 ರವರೆಗೆ)

* Conditions Apply - After Concession of 1% for Regular Repayment of Loan Installments

ಜೂನ್–ಜುಲೈ 2022

ಸಾಲ ಸೌಲಭ್ಯಗಳ ಮೇಲಿನ ಬಡ್ಡಿ ದರಗಳು

ಕ್ರ. ಸಂ	ಸಾಲಗಳು	ವಿವರ	ಬಡ್ಡಿ ದರ* p.a.
1.	ಗೃಹ ಸಾಲ	ಅ) 25 ಲಕ್ಷದವರೆಗೆ ಆ) 25 ಲಕ್ಷ ಮೇಲ್ಪಟ್ಟು ಹಾಗೂ 50 ಲಕ್ಷದವರೆಗೆ ಇ) 50 ಲಕ್ಷ ಮೇಲ್ಪಟ್ಟು ಹಾಗೂ 70 ಲಕ್ಷದವರೆಗೆ	8.50% 9.00% 9.25%
2.	ವ್ಯಾಪಾರ ಸಾಲ	ಅ) ಅವಧಿ ಸಾಲ ಆ) ಎಂ.ಎಸ್.ಎಂ.ಇ. / ಎಸ್.ಎಂ.ಇ ಇ) ಓ.ಡಿ. / ಸಿ.ಸಿ. ಈ) ಸ್ವಂತ ಉದ್ಯಮಿಗಳಿಗೆ / ವೃತ್ತಿಪರರು	11.50% 11.00% 11.00% 11.50%
3.	ಅಡಮಾನ ಸಾಲ	ಅ) ರೂ. 50 ಲಕ್ಷದವರೆಗೆ ಆ) ರೂ. 50 ಲಕ್ಷ ಮೇಲ್ಪಟ್ಟು	12.00% 12.50%
4.	ಎಲ್‌ಐಸಿ /ಎನ್‌ಎಸ್‌ಸಿ /ಕೆವಿಪಿ ಮೇಲೆ ಸಾಲ	ರೂ. 5 ಲಕ್ಷದವರೆಗೆ ಅಥವಾ ಶೇ. 75 ರಷ್ಟು ಸರೆಂಡರ್ / ಮುಖ ಬೆಲೆಯ ಮೇಲೆ	13.00%
5.	ಚಿನ್ನಾಭರಣ ಸಾಲ	ಪ್ರತಿ ಗ್ರಾಂ ಗೆ, ರೂ.3200/- ರಂತೆ (22 ಕ್ಯಾರೆಟ್). 10 ಲಕ್ಷದ ವರೆಗೆ (ಗರಿಷ್ಠ ಮಿತಿ)	8.00% & 9.00%

- No Hidden Charges - Simple Hassle Free Loan Procedures - Quick Documentation - Quick Disbursal of the Loan

ಠೇವಣಿಗಳ ಮೇಲಿನ ಬಡ್ಡಿ ದರಗಳು

ಕ್ರ.ಸಂ.	ಹೂಡಿಕೆಗಳು	ಸಾಮಾನ್ಯ	ಹಿರಿಯ ನಾಗರೀಕರಿಗೆ
1	30 ದಿನಗಳಿಂದ 180 ದಿನಗಳ ವರೆಗೆ	5.25%	5.25%
2	181 ದಿನಗಳಿಂದ 364 ದಿನಗಳ ವರೆಗೆ	5.75%	5.75%
3	1 ವರ್ಷ (365 ದಿನಗಳು)	6.75%	7.25%
4	1 ವರ್ಷ ಮೇಲ್ಪಟ್ಟು ಮತ್ತು 3 ವರ್ಷದೊಳಗೆ	6.25%	6.75%
5	3 ವರ್ಷ ಮತ್ತು ಮೇಲ್ಪಟ್ಟು	6.50%	7.00%

ಶಾಖೆಗಳು ಮತ್ತು ದೂರವಾಣಿ ಸಂಖ್ಯೆ

ವಿಶ್ವೇಶ್ವರಪುರಂ : Ph : 22422461/3, 26500879, 26622462, 9449890085, 9880002159
ಅವೆನ್ಯೂ ರಸ್ತೆ : Ph : 22262722, 22281261, 22260043, 9945849501, 9019611277
ವಿಜಯನಗರ : Ph : 23400993, 23206878, 23147896, 9916874762, 8618495350
ಸಬ್ರಮಣ್ಯನಗರ : Ph : 23321252, 23426677, 23322570, 7892594004, 9343734282
ಪದ್ಮನಾಭನಗರ : Ph : 26694660, 26797274, 9886039611, 9900709016
ಕಾಚರಕನಹಳ್ಳಿ : Ph : 25490999, 25487147, 9980206279, 7899346726
ಯಶವಂತಪುರ : Ph : 22378136/137, 9886765180, 9880511163
ನಾಗರಭಾವಿ : Ph : 23183787/788, 9945974578, 9591311499
ಕೋಣನಕುಂಟೆ : Ph : 26320086/87, 9019908995, 8123144544

ಸಂಕ್ಷಿಪ್ತ ಸುದ್ದಿ

ಕದ್ದ ವಾಹನದಲ್ಲಿ ಸುತ್ತಾಡಿ ಸುಲಿಗೆ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಹಾಗೂ ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಜೆ.ಸಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಿವಾಜಿನಗರದ ಸಯ್ಯದ್ ನಜೀಮ್ ಅಲಿಯಾಸ್ ದನಿ (23) ಹಾಗೂ ಸಯ್ಯದ್ ಅಲಿ (26) ಬಂಧಿತರು. ಇವರಿಂದ ₹ 5.95 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನ ಹಾಗೂ 5 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಬೆನ್ಸನ್ ಅಡ್ಡ ರಸ್ತೆಯಲ್ಲಿ ಮೇ 23ರಂದು ವ್ಯಕ್ತಿಯೊಬ್ಬರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು.

ವಂಚನೆ: ದೆಹಲಿಯಲ್ಲಿ ಆರೋಪಿ ಬಂಧನ

ಬೆಂಗಳೂರು: ಓಎಲ್‌ಎಕ್ಸ್ ಜಾಲತಾಣದಲ್ಲಿ ಲ್ಯಾಪ್‌ಟಾಪ್ ಮಾರಾಟದ ಜಾಹೀರಾತು ಪ್ರಕಟಿಸಿ, ಸಾರ್ವಜನಿಕರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪಿ ಅಮನ್‌ಕುಮಾರ್(20) ಎಂಬಾತನನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

'ದೆಹಲಿಯ ಅಮನ್‌ಕುಮಾರ್, ನಗರದ ನಿವಾಸಿಯೊಬ್ಬರಿಂದ ₹72 ಸಾವಿರ ಪಡೆದು ವಂಚಿಸಿದ್ದ. ತನಿಖೆ ಕೈಗೊಂಡು ಆರೋಪಿಯನ್ನು ದೆಹಲಿಯಲ್ಲಿ ಬಂಧಿಸಿ, ನಗರಕ್ಕೆ ಕರೆತರಲಾಗಿದೆ. ಈತನಿಂದ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಓಎಲ್‌ಎಕ್ಸ್ ಜಾಲತಾಣದಲ್ಲಿ ಖಾತೆ ತೆರೆದಿದ್ದ ಆರೋಪಿ, 'ಮ್ಯಾಕ್ ಲ್ಯಾಪ್ ಟಾಪ್ ಮಾರಾಟಕ್ಕಿದೆ' ಎಂಬುದಾಗಿ ಫೋಟೊ ಸಮೇತ ಜಾಹೀರಾತು ಪ್ರಕಟಿಸಿದ್ದ. ಅದನ್ನು ನೋಡಿದ್ದ ದೂರುದಾರ, ಆರೋಪಿ ಮೊಬೈಲ್‌ಗೆ ಕರೆ ಮಾಡಿ ಮಾತುಕತೆ ನಡೆಸಿದ್ದ.'

'₹1.50 ಲಕ್ಷ ಬೆಲೆಯ ಲ್ಯಾಪ್‌ಟಾಪ್‌ನ್ನು ಕಡಿಮೆ ಬೆಲೆಗೆ ಮಾರುವುದಾಗಿ ಆರೋಪಿ ಹೇಳಿದ್ದ. ಮುಂಗಡವಾಗಿ ಹಣ ಪಾವತಿಸಿದರೆ, ಕೋರಿಯರ್ ಮೂಲಕ ಲ್ಯಾಪ್‌ಟಾಪ್ ಕಳುಹಿಸುವುದಾಗಿ ತಿಳಿಸಿದ್ದ. ಇದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 75 ಸಾವಿರ ನೀಡಿದ್ದರು. ಹಣ ಪಡೆದಿದ್ದ ಆರೋಪಿ, ಕೋರಿಯರ್ ಕಳುಹಿಸಿದ್ದ. ಆದರೆ, ಅದರಲ್ಲಿ ಲ್ಯಾಪ್ ಟಾಪ್ ಇರಲಿಲ್ಲ. ಅವಾಗಲೇ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

ಗರ್ಭ ಧರಿಸಿದ್ದ ಹಸು ಕದ್ದು ಹತ್ಯೆ: ಇಬ್ಬರ ಬಂಧನ

ಬೆಂಗಳೂರು: ಹಸು ಕದ್ದು ಹತ್ಯೆ ಮಾಡಿದ ಆರೋಪದಡಿ ಇಬ್ಬರನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. 'ಸೈಯದ್ ಬರ್ಕತ್ ಹಾಗೂ ಇಮ್ರಾನ್ ಪಾಷಾ ಬಂಧಿತರು. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ಸುಹೈಲ್ ಎಂಬಾತ ತಲೆಮರೆಸಿಕೊಂಡಿದ್ದಾನೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

'ಹೆಣ್ಣೂರು ಠಾಣೆ ವ್ಯಾಪ್ತಿಯ ಎಚ್‌ಬಿಆರ್ ಬಡಾವಣೆಯಲ್ಲಿ ಜೂನ್ 7ರಂದು ಆರೋಪಿಗಳು ಆಟೊದಲ್ಲಿ ಹೊರಟಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ, ಆಟೊದ ಹೆಡ್‌ಲೈಟ್ ಇಲ್ಲದಿರುವುದನ್ನು ಗಮನಿಸಿದ್ದರು. ಅನುಮಾನಗೊಂಡು ಆಟೊ ನಿಲ್ಲಿಸಲು ಮುಂದಾಗಿದ್ದರು. ಆದರೆ, ಆರೋಪಿಗಳು ಪರಾರಿಯಾಗಲು ಯತ್ನಿಸಿದ್ದರು. ಬೆನ್ನಟ್ಟಿದ್ದ ಸಿಬ್ಬಂದಿ, ಆಟೊ ಅಡ್ಡಗಟ್ಟಿದ್ದರು.' 'ಬರ್ಕತ್ ಹಾಗೂ ಇಮ್ರಾನ್ ಪಾಷಾ ಸಿಬ್ಬಂದಿ ಕೈಗೆ ಸಿಕ್ಕಿಬಿದ್ದರು. ಸುಹೈಲ್ ಓಡಿಹೋದ. ಆಟೊದಲ್ಲಿ ಪರಿಶೀಲನೆ ನಡೆಸಿದಾಗ, ಹಸುವಿನ ಮಾಂಸ ಇರುವುದು ಗೊತ್ತಾಯಿತು' ಎಂದೂ ಹೇಳಿದರು.

ಹೊಟ್ಟೆಯಲ್ಲಿತ್ತು ಕರು: 'ಗರ್ಭ ಧರಿಸಿದ್ದ ಹಸು, ಹೆಣ್ಣೂರು ಬಳಿಯ ತೋಪಿನಲ್ಲಿ ಮೇಯುತ್ತಿತ್ತು. ಅದನ್ನು ಕದ್ದಿದ್ದ ಆರೋಪಿಗಳು, ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಹತ್ಯೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಮಾಂಸ ಹಾಗೂ ಚರ್ಮ ಬೇರ್ಪಡಿಸಿದ್ದ ಆರೋಪಿಗಳು, ಅದನ್ನು ಮಾರಲು ಹೊರಟಿದ್ದಾಗಲೇ ಸಿಕ್ಕಿಬಿದ್ದರು. ಹಸುವಿನ ಹೊಟ್ಟೆಯಲ್ಲಿ ಕರು ಇತ್ತು. ಅದರ ಮೃತದೇಹವನ್ನೂ ಆರೋಪಿಗಳು ಬೇರ್ಪಡಿಸಿಟ್ಟಿದ್ದರು' ಎಂದೂ ತಿಳಿಸಿದರು. 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆಯಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿದರು.

ನಗರದಲ್ಲಿ ಇಂದು

ಭರತ ನಾಟ್ಯ ತರಬೇತಿ ಶಿಬಿರ: ಉದ್ಘಾಟನೆ: ಶಿವರುದ್ರಪ್ಪ, ಅಧ್ಯಕ್ಷತೆ: ಗೋಪಿನಾಥ್, ಉಪಸ್ಥಿತಿ: ಕಿಕ್ಕೇರಿ ಕೃಷ್ಣಮೂರ್ತಿ, ಶರವಣ ಪಿಳ್ಳೈ, ಗೋಪಾಲ್.ಜಿ, ಅರುಣ.ಎಂ.ಪಿ, ಆಯೋಜಕರು: ದೇವಾದೇವಿ ಕಲಾನಿಕೇತನ, ಸ್ಥಳ: ನೃತ್ಯಶ್ರೀ ಕಲಾಮಂದಿರ, ನಂ.217, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಮರಿಯಮ್ಮ ಗುಡಿ ಬೀದಿ, ಕೃಷ್ಣಯ್ಯನ ಪಾಳ್ಯ, ಎನ್‌ಜಿಇಎಫ್ ಹಿಂಭಾಗ, ಇಂದಿರಾನಗರ, ಬೆಳಿಗ್ಗೆ: 9

ವಚನ ಗಾಯನ–3 ಸಮಾರೋಪ ಸಮಾರಂಭ: ಅಧ್ಯಕ್ಷತೆ: ಅಣ್ಣಪ್ಪ ಬೆಳ್ಳೆ, ಉಪಸ್ಥಿತಿ: ವಿನಯ ಗುರೂಜಿ, ಎಸ್. ಪಿನಾಕಪಾಣಿ, ಈರಯ್ಯ ಚಿಕ್ಕಮಠ, ಆಯೋಜಕರು: ಪ್ರಪುಣ್ಯಾ ಸಂಗೀತ ಶಾಲೆ ಮತ್ತು ವಚನ ಜ್ಯೋತಿ ಬಳಗ, ಸ್ಥಳ: ಮುನೇಶ್ವರ ಸ್ವಾಮಿ ದೇವಸ್ಥಾನ, ಆಲದ ಮರ ಆವರಣ, ಹಂಪಿನಗರ, ವಿಜಯನಗರ, ಬೆಳಿಗ್ಗೆ: 9

ಪಿಯು ಪ್ರಥಮ ವರ್ಷದ ಉದ್ಘಾಟನೆ ಮತ್ತು ಅಗ್ರ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ, ಉಪಸ್ಥಿತಿ: 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಅಧ್ಯಕ್ಷತೆ: ಕುಲಪತಿ ಡಾ.ಜೆ. ಸೂರ್ಯಪ್ರಸಾದ್, ಆಯೋಜಕರು: ಪಿಇಎಸ್ ಪಿಯು ಕಾಲೇಜು, ಸ್ಥಳ: ಎಂ.ಆರ್.ಡಿ ಸಭಾಂಗಣ, ಹೊಸಕೆರೆಹಳ್ಳಿ, ಬೆಳಿಗ್ಗೆ: 9.30

ಉದಯಭಾನು ಕಲಾ ಸಂಘದ 58ನೇ ಸಂಸ್ಥಾಪನಾ ದಿನಾಚರಣೆ, 272ನೇ ನೇತ್ರ ತಪಸಣಾ ಶಿಬಿರ ಮತ್ತು 27ನೇ ಫಿಸಿಯೊಥೆರಪಿ ಕಾರ್ಯಕ್ರಮಗಳ ಉದ್ಘಾಟನೆ: ಉದ್ಘಾಟನೆ: ಡಾ.ಶ್ರೀಹರ್ಷ ನಾಗರಾಜ್, ಉಪಸ್ಥಿತಿ: ರಾಮೇಗೌಡ, ಮಲ್ಲಾರಿಗೌಡ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜಕರು: ಉದಯಭಾನು ಕಲಾ ಸಂಘ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಬೆಳಿಗ್ಗೆ: 10

'ಶ್ರದ್ಧಾ ಸುಮನ್': ಅತಿಥಿ: ವಿದುಷಿ ಸಾಸ್ವತಿ ಸೇನ್, ಉಪಸ್ಥಿತಿ: ಗುರು ಚೇತನಾ ಜಾಲನ್, ಸೋವಿಕ್ ಚಕ್ರವರ್ತಿ, ರೇಷ್ಮಾ ಅನಂತಪುರಕರ್, ಆಯೋಜಕರು: ರೇಷ್ಮಾ ಅನಂತಪುರಕರ್ ಮತ್ತು ವಿದ್ಯಾರ್ಥಿಗಳು, ಸ್ಥಳ: ಡಾ.ಸಿ. ಅಶ್ವತ್ಥ ಸಭಾಂಗಣ, ಎನ್.ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ:10.30

ಪ್ರೊ.ಕೆ.ಟಿ. ಪಾಂಡುರಂಗಿ ಸ್ಮಾರಕ ದತ್ತಿ ಉಪನ್ಯಾಸ: ಅಧ್ಯಕ್ಷತೆ: ಡಾ.ಜಯಂತಿ ಮನೋಹರ್, ಉಪನ್ಯಾಸ: ಡಾ.ಜಿ.ಬಿ. ಹರೀಶ್, ವಿಷಯ: ಭಾರತೀಯ ತಂತ್ರ ದರ್ಶನ, ಆಯೋಜಕರು: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, 2ನೇ ಮಹಡಿ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ: 11

ತಂದೆಯಂದಿರ ನೆನಪು ಕವಿಗೋಷ್ಠಿ–ಗೀತಗಾಯನ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮ: ಪ್ರಶಸ್ತಿ ಪ್ರದಾನ: ಶಾಂತಲಾ ಸುರೇಶ್, ಅಧ್ಯಕ್ಷತೆ: ಬಿ.ಶೃಂಗೇಶ್ವರ್, ಉಪಸ್ಥಿತಿ: ವೈ.ಜ್ಞಾನಮೂರ್ತಿ, ಬೆಮೆಲ್ ಸೆಲ್ವಕುಮಾರ್, ಕುವರ ಯಲ್ಲಪ್ಪ, ಆಯೋಜಕರು: ಸಮ್ಮಿಲನ ಕಲೆ ಸಾಹಿತ್ಯ ಸಾಂಸ್ಕೃತಿಕ ವೇದಿಕೆ, ಸ್ಥಳ: ಕೆನ್ ಕಲಾಶಾಲೆ, ಅಂಚೆ ಕಚೇರಿ ಪಕ್ಕ, ಶೇಷಾದ್ರಿಪುರ, ಬೆಳಿಗ್ಗೆ: 11.30

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪಿಂಚಣಿದಾರರ ಸಂಘದ ಬೆಳ್ಳಿ ಮಹೋತ್ಸವ, ಅತಿಥಿಗಳು: ಸುಮಲತಾ ಅಂಬರೀಷ್, ಅಧ್ಯಕ್ಷತೆ: ಕೆ.ಎನ್. ಶ್ರೀನಿವಾಸ ರಾವ್, ಉಪಸ್ಥಿತಿ: ಡಾ.ಅಲಿ ಖ್ವಾಜಾ, ಡಾ.ಸಿ.ಆರ್. ಚಂದ್ರಶೇಖರ್, ಆಯೋಜಕರು: ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪಿಂಚಣಿದಾರರ ಸಂಘ, ಸ್ಥಳ: ಶಿಕ್ಷಕರ ಸದನ, ಜಿಲ್ಲಾ ಕಚೇರಿ ರಸ್ತೆ, ಕಾವೇರಿ ಭವನದ ಎದುರು, ಮೈಸೂರು ಬ್ಯಾಂಕ್ ವೃತ್ತದ ಹತ್ತಿರ, ಮಧ್ಯಾಹ್ನ: 3

ಶ್ರಮಜೀವಿ ಮದರ್ ತೆರೇಸಾ ದತ್ತಿ ಸಂಸ್ಥೆ 5ನೇ ವಾರ್ಷಿಕೋತ್ಸವ: ನೇತೃತ್ವ: ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಉದ್ಘಾಟನೆ: ಸದಾನಂದಗೌಡ, ಅಧ್ಯಕ್ಷತೆ: ಎ.ಹೃದಯರಾಜ್, ಆಯೋಜಕರು: ಶ್ರಮಜೀವಿ ಮದರ್ ತೆರೇಸಾ ದತ್ತಿ ಸಂಸ್ಥೆ, ಸ್ಥಳ: ಯಂಗ್ ಸ್ಕಾಲರ್ ಶಾಲೆಯ ಆವರಣ, ವಿ. ನಾಗೇನಹಳ್ಳಿ, ಸಂಜೆ: 5

ಅನುನಿತ್ಯಾ

ಅನುನಿತ್ಯಾ ರಂಗಪ್ರವೇಶ: ಪ್ರಸ್ತುತಿ: ಅನುನಿತ್ಯಾ ಪಾರ್ಥಸಾರಥಿ, ಉಪಸ್ಥಿತಿ: ಡಿ.ಕೆ. ವಸಂತ ಲಕ್ಷ್ಮಿ, ಡಾ.ಎಸ್.ಎನ್. ಸುಶೀಲಾ, ಡಾ.ಅಶ್ವತ್ಥ ಹರಿತಾಸ್, ಆಯೋಜಕರು: ಕನಕ ಪ್ರಿಯಾ ನಾಟ್ಯ ಕಲಾ ಕೇಂದ್ರ ಟ್ರಸ್ಟ್, ಸ್ಥಳ: ಸೇವಾ ಸದನ, 14ನೇ ಅಡ್ಡ ರಸ್ತೆ ಮಲ್ಲೇಶ್ವರ, ಸಂಜೆ: 5

ಸ್ವರ ಸಂಧ್ಯಾ: ಜುಗಲ್ ಬಂದಿ ಗಾಯನ: ಸಂಯುಕ್ತಾ ಅಮರನಾಥ್ ಮತ್ತು ಅಸ್ರಿತಾ ಸಾತೆನಗೇರಿ, ಗಾಯನ: ಮನು ಶ್ರೀವಾಸ್ತವ, ಹಾರ್ಮೋನಿಯಂ: ಮಧುಸೂದನ, ತಬಲಾ: ಕಾರ್ತಿಕ್ ಭಟ್ಟ, ತಬಲಾ ಸೋಲೋ: ಇಶಾನ್ ಘೋಷ, ಹಾರ್ಮೋನಿಯಂ– ಲೆಹರಾ ಸತೀಶ ಕೊಳ್ಳಿ, ಆಯೋಜಕರು: ಸಪ್ತಕ, ಸ್ಥಳ: ಡಾ.ಸಿ.ಅಶ್ವತ್ಥ ಕಲಾ ಭವನ, ಎನ್.ಎರ್. ಕಾಲೊನಿ, ಬಸವನಗುಡಿ, ಸಂಜೆ: 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಮನ್ವಿತಾ ಬಾಲಾಜಿ, ಉಪಸ್ಥಿತಿ: ಆನೂರು ಅನಂತ್ ಕೃಷ್ಣ ಶರ್ಮಾ, ಶುಭಾ ಧನಂಜಯ್ಯ, ಮೈಸೂರು.ಎಂ.ನಾಗರಾಜ, ವಿದುಷಿ ವಾಣಿ ಸತೀಶ, ದೀಪಾ ಶ್ರೀಧರ, ಆಯೋಜಕರು: ನಿತ್ಯಾ ನಿಕೇತನ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, 8ನೇ ಬ್ಲಾಕ್ ಜಯನಗರ, ಸಂಜೆ: 6

ಶ್ರೀಪಾದರಾಜರ ಆರಾಧನಾ ಮಹೋತ್ಸವ: ಗಾಯನ: ವಿದ್ವಾನ್ ಕೊವಿಲ್‌ಅಡಿ ಮಧ್ವಪ್ರಸಾದ್, ಶ್ರೀರಂಗ, ಪಿಟೀಲು: ವಿದ್ವಾನ್ ವೆಂಕಟೇಶ್ ಜೋಶಿಯಾರ್, ಮೃದಂಗ: ವಿದ್ವಾನ್ ಎನ್.ವಾಸುದೇವ, ಘಟ ವಾದ್ಯ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜಕರು: ಸಮೀರ ಸಮಯ ಸಂಜೀವಿನಿ ಸಂಸತ್ ಪ್ರತಿಷ್ಠಾನ, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, 38ನೇ ಅಡ್ಡರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ: 5.30

ಈದ್ಗಾ ಮೈದಾನ: ಬಿಬಿಎಂಪಿ ಅಧಿಕಾರಿಗಳು ಮತ್ತು ಸ್ಥಳೀಯರ ನಡುವೆ ಮಾತಿನ ಚಕಮಕಿ

ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಮುಂದಾಗಿದ್ದ ಬಿಬಿಎಂಪಿ ಅಧಿಕಾರಿಗಳು ಮತ್ತು ಸ್ಥಳೀಯರ ನಡುವೆ ಶನಿವಾರ ಮಾತಿನ ಚಕಮಕಿ ನಡೆಯಿತು.

ಈದ್ಗಾ ಮೈದಾನದ ಆಸ್ತಿ ಮಾಲೀಕತ್ವ ವಿವಾದ ಭುಗಿಲೆದ್ದಿರುವ ಬೆನ್ನಲ್ಲೇ ಪೊಲೀಸರ ಮನವಿ ಮೇರೆಗೆ ಮೈದಾನದ ಸುತ್ತ 12 ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಬಿಬಿಎಂಪಿ ಮುಂದಾಗಿತ್ತು. ಕಾಮಗಾರಿ ನಡೆಯುತ್ತಿರುವುದನ್ನು ಗಮನಿಸಿದ ಸ್ಥಳೀಯರು, ಸ್ಥಳಕ್ಕೆ ಬಂದು ವಿರೋಧ ವ್ಯಕ್ತಪಡಿಸಿದರು.

‘ಪೊಲೀಸರ ಮನವಿ ಮೇರೆಗೆ ಅಳವಡಿಕೆ ಮಾಡಲಾಗುತ್ತಿದೆ’ ಎಂದು ಸಮಜಾಯಿಷಿ ನೀಡಿದ ಪಾಲಿಕೆ ಸಹಾಯಕ ಎಂಜಿನಿಯರ್ ಉಮೇಶ್ ಅವರನ್ನು ತರಾಟೆಗೆ ತೆಗೆದುಕೊಂಡ ಸ್ಥಳೀಯರು, ‘ಇಷ್ಟು ದಿನ ಇಲ್ಲದ ಸಿಸಿಟಿವಿ ಕ್ಯಾಮೆರಾಗಳನ್ನು ಈಗ ಅಳವಡಿಕೆ ಮಾಡವುದರ ಉದ್ದೇಶ ಏನು’ ಎಂದು ಪ್ರಶ್ನಿಸಿದರು.

‘ಬಿಬಿಎಂಪಿ ಆಟದ ಮೈದಾನದಲ್ಲಿ ಬೇರೆ ಕಾರ್ಯಕ್ರಮಗಳಿಗೂ ಅವಕಾಶ ನೀಡಲು ಕೋರಿದ ಕೂಡಲೇ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಲಾಗುತ್ತಿದೆ. ಬಿಬಿಎಂಪಿ ಮತ್ತು ಪೊಲೀಸರು ಮುಸ್ಲಿಮರ ಪರವಾಗಿ ಕೆಲಸ ಮಾಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಬಲ್ ಅಳವಡಿಕೆಗೆ ಗುಂಡಿ ತೆಗೆಯುತ್ತಿದ್ದ ಜೆಸಿಬಿ ಕೆಲಸಕ್ಕೆ ಅಡ್ಡಿ ಪಡಿಸಿದರು. ಇದನ್ನು ತಡೆದ ಪೊಲೀಸರ ವಿರುದ್ಧವೂ ಸ್ಥಳೀಯರು ಮಾತಿನ ಚಕಮಕಿಗೆ ಇಳಿದರು.

‘ಸಿಸಿಟಿವಿ ಅಳವಡಿಕೆ ಮಾಡಲು ಬಿಬಿಎಂಪಿಯಿಂದ ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದೆಯೇ’ ಎಂದು ಪ್ರಶ್ನಿಸಿದರು. ಕಾರ್ಯಾದೇಶ ಇಲ್ಲದೆ ಕಾಮಗಾರಿ ನಿರ್ವಹಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಕಾಮಗಾರಿ ಸ್ಥಗಿತಗೊಳಿಸಿ ಸ್ಥಳೀಯರನ್ನು ಪೊಲೀಸರು ಸಮಾಧಾನಪಡಿಸಿದರು.

ಮುಖ್ಯಾಂಶಗಳು
- ಪೊಲೀಸರು ಮುಸ್ಲಿಮರ ಪರ: ಸ್ಥಳೀಯರ ಆರೋಪ
- ಕೇಬಲ್ ಅಳವಡಿಕೆಗಾಗಿ ಗುಂಡಿ ತೆಗೆಯುವುದಕ್ಕೆ ಅಡ್ಡಿ
- ಕಾಮಗಾರಿ ಸ್ಥಗಿತಗೊಳಿಸಿದ ಸಿಬ್ಬಂದಿ

ಈದ್ಗಾ ಮೈದಾನದಲ್ಲಿ ಪೊಲೀಸರೊಂದಿಗೆ ಸ್ಥಳೀಯರು ಮಾತಿನ ಚಕಮಕಿ ನಡೆಸಿದರು — ಪ್ರಜಾವಾಣಿ ಚಿತ್ರ

ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್ ವತಿಯಿಂದ ನೀಡುವ ‘ಸಾಲು ಮರದ ತಿಮ್ಮಕ್ಕ ನ್ಯಾಷನಲ್ ಗ್ರೀನರಿ ಅವಾರ್ಡ್’ 2020–21 ಮತ್ತು 2022ನೇ ಸಾಲಿನ ಪ್ರಶಸ್ತಿಗಳಿಗೆ ನಾಮನಿರ್ದೇಶನ ಮತ್ತು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿಯು ಎರಡು ವಿಭಾಗಗಳನ್ನು ಹೊಂದಿದ್ದು, ನಗದು, ಬೆಳ್ಳಿ ಪದಕ ಮತ್ತು ಫಲಕವನ್ನು ಒಳಗೊಂಡಿದೆ. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನವಾಗಿದೆ.

ಮಾಹಿತಿಗಾಗಿ: 7090511118, 9845847962

ಪ್ರಶಸ್ತಿ ಪತ್ರ ಪ್ರದಾನ

‘ನಿನಾದ’ ಸಂಸ್ಕೃತಿ ಕಲಾ ಕೇಂದ್ರವು ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ‘ಸವಿನಾದೋತ್ಸವ’ದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ವಿತರಿಸಲಾಯಿತು. ದಿನೇಶ್ ಗುರೂಜಿ, ಶಿಕ್ಷಣ ತಜ್ಞೆ ಡಾ.ಗೀತಾ ರಾಮಾನುಜಮ್, ರಾಮಚಂದ್ರ, ಪ್ರೊ.ಜಯರಾಮ, ಡಾ.ಮಂಜುನಾಥ್, ಹಿರಿಯ ಪತ್ರಕರ್ತ ಸುಧೀಂದ್ರ ರಾವ್, ಹರೀಶ್ ನರಸಿಂಹ ಹಾಜರಿದ್ದರು - ಪ್ರಜಾವಾಣಿ ಚಿತ್ರ

ರಾಮಲಿಂಗಾರೆಡ್ಡಿ ಆಕ್ರೋಶ
‘ಚಕ್ರತೀರ್ಥ ವಿಕೃತ ಮನುಷ್ಯ’

ಬೆಂಗಳೂರು: ‘ಯಾವುದೇ ಅರ್ಹತೆಯಿಲ್ಲದ ರೋಹಿತ್ ಚಕ್ರತೀರ್ಥ ಎಂಬ ವ್ಯಕ್ತಿಗೆ ಬಿಜೆಪಿ ಸರ್ಕಾರ ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಜವಾಬ್ದಾರಿ ನೀಡಿದೆ. ಪಠ್ಯ ಪರಿಷ್ಕರಣೆ ನೆಪದಲ್ಲಿ ಮಹಾನ್ ವ್ಯಕ್ತಿಗಳಿಗೆ ಅಪಮಾನ ಮಾಡಿರುವ ಆತ ಒಬ್ಬ ವಿಕೃತ ಮನುಷ್ಯ. ಆತನನ್ನು ಗಡಿಪಾರು ಮಾಡಬೇಕು’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ‘ಪಠ್ಯ ಪರಿಷ್ಕರಣೆ ಹೆಸರಲ್ಲಿ ಇತಿಹಾಸ ತಿರುಚುವ ಪ್ರಯತ್ನ ನಡೆಯುತ್ತಿದೆ. ಪಠ್ಯದಲ್ಲಿ ನಾಡಧ್ವಜಕ್ಕೆ ಅವಮಾನ ಮಾಡಲಾಗಿದೆ. ಚಕ್ರತೀರ್ಥ ಮೂಲಕ ಮಕ್ಕಳಲ್ಲಿ ಕೋಮುವಾದ ಬೇರೂರಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ’ ಎಂದು ಆರೋಪಿಸಿದರು.

‘ನಾಡಗೀತೆಗೆ ಅಪಮಾನ ಮಾಡಿರುವ ಚಕ್ರತೀರ್ಥ, ಕೇಂದ್ರ ಸರ್ಕಾರದ ಹಿಂದಿ ಹೇರಿಕೆ ನಿಲುವು ಸಮರ್ಥಿಸಿಕೊಂಡಿದ್ದ. ಇಂಥವರನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗೆ ಅಧ್ಯಕ್ಷನನ್ನಾಗಿ ಮಾಡಿದರೆ ಏನಾಗುತ್ತದೆ ಎಂಬುದಕ್ಕೆ ಪಠ್ಯಪುಸ್ತಕ ವಿಚಾರದಲ್ಲಿ ಆಗಿರುವ ಗೊಂದಲಗಳೇ ಸಾಕ್ಷಿ’ ಎಂದು ಹೇಳಿದರು.

‘ಮಗುವನ್ನು ಅನುಚಿತವಾಗಿ ಸ್ಪರ್ಶಿಸಿದರೂ ಅಪರಾಧ’

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಗುವನ್ನು ಅನುಚಿತವಾಗಿ ಸ್ಪರ್ಶಿಸುವುದೂ ಕೂಡ ಪೋಕ್ಸೊ ಕಾಯ್ದೆ-2012ರ ಕಲಂ 7ರಡಿ ಲೈಂಗಿಕ ದೌರ್ಜನ್ಯದ ವ್ಯಾಖ್ಯಾನ ವ್ಯಾಪ್ತಿಗೆ ಒಳಪಡುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕೋಲಾರದ ಮಾಲೂರು ತಾಲ್ಲೂಕಿನ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪೋಕ್ಸೊ ಕಾಯ್ದೆ-2012ರ ಕಲಂ 7 ರ ವ್ಯಾಪ್ತಿಯ 'ಲೈಂಗಿಕ ದೌರ್ಜನ್ಯ' ವ್ಯಾಪ್ತಿಗೆ ಎರಡು ಭಾಗಗಳು ಒಳಪಡುತ್ತವೆ. ಒಂದನೇ ಭಾಗದಲ್ಲಿ ಲೈಂಗಿಕ ಉದ್ದೇಶದಿಂದ ನಿರ್ದಿಷ್ಟ ಅಂಗಗಳನ್ನು ಸ್ಪರ್ಶಿಸುವುದು ಮತ್ತು ಎರಡನೇ ಭಾಗ, ಅತ್ಯಾಚಾರವಲ್ಲದೆ ಲೈಂಗಿಕ ಉದ್ದೇಶದಿಂದ ಇತರೇ ಅಂಗಗಳನ್ನು ಸ್ಪರ್ಶಿಸುವುದು. ಈ ಪ್ರಕರಣದಲ್ಲಿ ಎರಡನೇ ಭಾಗ ಅನ್ವಯಿಸುವುದು ಮೇಲ್ನೋಟಕ್ಕೆ ದೃಢಪಟ್ಟಿದೆ. ಮಗು ಕೂಡ ಆರೋಪಿಯು ತನ್ನ ದೇಹದ ಯಾವ ಅಂಗಗಳನ್ನು ಸ್ಪರ್ಶಿಸಿದ್ದರು ಎಂಬುದನ್ನು ಹೇಳಿದೆ. ಹಾಗಾಗಿ ಕ್ರಿಮಿನಲ್ ಕೇಸ್ ರದ್ದು ಮಾಡಲಾಗದು ಎಂದು ನ್ಯಾಯಪೀಠ ಹೇಳಿದೆ.

ವಿಚಾರಣೆ ಆರಂಭವಾದ ಮೂರು ವರ್ಷಗಳ ನಂತರ ಆರೋಪ ಪಟ್ಟಿಯಲ್ಲಿ ಕಲಂ 7 ಸೇರ್ಪಡೆ ಮಾಡಿರುವುದು ಸರಿಯಲ್ಲವೆಂದು ಅರ್ಜಿದಾರರು ಆಕ್ಷೇಪ ಎತ್ತಿದ್ದಾರೆ. ಆದರೆ, ಅಪರಾಧ ದಂಡ ಸಂಹಿತೆ ಕಲಂ 216 (1)ರ ಪ್ರಕಾರ ನ್ಯಾಯಾಲಯ ತೀರ್ಪು ಪ್ರಕಟಿಸುವ ಮುನ್ನ ಯಾವುದೇ ಹಂತದಲ್ಲಿ ಬೇಕಾದರೂ ಆರೋಪ ಪಟ್ಟಿಯಲ್ಲಿ ಮಾರ್ಪಾಡು ಮಾಡಿ ಅಗತ್ಯ ಅಂಶಗಳನ್ನು ಸೇರಿಸಬಹುದಾಗಿದೆ. ಆ ರೀತಿ ಆರೋಪ ಪಟ್ಟಿಯಲ್ಲಿ ಬದಲಾವಣೆ ಮಾಡುವ ಅಧಿಕಾರವಿದ್ದು, ಅದನ್ನು ಯಾರೂ ಕುಸಿದುಕೊಳ್ಳಲಾಗದು ’ ಎಂದೂ ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: 2016ರ ಡಿಸೆಂಬರ್ 1ರಂದು 17 ವರ್ಷದ ಬಾಲಕಿ ಶಾಲೆಗೆ ತೆರೆಳುತ್ತಿದ್ದಾಗ, ಆರೋಪಿ ಆಕೆಯನ್ನು ಶಾಲೆಗೆ ಬಿಡುವುದಾಗಿ ಬೈಕ್‌ನಲ್ಲಿ ಕೂಡಿಸಿಕೊಂಡು ಸ್ವಲ್ಪ ಮುಂದೆ ಹೋದ ಬಳಿಕ ಕಾರಿನಲ್ಲಿ ಬೇರೊಬ್ಬ ವ್ಯಕ್ತಿಯ ಜೊತೆ ಸೇರಿ ಆಕೆಯನ್ನು ಅಪಹರಿಸಿದ್ದರು. ಕಾರಿನಲ್ಲಿ ಪ್ರಯಾಣಿಸುವಾಗ ಆ ಬಾಲಕಿಯ ಅಂಗಗಳನ್ನು ಅನುಚಿತವಾಗಿ ಸ್ಪರ್ಶಿಸಿದ್ದಾರೆಂದು ದೂರು ನೀಡಲಾಗಿತ್ತು. ಆದರೆ, ಬಾಲಕಿ ಅವರಿಂದ ತಪ್ಪಿಸಿಕೊಂಡಿದ್ದಳು. ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 366ಎ ಮತ್ತು 506 ಅಡಿ ಪ್ರಕರಣ ದಾಖಲಿಸಲಾಗಿತ್ತು. ನಂತರ 2021ರಲ್ಲಿ ಸೆಷನ್ಸ್ ಕೋರ್ಟ್ ವಿಚಾರಣೆ ವೇಳೆ ಸಂತ್ರಸ್ತೆಯ ಹೇಳಿಕೆ ಆಧರಿಸಿ ಪೋಕ್ಸೊ ಕಾಯ್ದೆಯ ಕಲಂ 7 ಅನ್ನು ಸೇರ್ಪಡೆ ಮಾಡಲಾಗಿತ್ತು.

ನಗರದಲ್ಲಿ ಕೋವಿಡ್ ದೃಢ ಪ್ರಮಾಣ ಏರಿಕೆ: ಬಿಬಿಎಂಪಿ

ಬೆಂಗಳೂರು: ರಾಜಧಾನಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳಗೊಳ್ಳುತ್ತಿದ್ದು, ದೃಢ ಪ್ರಮಾಣವು ಶೇ 1.1ರಿಂದ ಶೇ 2.9ಕ್ಕೆ ಏರಿಕೆಯಾಗಿದೆ.

ಬಿಬಿಎಂಪಿ ಬಿಡುಗಡೆ ಮಾಡಿರುವ ಮಾಹಿತಿಯಂತೆ ನಗರದಲ್ಲಿ ಮೇ 31ರಂದು 178 ಪ್ರಕರಣಗಳು ವರದಿಯಾಗಿದ್ದವು. ಜೂನ್ 10ರ ವೇಳೆಗೆ 494ಕ್ಕೆ ಏರಿಕೆಯಾಗಿದೆ. ಮಹದೇವಪುರ ವಾರ್ಡ್‌ನಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಿದೆ. ‘ನಮ್ಮ ವಲಯದಲ್ಲಿ ಹೆಚ್ಚಿನ ಜನಸಂಖ್ಯೆ ಇದೆ. ಹೀಗಾಗಿ, ಪ್ರಕರಣಗಳ ಸಂಖ್ಯೆಯೂ ಹೆಚ್ಚುತ್ತಿವೆ’ ಎಂದು ಬಿಬಿಎಂಪಿ ಆರೋಗ್ಯಾಧಿಕಾರಿ (ಮಹದೇವಪುರ) ಡಾ.ಆರ್.ಸುರೇಂದ್ರ ವಿವರಿಸಿದರು. ಈ ಪ್ರದೇಶದಲ್ಲಿ ವಲಸೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವುದೇ ಇದಕ್ಕೆ ಕಾರಣ ಎನ್ನುತ್ತಾರೆ ಬಿಬಿಎಂಪಿ ಅಧಿಕಾರಿಗಳು.

ಪ್ರಥಮ ಅಂತರರಾಷ್ಟ್ರೀಯ ಯುಟಿಲಿಟಿ ಡಾಗ್ ಸ್ಪೋರ್ಟ್ಸ್ ಇಂದು

ಬೆಂಗಳೂರು: ನಗರದಲ್ಲಿ ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಯುಟಿಲಿಟಿ ಡಾಗ್ ಸ್ಪೋರ್ಟ್ಸ್ ಜಯಮಹಲ್ ಅರಮನೆಯಲ್ಲಿ ಭಾನುವಾರ ನಡೆಯಲಿದೆ ಎಂದು ಪೆಟ್‌ಗಾಲಾ ತಿಳಿಸಿದೆ.

ಫೆಲೈನ್ ಕ್ಲಬ್ ಆಫ್ ಇಂಡಿಯಾ ಮತ್ತು ಮಾರ್ಸ್ ಪೆಟ್‌ಕೇರ್‌ನ ಬ್ರ್ಯಾಂಡ್ ವಿಸ್ಕಾಸ್‌ನ ಸಹಭಾಗಿತ್ವದಲ್ಲಿ ಬೆಕ್ಕುಗಳ ಪ್ರದರ್ಶನ (ಕ್ಯಾಟ್ ಶೋ) ಆಯೋಜಿಸಲಾಗಿದೆ. ಪ್ರದರ್ಶನದಲ್ಲಿ 200ಕ್ಕೂ ಹೆಚ್ಚು ಬೆಕ್ಕುಗಳು ಭಾಗವಹಿಸಲಿವೆ. ಜೊತೆಗೆ ಪೆಟ್‌ಕೇರ್ ಸಾಕು ಪ್ರಾಣಿಗಳ ದತ್ತು ಸ್ವೀಕಾರ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಸಾಕು ನಾಯಿಗಳ ಚುರುಕುತನ ವಲಯ, ಪೂಲ್ ಪಾರ್ಟಿ, ಪಿಇಟಿ ಫ್ಯಾಶನ್ ಶೋ, ಸಂವಾದಾತ್ಮಕ ಆಟಗಳು ಮತ್ತು ಸಂಗೀತ ಕಾರ್ಯಕ್ರಮಗಳಿವೆ ಎಂದು ಪೆಟ್‌ಗಾಲಾ ಕಾರ್ಯಕ್ರಮ ನಿರ್ದೇಶಕ ಎಸ್. ಕಿರಣಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇ.ಡಿ ಕಚೇರಿ ಎದುರು ನಾಳೆ ಪ್ರತಿಭಟನೆ: ಡಿ.ಕೆ. ಶಿವಕುಮಾರ್

ಬೆಂಗಳೂರು: ‘ನ್ಯಾಷನಲ್ ಹೆರಾಲ್ಡ್ ಪ್ರಕರಣ ಮುಂದಿಟ್ಟುಕೊಂಡು ಪಕ್ಷದ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಗೆ ಕೇಂದ್ರ ಸರ್ಕಾರ ಅನಗತ್ಯ ಕಿರುಕುಳ ನೀಡುತ್ತಿದೆ. ಇದನ್ನು ಖಂಡಿಸಿ ಶಾಂತಿನಗರದಲ್ಲಿರುವ ಜಾರಿ ನಿರ್ದೇಶನಾಲಯದ (ಇಡಿ) ಕಚೇರಿ ಎದುರು ಇದೇ 13ರಂದು ಬೆಳಿಗ್ಗೆ 10 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ‘ಅಂದು ದೇಶದ ಎಲ್ಲ ಭಾಗಗಳಲ್ಲಿರುವ ಇ.ಡಿ. ಕಚೇರಿ ಎದುರು ಪಕ್ಷದ ನಾಯಕರು, ಕಾರ್ಯಕರ್ತರು ಪ್ರತಿಭಟನೆ ನಡೆಸಲಿದ್ದಾರೆ’ ಎಂದರು.

‘ಈ ಪ್ರಕರಣದಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಆರ್ಥಿಕ ವ್ಯವಹಾರ ನಡೆಸಿದ್ದಾರೆ ಎಂಬ ಆರೋಪದ ಮೇಲೆ ತನಿಖೆ ಆರಂಭಿಸಿದೆ. ನಮ್ಮ ನಾಯಕರುಗಳು ಇಂಥ ಬೆದರಿಕೆಗಳಿಗೆ ಹೆದರುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಅಕ್ರಮ ಆಸ್ತಿ ರಕ್ಷಣೆಗೆ ಪ್ರತಿಭಟನೆ ಮಾರ್ಗ’

ಬೆಂಗಳೂರು: ‘ಕಾಂಗ್ರೆಸ್ ನಾಯಕರು ತಮ್ಮ ಅಕ್ರಮ ಆಸ್ತಿಯನ್ನು ರಕ್ಷಿಸಿಕೊಳ್ಳಲು ದೇಶದ ತನಿಖಾ ಸಂಸ್ಥೆಗಳ ವಿರುದ್ಧವೇ ಪ್ರತಿಭಟನೆ ನಡೆಸಲು ಹೊರಟಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕ ಟೀಕಿಸಿದೆ.

ಈ ಕುರಿತು ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಶನಿವಾರ, ‘ಭ್ರಷ್ಟರ ಪರವಾಗಿ ಭ್ರಷ್ಟರ ಪ್ರತಿಭಟನೆ!’ ಎಂಬ ಶೀರ್ಷಿಕೆಯಡಿ ಸರಣಿ ಟ್ವೀಟ್‌ಗಳ ಮೂಲಕ ವಾಗ್ದಾಳಿ ನಡೆಸಲಾಗಿದೆ.

ಬಾಂಗ್ಲಾದೇಶದ ಪ್ರಜೆ ಸೇರಿ 9 ಮಂದಿ ಬಂಧನ • ಪ್ರತಿ 'ಲೆಟರ್‌ಹೆಡ್'ಗೆ ₹ 500– ₹1,000 ನಿಗದಿ

ನುಸುಳುಕೋರರಿಗೆ ಆಧಾರ್: ಬಿಬಿಎಂಪಿ ಫಾರ್ಮಾಸಿಸ್ಟ್ ಕಿಂಗ್‌ಪಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದೊಳಗೆ ಅಕ್ರಮವಾಗಿ ನುಸುಳುವ ಹೊರದೇಶದ ಪ್ರಜೆಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಆಧಾರ್ ಮಾಡಿಸಿಕೊಡುತ್ತಿದ್ದ ವ್ಯವಸ್ಥಿತ ಜಾಲವನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಭೇದಿಸಿದ್ದು, ಬಿಬಿಎಂಪಿ ಆಸ್ಪತ್ರೆಯ ಫಾರ್ಮಾಸಿಸ್ಟ್ ಹಾಗೂ ಬಾಂಗ್ಲಾದೇಶದ ಪ್ರಜೆಗಳು ಸೇರಿ 9 ಮಂದಿಯನ್ನು ಬಂಧಿಸಿದ್ದಾರೆ.

ಬಾಂಗ್ಲಾದೇಶದ ಸೈದುಲ್ ಅಕ್ಘೋನ್ ಅಲಿಯಾಸ್ ಶಾಯೀದ್ ಅಹ್ಮದ್ (42), ಈತನ ಮಗ ಸುಮನ್ ಇಸ್ಲಾಮ್, ಮೊಹಮ್ಮದ್ ಅಬ್ದುಲ್ ಅಲೀಂ (35), ಡಿ.ಜೆ.ಹಳ್ಳಿ ನಿವಾಸಿ ಸುಹೇಲ್ ಅಹಮ್ಮದ್ (24), ಕಾಫಿಬೋರ್ಡ್ ಕಾಲೊನಿಯ ಮೊಹಮ್ಮದ್ ಇದಾಯತ್ (25), ಅವಲಹಳ್ಳಿ ಜೆ.ಪಿ.ನಗರದ ಸೈಯದ್ ಮನ್ಸೂರ್ (43), ಚಾಮರಾಜಪೇಟೆಯ ಆಯಿಷಾ ಅಲಿಯಾಸ್ ರಬಿಯಾ (40), ಪಿಳ್ಳಣ್ಣ ಗಾರ್ಡನ್‌ನ ಮೊಹಮ್ಮದ್ ಅಮೀನ್ ಸೇಠ್ (64), ಪರಪ್ಪನ ಅಗ್ರಹಾರದ ರಾಕೇಶ್ (41) ಹಾಗೂ ಜೆ.ಪಿ. ನಗರದ ಇಸ್ತಿಯಾಕ್ ಪಾಷಾ ಅಲಿಯಾಸ್ ಮೆಡಿಕಲ್ (50) ಬಂಧಿತರು.

> **ನಕಲಿ ದಾಖಲೆ ಸೃಷ್ಟಿಸಿ ಆಧಾರ್ ಮಾಡಿಸಿಕೊಡುತ್ತಿದ್ದ ಜಾಲ ಭೇದಿಸಿರುವ ಪೊಲೀಸರ ತಂಡಕ್ಕೆ ₹ 75 ಸಾವಿರ ಬಹುಮಾನ ಘೋಷಿಸಲಾಗಿದೆ**
> **ಡಾ. ಕೋನ ವಂಶಿಕೃಷ್ಣ**
> ಬೆಂಗಳೂರು ಗ್ರಾಮಾಂತರ ಎಸ್ಪಿ

'ಆರೋಪಿಗಳು ವ್ಯವಸ್ಥಿತ ಜಾಲ ರೂಪಿಸಿಕೊಂಡು ಆಧಾರ್ ಮಾಡಿಸಿಕೊಡುತ್ತಿದ್ದರು. ಬೌರಿಂಗ್, ವಾಣಿ ವಿಲಾಸ, ಬಿಬಿಎಂಪಿ ಆರೋಗ್ಯ ಕೇಂದ್ರಗಳ 5 ಸೀಲ್‌ಗಳು, 26 ನಕಲಿ ಲೆಟರ್‌ಹೆಡ್, ಸೀಲ್ ತಯಾರು ಮಾಡುವ ಯಂತ್ರ, 16 ಮೊಬೈಲ್, 3 ಕಂಪ್ಯೂಟರ್, 2 ಲ್ಯಾಪ್‌ಟಾಪ್, 2 ಪ್ರಿಂಟರ್, 31 ಆಧಾರ್, 13 ಪಾನ್ ಕಾರ್ಡ್, 28 ಮತದಾರರ ಗುರುತಿನ ಚೀಟಿ, 4 ಈ-ಶ್ರಮ ಕಾರ್ಡ್, 5 ವಾಹನ ಚಾಲನಾ ಪರವಾನಗಿ, 3 ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್, 2 ಎಟಿಎಂ, 92 ಬಿಬಿಎಂಪಿ ವೈದ್ಯರ ಸೀಲ್‌ಗಳು ಆರೋಪಿಗಳ ಬಳಿ ಸಿಕ್ಕಿವೆ' ಎಂದು ಕೇಂದ್ರ ವಲಯದ ಐಜಿಪಿ ಎಂ. ಚಂದ್ರಶೇಖರ್ ತಿಳಿಸಿದರು.

ಇಸ್ತಿಯಾಕ್ ಪಾಷಾ

ಸೈದುಲ್ ಅಕ್ಘೋನ್

ರಾಕೇಶ್

ಮೊಹಮ್ಮದ್ ಅಬ್ದುಲ್ ಅಲೀಂ

ದರೋಡೆ ಪ್ರಕರಣದಿಂದ ಬಯಲು: 'ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯ ಚಿಕ್ಕ ಗೊಲ್ಲರಹಟ್ಟಿಯಲ್ಲಿ ಎಸ್‌ಬಿಐ ಎಟಿಎಂ ಘಟಕದಲ್ಲಿದ್ದ ಯಂತ್ರವನ್ನು ಕದ್ದು, ₹ 18 ಲಕ್ಷ ದೋಚಲಾಗಿತ್ತು. ಇನ್‌ಸ್ಪೆಕ್ಟರ್ ಬಿ.ಎಸ್. ಮಂಜುನಾಥ್ ನೇತೃತ್ವದ ತಂಡ ಪ್ರಕರಣದ ತನಿಖೆ ಕೈಗೊಂಡಾಗಲೇ, ನಕಲಿ ದಾಖಲೆ ಸೃಷ್ಟಿಸಿ ಆಧಾರ್ ಮಾಡಿಸುತ್ತಿದ್ದ ಜಾಲದ ಸುಳಿವು ಲಭ್ಯವಾಯಿತು' ಎಂದರು.

'ದರೋಡೆ ಮಾಡಿದ್ದ ಹಣವನ್ನು ಟಾಟಾ ಏಸ್ ಗೂಡ್ಸ್ ವಾಹನದಲ್ಲಿ ಗುಜರಿ ಶೆಡ್‌ವೊಂದಕ್ಕೆ ಸಾಗಿಸಲಾಗಿತ್ತು. ಶೆಡ್ ಮಾಲೀಕ ಶೇಕ್ ಇಸ್ಮಾಯಿಲ್‌ನನ್ನು ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ಅಕ್ರಮವಾಗಿ ಬೆಂಗಳೂರಿಗೆ ಬರುವ ಬಾಂಗ್ಲಾ ಪ್ರಜೆಗಳಿಗೆ ನಕಲಿ ಆಧಾರ್ ಮಾಡಿಸಿಕೊಟ್ಟು, ದರೋಡೆ ಮಾಡಿಸುತ್ತಿದ್ದ ಸಂಗತಿ ಗೊತ್ತಾಗಿತ್ತು' ಎಂದರು.

'ಗುಜರಿ ವ್ಯಾಪಾರಕ್ಕೆಂದು 'ಎನ್‌ಎ ಪ್ಲಾಸ್ಟಿಕ್' ಕಂಪನಿ ತೆರೆದಿರುವ ಆರೋಪಿ ಸೈದುಲ್ ಅಕ್ಘೋನ್ ಹಾಗೂ ಆತನ ಮಗ ಸುಮನ್ ಇಸ್ಲಾಮ್, ಆಧಾರ್ ಜಾಲದಲ್ಲಿ ಸಕ್ರಿಯರಾಗಿದ್ದರು. ಜತೆಯಲ್ಲಿ ಹವಾಲಾ ದಂಧೆ ನಡೆಸುತ್ತಿದ್ದರು' ಎಂಬ ಮಾಹಿತಿಯನ್ನೂ ಇಸ್ಮಾಯಿಲ್ ಬಾಯ್ಬಿಟ್ಟಿದ್ದ. ನಂತರ, ಸೈದುಲ್ ಹಾಗೂ ಸುಮನ್‌ನನ್ನು ಬಂಧಿಸಿದಾಗ, ಜಾಲದ ಕಾರ್ಯವೈಖರಿ ಬಯಲಾಯಿತು' ಎಂದೂ ಪೊಲೀಸರು ಹೇಳಿದರು.

ನಕಲಿ ಲೆಟರ್‌ಹೆಡ್ ಸೃಷ್ಟಿಸುತ್ತಿದ್ದ ಫಾರ್ಮಾಸಿಸ್ಟ್: 'ಬಂಧಿತ ಇಸ್ತಿಯಾಕ್ ಪಾಷಾ, ಬಿಬಿಎಂಪಿ ಆಸ್ಪತ್ರೆಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಫಾರ್ಮಾಸಿಸ್ಟ್ ಆಗಿ ಕೆಲಸ ಮಾಡುತ್ತಿದ್ದ. ಈತನೇ ಬಿಬಿಎಂಪಿ ವೈದ್ಯಾಧಿಕಾರಿಗಳ ನಕಲಿ ಸಹಿ ಹಾಗೂ ಸೀಲ್ ಬಳಸಿ ಲೆಡರ್‌ಹೆಡ್ ಸೃಷ್ಟಿಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಗೆಜೆಟೆಡ್ ಅಧಿಕಾರಿಗಳ ಸೀಲ್ ಹಾಗೂ ಸಹಿ ಇರುವ ಲೆಟರ್‌ಹೆಡ್ ಇರುವವರಿಗೆ ಆಧಾರ್ ಮಾಡಿಕೊಡಲು ಅವಕಾಶವಿದೆ. ಇದೇ ಕಾರಣಕ್ಕೆ, ಆರೋಪಿ ಇಸ್ತಿಯಾಕ್ ನಗರದ ಬಿಬಿಎಂಪಿ ಆಸ್ಪತ್ರೆಗಳ ವೈದ್ಯಾಧಿಕಾರಿಗಳ ನಕಲಿ ಲೆಟರ್ ಹೆಡ್ ಸೃಷ್ಟಿಸಿ ಆರೋಪಿ ಸೈದುಲ್ ಅಕ್ಘೋನ್ ಜೊತೆ ಸೇರಿ ಬಾಂಗ್ಲಾ ಪ್ರಜೆಗಳಿಗೆ ಆಧಾರ್ ಮಾಡಿಸಿಕೊಡುತ್ತಿದ್ದ. ಸಾಫ್ಟ್‌ವೇರ್ ಎಂಜಿನಿಯರ್ ಆದ ಆರೋಪಿ ರಾಕೇಶ್, ತಾಂತ್ರಿಕ ಸಹಾಯ ಮಾಡುತ್ತಿದ್ದ' ಎಂದೂ ಹೇಳಿದರು.

'ನಕಲಿ ಲೆಡರ್ ಹೆಡ್ ಬಳಸಿಕೊಂಡು ಬಾಂಗ್ಲಾ ಪ್ರಜೆಗಳು, ಬೆಂಗಳೂರು ಒನ್ ಕೇಂದ್ರದಲ್ಲಿ ಆಧಾರ್ ನೋಂದಣಿ ಮಾಡಿಸುತ್ತಿದ್ದರು' ಎಂದರು. 'ನಕಲಿ ದಾಖಲೆ ಸೃಷ್ಟಿಸಿಕೊಡಲು ಆರೋಪಿಗಳು, ಪ್ರತಿಯೊಬ್ಬರಿಂದ ₹500 ಹಾಗೂ ₹1,000 ಪಡೆಯುತ್ತಿದ್ದರು' ಎಂದೂ ಹೇಳಿದರು.

'₹ 4 ಕೋಟಿ ವಹಿವಾಟು'

'ಬಾಂಗ್ಲಾದ ಆರೋಪಿ ಸೈದುಲ್ ಅಕ್ಘೋನ್, 2011ರಲ್ಲಿ ನಗರಕ್ಕೆ ಬಂದು ಗುಜರಿ ವ್ಯಾಪಾರ ಮಾಡಲಾರಂಭಿಸಿದ್ದ. ತಾನೂ ನಕಲಿ ದಾಖಲೆ ಸೃಷ್ಟಿಸಿ ಆಧಾರ್ ಮಾಡಿಸಿಕೊಂಡಿದ್ದ. ಹವಾಲಾ ದಂಧೆಯಲ್ಲೂ ಭಾಗಿಯಾಗಿದ್ದ. ಈತನ ಎಸ್‌ಬಿಐ ಹಾಗೂ ಆ್ಯಕ್ಸಿಸ್ ಬ್ಯಾಂಕ್ ಖಾತೆಗಳ ಮೂಲಕ ವರ್ಷಕ್ಕೆ ₹ 4 ಕೋಟಿ ವಹಿವಾಟು ನಡೆಸಿರುವುದು ಗೊತ್ತಾಗಿದ್ದು, ಎಲ್ಲ ಖಾತೆಗಳನ್ನು ಜಪ್ತಿ ಮಾಡಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಠಾಣೆವಾರು ಸಮೀಕ್ಷೆಗೆ ನಿರ್ದೇಶನ

ಅಕ್ರಮ ವಲಸಿಗರಿಗೆ ಆಧಾರ್ ಮಾಡಿಸಿಕೊಡುತ್ತಿದ್ದ ಜಾಲ ಭೇದಿಸಿರುವ ಮಾದನಾಯಕನಹಳ್ಳಿ ಠಾಣೆ ಪೊಲೀಸರ ತನಿಖೆಯನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಶ್ಲಾಘಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಅಕ್ರಮ ವಲಸಿಗರ ವಿರುದ್ಧ ಸರ್ಕಾರ ಗಂಭೀರ ಕ್ರಮಗಳನ್ನು ತೆಗೆದುಕೊಂಡಿದೆ. ಅಕ್ರಮ ವಾಸಿಗಳು ಹಾಗೂ ಅವರಿಗೆ ಆಶ್ರಯ ನೀಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯದ ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿ, ಅಕ್ರಮ ವಲಸಿಗರನ್ನು ಪತ್ತೆ ಮಾಡಿ ಕ್ರಮ ಜರುಗಿಸುವಂತೆ ಪೊಲೀಸರಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಶ್ರೀನಿವಾಸಗೌಡರ ಹೆಸರಲ್ಲಿ 'ಸಮಾರಾಧನೆ' ಪತ್ರ!

ಕೋಲಾರ: ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ್ದಾಗಿ ಹೇಳಿರುವ ಕೋಲಾರ ಜೆಡಿಎಸ್ ಶಾಸಕ ಕೆ.ಶ್ರೀನಿವಾಸಗೌಡರ ಹೆಸರಲ್ಲಿ'ಕೈಲಾಸ ಸಮಾರಾಧನೆ' ಎಂಬ ಪತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ.

ಫೇಸ್‌ಬುಕ್‌ನಲ್ಲಿ 'ಕುಮಾರಸ್ವಾಮಿ ಫಾರ್ ಸಿಎಂ' ಖಾತೆಯಲ್ಲಿ ಈ ಪತ್ರ ಹಾಕಿದ್ದು, 'ಪಕ್ಷಕ್ಕೆ, ಕಾರ್ಯಕರ್ತರಿಗೆ ಮೋಸ ಮಾಡಿ ದುಡ್ಡಿಗಾಗಿ ತಮ್ಮ ಮತ ಮಾರಿಕೊಂಡು, ಮತದಾರರ ಪಾಲಿಗೆ ತೀರಿಕೊಂಡ ಕೋಲಾರದ ಶ್ರೀನಿವಾಸ-ಗೌಡನಿಗೆ ಭಾವಪೂರ್ಣ ಶ್ರದ್ಧಾಂಜಲಿ' ಎಂದು ಬರೆದಿದ್ದಾರೆ.

PRM/KA/RERA/1251/308/PR/201201/003733
DS-MAX SAHARA

Homes that are aesthetically designed to refresh your mood, rejuvenating you every moment with its unmatched
Mediterranean Architecture



BDA APPROVED,
LUXURIOUS 2 & 3-BHK APARTMENTS

Rs. 31.00 - 62.00 Lacs*
(Rs. 3,100 / Sq. Ft.)

HOSA ROAD JUNCTION
Near Bosch (Electronic City)

9164 045 000

LOADED WITH LUXURIOUS AMENITIES | Less than 15 mins. | Infosys | Metro Cash & Carry | TCS | Xavier's Academy | Oxford English School | Springleaf Hospital

APARTMENTS FOR SALE IN VARIOUS LOCATIONS

PRM/KA/RERA/1251/472/PR/221221/004599	PRM/KA/RERA/1251/308/PR/290122/004660	PRM/KA/RERA/1251/309/PR/211209/004576	PRM/KA/RERA/1251/446/PR/210312/004002	PRM/KA/RERA/1251/309/PR/180120/001878	PRM/KA/RERA/1251/308/PR/280222/004739	PRM/KA/RERA/1251/309/PR/181122/002151
RMV EXTN. 2ND STAGE	SARJAPURA	YELAHANKA	K R PURAM	THANISANDRA MAIN ROAD	CHANDAPURA	THANISANDRA
NEAR HEBBAL	SARJAPURA – ATTIBELE ROAD	10 MINS. YELAHANKA POLICE STATION	NEAR GARDEN CITY UNIVERSITY	10 MINS. FROM MANYATA TECH PARK	10 MINS. NARAYANA HRUDAYALAYA	NEAR KNS INSTITUTE OF TECHNOLOGY
₹ 48.90 - 64.15 Lacs*	₹ 27.10 - 40.15 Lacs*	₹ 31.22 - 42.42 Lacs*	₹ 39.36 - 65.13 Lacs*	₹ 1.11 - 1.37 Crores*	₹ 26.32 - 37.85 Lacs*	₹ 35.16 - 41.16 Lacs*
2 & 3-BHK	2 & 3-BHK	2 & 3-BHK	2 & 3-BHK	3-BHK	2 & 3-BHK	2-BHK
₹ 5,000 / Sq. Ft.	₹ 2,800 / Sq. Ft.	₹ 3,500 / Sq. Ft.	₹ 3,800 / Sq. Ft.	READY TO OCCUPY	₹ 2,800 / Sq. Ft.	READY TO OCCUPY
8880 099 344	9164 122 000	8880 758 758	8880 438 000	8088 779 779	8880 013 310	8880 461 461

*Prices mentioned are base price and may vary with dimensions, floors, and availability. Brand names mentioned in this advertisement are for demarcation & not for promotion.
Travel time may vary with real-time traffic conditions and the route followed to reach the destination, please check your maps for precise and accurate travel time from your location.
For more details/information about the projects, visit: www.rera.karnataka.gov.in

T & C Apply*

www.dsmaxproperties.com ಡಿಎಸ್ ಮ್ಯಾಕ್ಸ್

ನಿಧನ

ಹೆಚ್. ಮಲ್ಲಯ್ಯನವರು

ಅಧ್ಯಕ್ಷರು, ಜಿ.ಕೆ.ಡಬ್ಲ್ಯೂ ಹೌಸಿಂಗ್ ಸೊಸೈಟಿ ಮತ್ತು ಸಂಸ್ಥಾಪಕರು, ಸರ್ವಮಂಗಳ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಮಾರೇನಹಳ್ಳಿ, ವಿಜಯನಗರ, ಬೆಂಗಳೂರು.
ಇವರು ದಿ: 11.06.2022 ರಂದು ನಿಧನರಾದರು ಅಂತ್ಯಕ್ರಿಯೆಯನ್ನು ದಿ: 12.06.2022 ರಂದು ಭಾನುವಾರ ಮಧ್ಯಾಹ್ನ 1.30ಕ್ಕೆ ಪೀಣ್ಯ ಚಿತಾಗಾರದಲ್ಲಿ ನಡೆಸಲಾಗುವುದು.
ದುಃಖತಪ್ತರು: ಕುಟುಂಬದವರು
ಫೋ: 8722366667 / 9986198188

ನಿಧನ ವಾರ್ತೆ

ಮೋಯಿಜ್ ಅಹಮ್ಮದ್

ಬೆಂಗಳೂರು: ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ತರಬೇತುದಾರರಾಗಿ ನಿವೃತ್ತರಾಗಿದ್ದ ಮೋಯಿಜ್ ಅಹಮ್ಮದ್ (79) ಅವರು ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಸ್ವಾತಂತ್ರ್ಯದ ಅಮೃತಮಹೋತ್ಸವ

ಕರ್ನಾಟಕ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ

ಸನ್ಮಾನ್ಯ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ
"ವಿವಿಧ ಅಭಿವೃದ್ಧಿ ಕಾಮಗಾರಿಗಳ" ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮತ್ತು
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ "ಪ್ರಧಾನ ಮಂತ್ರಿ ಆವಾಸ್ ಯೋಜನೆ–ಸರ್ವರಿಗೂ ಸೂರು (ನಗರ)" ಯೋಜನೆಯಡಿ ಅನುಮೋದನೆಯಾಗಿರುವ
ಮನೆಗಳ ನಿರ್ಮಾಣ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಹಕ್ಕುಪತ್ರ ವಿತರಣಾ ಕಾರ್ಯಕ್ರಮ

ಉದ್ಘಾಟನೆ: ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು

ದಿನಾಂಕ : 12ನೇ ಜೂನ್ 2022, ಭಾನುವಾರ ಸಮಯ : ಮಧ್ಯಾಹ್ನ 3.00 ಗಂಟೆಗೆ



- ಕೊಳಗೇರಿ ನಿವಾಸಿಗಳಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ–ಸರ್ವರಿಗೂ ಸೂರು (ನಗರ) ಯೋಜನೆಯಡಿ ಅಂದಾಜು ರೂ.9700 ಲಕ್ಷ ವೆಚ್ಚದಲ್ಲಿ 1588 (ನೆಲ+4) ಮನೆಗಳ ನಿರ್ಮಾಣ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಹಕ್ಕುಪತ್ರ ವಿತರಣಾ ಕಾರ್ಯಕ್ರಮ

ಸ್ಥಳ:– ಲಕ್ಷ್ಮೀ ದೇವಿನಗರ ಬಸ್ ನಿಲ್ದಾಣ, ಲಗ್ಗೆರೆ
ಸಮಯ:– ಮಧ್ಯಾಹ್ನ 3.00 ಗಂಟೆಗೆ

- ಅಂದಾಜು ರೂ.3284 ಲಕ್ಷ ವೆಚ್ಚದಲ್ಲಿ ಉಲ್ಲಾಳ ಮುಖ್ಯರಸ್ತೆಗೆ ಅಡ್ಡಲಾಗಿ ಕೆಂಗೇರಿ ಹೊರವರ್ತುಲ ರಸ್ತೆಯಿಂದ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ
- ಅಂದಾಜು ರೂ.2916 ಲಕ್ಷ ವೆಚ್ಚದಲ್ಲಿ ಅನ್ನಪೂರ್ಣೇಶ್ವರಿನಗರ ಮುಖ್ಯರಸ್ತೆಗೆ ಅಡ್ಡಲಾಗಿ ಕೆಂಗೇರಿ ಹೊರವರ್ತುಲ ರಸ್ತೆಯಿಂದ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ
- ಅಂದಾಜು ರೂ.10000 ಲಕ್ಷ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ತುಮಕೂರು ರಸ್ತೆ ಜಂಕ್ಷನ್‌ನಿಂದ ನಾಯಂಡಹಳ್ಳಿ ಜಂಕ್ಷನ್‌ವರೆಗೆ (ORR) ಮತ್ತು ಸುಮನಹಳ್ಳಿ ಜಂಕ್ಷನ್‌ನಿಂದ ಅಂಬೇಡ್ಕರ್ ಕಾಲೇಜುವರೆಗೆ ಕಾಂಕ್ರೀಟ್ ತಡೆಗೋಡೆ ನಿರ್ಮಾಣ, ಸೇತುವೆಗಳು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ

ಸ್ಥಳ:– ನಾಗರಭಾವಿ ಬಿ.ಡಿ.ಎ ವಾಣಿಜ್ಯ ಸಂಕೀರ್ಣ, ಅನ್ನಪೂರ್ಣೇಶ್ವರಿನಗರ
ಸಮಯ : ಸಂಜೆ 4.00 ಗಂಟೆಗೆ

- ಅಂದಾಜು ರೂ.8000 ಲಕ್ಷ ವೆಚ್ಚದಲ್ಲಿ ಆರ್.ಆರ್.ನಗರ ವಲಯದ ರಾಜರಾಜೇಶ್ವರಿನಗರ ಆರ್ಚ್‌ನಲ್ಲಿ ಸಿಗ್ನಲ್ ಮುಕ್ತ ರೋಟರಿಗೆ ಅನುಕೂಲವಾಗುವಂತೆ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ
- ಅಂದಾಜು ರೂ.1120 ಲಕ್ಷ ವೆಚ್ಚದಲ್ಲಿ ಹೊಸಕೆರೆಹಳ್ಳಿ ಮತ್ತು ಕೆಂಚೇನಹಳ್ಳಿ ಕೆರೆಗಳಲ್ಲಿ ಲೀಚೆಟ್ ಮತ್ತು ಒಳಚರಂಡಿ ತ್ಯಾಜ್ಯ ನೀರನ್ನು ತಿರುಗಿಸುವ ಅಭಿವೃದ್ಧಿ ಕಾಮಗಾರಿಯ ಶಂಕುಸ್ಥಾಪನೆ

ಸ್ಥಳ:– ರಾಜರಾಜೇಶ್ವರಿನಗರದ ಹೆಬ್ಬಾಗಿಲಿನ ಹತ್ತಿರ.
ಸಮಯ : ಸಂಜೆ 4.45 ಗಂಟೆಗೆ

- ರಾಜರಾಜೇಶ್ವರಿನಗರ ವಾರ್ಡ್ ಸಂಖ್ಯೆ 160ರಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಶಾಸಕರ ಕಛೇರಿ ಉದ್ಘಾಟನೆ.

ಸ್ಥಳ:– ಜಯಣ್ಣ ವೃತ್ತ, ಕೆಂಚೇನಹಳ್ಳಿ ಮುಖ್ಯರಸ್ತೆ.
ಸಮಯ : ಸಂಜೆ 5.45 ಗಂಟೆಗೆ

ಜ್ಯೋತಿ ಬೆಳಗಿಸುವವರು
ಶ್ರೀಮತಿ ನಿರ್ಮಲಾ ಸೀತಾರಾಮನ್ – ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್ – ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ಮುನಿರತ್ನ – ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ

ವಿಶೇಷ ಆಹ್ವಾನಿತರು
ಶ್ರೀ ಆರ್. ಅಶೋಕ – ಮಾನ್ಯ ಕಂದಾಯ ಸಚಿವರು
ಡಾ|| ಸಿ.ಎನ್. ಅಶ್ವತ್ಥ ನಾರಾಯಣ – ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ವಿ. ಸೋಮಣ್ಣ – ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಶ್ರೀ ಬಿ.ಎ. ಬಸವರಾಜ – ಮಾನ್ಯ ನಗರಾಭಿವೃದ್ಧಿ ಸಚಿವರು

ಘನ ಉಪಸ್ಥಿತಿ
ಶ್ರೀ ಡಿ.ಕೆ. ಸುರೇಶ್ – ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಶ್ರೀ ಮಹೇಶ ಈರನಗೌಡ ಕುಮಠಳ್ಳಿ – ಮಾನ್ಯ ಅಧ್ಯಕ್ಷರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ಶಾಸಕರು, ಅಥಣಿ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಸಹಕಾರ ಸಚಿವರು
ಶ್ರೀ ಕೆ. ಗೋಪಾಲಯ್ಯ – ಮಾನ್ಯ ಅಬಕಾರಿ ಸಚಿವರು
ಶ್ರೀ ಎನ್. ನಾಗರಾಜು (ಎಂ.ಟಿ.ಬಿ) – ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್ – ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ – ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಸತೀಶ್ ರೆಡ್ಡಿ – ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್ – ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನ ಪರಿಷತ್)
ಶ್ರೀ ಕೆ.ಸಿ. ರಾಮಮೂರ್ತಿ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜೈರಾಮ್ ರಮೇಶ್ – ಮಾನ್ಯ ಸಂಸದರು (ರಾಜ್ಯಸಭೆ)
ಡಾ|| ಎಲ್. ಹನುಮಂತಯ್ಯ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಪುಟ್ಟಣ್ಣ – ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಅ. ದೇವೇಗೌಡ – ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಯು.ಬಿ. ವೆಂಕಟೇಶ್ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಮುನಿರಾಜು ಗೌಡ .ಪಿ.ಎಂ (ತುಳಸಿ) – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ – ಮಾನ್ಯ ಶಾಸಕರು (ವಿಧಾನ ಪರಿಷತ್)

ರಾಕೇಶ್ ಸಿಂಗ್, ಭಾ.ಆ.ಸೇ – ಆಡಳಿತಗಾರರು, ಬಿಬಿಎಂಪಿ
ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ
ತುಷಾರ್ ಗಿರಿ ನಾಥ್, ಭಾ.ಆ.ಸೇ – ಮುಖ್ಯ ಆಯುಕ್ತರು, ಬಿಬಿಎಂಪಿ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು"
ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು–560002

ಮಾಸ್ಕ್ ಧರಿಸಿ | ಸಾಮಾಜಿಕ ಅಂತರ ಕಾಪಾಡಿಕೊಳ್ಳಿ | ಕೈಗಳನ್ನು ಸ್ವಚ್ಛಗೊಳಿಸಿ | ಲಸಿಕೆ ಹಾಕಿಸಿಕೊಳ್ಳಿ

₹18 ಕೋಟಿ ವೆಚ್ಚದ ಹೈಟೆಕ್ ಶಾಲೆ!

ಹೊಂಗನೂರಿನಲ್ಲಿ ಸರ್ಕಾರಿ ಶಾಲೆ ಅಭಿವೃದ್ಧಿಗೆ ಮುಂದಾದ ವೆಂಕಟಪ್ಪ

● ಆರ್. ಜಿತೇಂದ್ರ

ರಾಮನಗರ: ಹುಟ್ಟೂರಿನ ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಇಲ್ಲೊಬ್ಬರು ದಾನಿ ಬರೋಬ್ಬರಿ ₹18 ಕೋಟಿ ವ್ಯಯಿಸುತ್ತಿದ್ದು, ಇನ್ನು ಕೆಲವೇ ವರ್ಷದಲ್ಲಿ ಇದು ಜಿಲ್ಲೆಯ ಮಾದರಿ ಶಿಕ್ಷಣ ಸಂಸ್ಥೆಯಾಗಿ ತಲೆ ಎತ್ತಲಿದೆ.

ವೆಂಕಟಪ್ಪ

ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು ಸರ್ಕಾರಿ ಶಾಲೆ ಸ್ಥಾಪನೆ ಆಗಿದ್ದು 1914ರಲ್ಲಿ. ಸದ್ಯ ಕರ್ನಾಟಕ ಪಬ್ಲಿಕ್ ಶಾಲೆಯಾಗಿ ಬದಲಾಗಿದೆ. ಪ್ರಸಕ್ತ ವರ್ಷ 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಹಳೇ ಶಾಲಾ ಕಟ್ಟಡ ಶಿಥಿಲಗೊಂಡ ಕಾರಣ 2005ರಲ್ಲಿ ಹೊಸ ಕಟ್ಟಡ ಕಟ್ಟಿ ಅಲ್ಲಿಗೆ ಶಾಲೆಯನ್ನು ಸ್ಥಳಾಂತರ ಮಾಡಲಾಗಿದೆ. ಹಳೇ ಕಟ್ಟಡ ಇದ್ದ ಜಾಗದಲ್ಲೇ ಈಗ ವ್ಯವಸ್ಥಿತ ಶಾಲಾ ಕಟ್ಟಡಗಳ ಸಂಕೀರ್ಣ ನಿರ್ಮಾಣಕಾರ್ಯ ನಡೆದಿದೆ.

ಕಣ್ವ ಡಯಾಗ್ನಾಸ್ಟಿಕ್ ಕೇಂದ್ರದ ಸಂಸ್ಥಾಪಕ ಎಚ್.ಎಂ. ವೆಂಕಟಪ್ಪ 1949–1958ರ ನಡುವೆ ಇದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ನಂತರದಲ್ಲಿ ಕಾಲೇಜು ಶಿಕ್ಷಣಕ್ಕಾಗಿ ಬೆಂಗಳೂರಿನತ್ತ ಮುಖಮಾಡಿದ್ದರು. ಆರು ದಶಕದ ಬಳಿಕ ಅವರು ತಮ್ಮ ಹುಟ್ಟೂರಿನ ಶಾಲೆಯತ್ತ ಗಮನಹರಿಸಿದ್ದಾರೆ.

ಮಕ್ಕಳ ಅಭ್ಯಾಸಕ್ಕೆಂದು ಬರೋಬ್ಬರಿ 60 ಕೊಠಡಿಗಳುಳ್ಳ ಮೂರು ಅಂತಸ್ತಿನ ಎರಡು ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಇದಲ್ಲದೆ ಪ್ರಯೋಗಾಲಯ, ಗ್ರಂಥಾಲಯ ಮೊದಲಾದ ಸೌಕರ್ಯಗಳ ಜೊತೆಗೆ ಸುಸಜ್ಜಿತ ಈಜುಕೊಳ, ಆಟದ ಮೈದಾನದಂತಹ ಹೈಟೆಕ್ ಸೌಲಭ್ಯಗಳನ್ನೂ ಕಲ್ಪಿಸಲಾಗುತ್ತಿದೆ. ಎರಡು ಸಾವಿರ ವಿದ್ಯಾರ್ಥಿಗಳು ಇಲ್ಲಿ ಅಭ್ಯಾಸ ಮಾಡಬಹುದಾಗಿದೆ.

ಹೊಸ ಕಟ್ಟಡ ನಿರ್ಮಾಣ ಆದ ಬಳಿಕ ಪ್ರಾಥಮಿಕ ಹಂತದಿಂದ ದ್ವಿತೀಯ ಪಿಯುವರೆಗೂ ಒಂದೇ ಸೂರಿನಲ್ಲಿ ಶಿಕ್ಷಣ ದೊರೆಯಲಿದ್ದು, ಪ್ರವೇಶಾತಿ ಸಹ ಹೆಚ್ಚಲಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಸಡ್ಡು ಹೊಡೆಯಲು ಸಾಧ್ಯ ಆಗಲಿದೆ ಎಂದು ಹೊಂಗನೂರು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಪಶ್ಚಿಮ ದೆಹಲಿಯ ಪೂರ್ವ ವಿನೋದ್ ನಗರದಲ್ಲಿರುವ ರಾಜಕೀಯ ಸರ್ವೋದಯ ಕನ್ಯಾ ವಿದ್ಯಾಲಯ

ಪ್ರವೇಶ ಪಡೆಯಲು ತೀವ್ರ ಸ್ಪರ್ಧೆ; ಲಾಟರಿ ಮೂಲಕ ಆಯ್ಕೆ

ಡೆಲ್ಲಿ ಸ್ಕೂಲ್ ಮಾದರಿ

● ಸಿದ್ದಯ್ಯ ಹಿರೇಮಠ

ನವದೆಹಲಿ: ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿ (ಎಎಪಿ) ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೆಹಲಿಯ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಗಮನಾರ್ಹ ಸುಧಾರಣೆ ಕಂಡಿದೆ. ಮೂಲಸೌಲಭ್ಯ ಮತ್ತು ಕಲಿಕಾ ಗುಣಮಟ್ಟದ ಸುಧಾರಣೆಯಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ.

ಉತ್ತರ ಪ್ರದೇಶ, ಹರಿಯಾಣ, ರಾಜಸ್ಥಾನ, ಬಿಹಾರ, ಛತ್ತೀಸಗಡ, ಜಾರ್ಖಂಡ್, ಪಶ್ಚಿಮ ಬಂಗಾಳ ಹಾಗೂ ಈಶಾನ್ಯ ರಾಜ್ಯಗಳ ವಲಸಿಗರೇ ದೆಹಲಿಯಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದು, ಹೆಚ್ಚಿನವರು ಅಸಂಘಟಿತ ಕಾರ್ಮಿಕರಾಗಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ ಈ ಕಾರ್ಮಿಕರ ಮಕ್ಕಳಿಗೆ ಸುಲಭವಾಗಿ, ಸಮರ್ಪಕ ಶಿಕ್ಷಣ ದೊರಯಲಿ ಎಂಬ ಉದ್ದೇಶದಿಂದಲೇ ಸರ್ಕಾರ ಆದ್ಯತೆ ಮೇರೆಗೆ ಈ ಶಾಲೆಗಳನ್ನು ಅಭಿವೃದ್ಧಿಪಡಿಸಿದೆ.

ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟದ ಸುಧಾರಣೆಗಾಗಿ ವಿಶೇಷ ಕಾರ್ಯಕ್ರಮ ರೂಪಿಸಲಾಗಿದೆ. ಹಾಗಾಗಿ ಶಾಲೆಗಳಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. ದುಬಾರಿ ಶುಲ್ಕ ನೀಡಿ ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗದ ಕಾರಣ ಬಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ ಮೊಟಕುಗೊಳ್ಳುತ್ತಿತ್ತು. ಕೆಲವು ವರ್ಷಗಳಿಂದ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳನ್ನು ಮೀರಿಸುವಂತೆ ಸುಲಭದಲ್ಲೇ ಉತ್ತಮ ಶಿಕ್ಷಣ ದೊರೆಯುತ್ತಿದ್ದು, ಶೇ 95ರಷ್ಟು ಪಾಲಕರು ಸಂತುಷ್ಟರಾಗಿದ್ದಾರೆ. ಶಿಕ್ಷಣ ಕ್ಷೇತ್ರವನ್ನು ದೆಹಲಿ ಸರ್ಕಾರ ಆದ್ಯತಾ ಪಟ್ಟಿಯಲ್ಲಿ ಸೇರಿಸಿದ್ದು, ಒಟ್ಟು ಬಜೆಟ್‌ನ ಶೇಕಡ 25ರಷ್ಟು ಹಣವನ್ನು ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಜೆಇಇ ಮತ್ತು ನೀಟ್‌ನಲ್ಲೂ ಉತ್ತಮ ಸಂಖ್ಯೆಯಲ್ಲಿ ತೇರ್ಗಡೆ ಹೊಂದುತ್ತಿದ್ದಾರೆ. ಅನೇಕ ಬಡ ವಿದ್ಯಾರ್ಥಿಗಳು ಕೇಂದ್ರ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸುತ್ತಿರುವುದು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುತ್ತಿರುವುದು ಸರ್ಕಾರಿ ಶಾಲೆಗಳ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ.

ಕಲಿಕಾ ಮಟ್ಟದ ಸುಧಾರಣೆಗಾಗಿ ಸರ್ಕಾರಿ ಶಾಲೆಯ ಶಿಕ್ಷಕರಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಹಾಗೂ ದೇಶ- ವಿದೇಶಗಳಿಗೆ ವಿಶೇಷ ತರಬೇತಿ ಪಡೆಯಲು ಪ್ರೇರೇಪಿಸಲಾಗುತ್ತಿದೆ.

ಸರ್ಕಾರಿ ಶಾಲೆಗಳೂ ಸ್ಮಾರ್ಟ್!: ಪ್ರತಿ ಶಾಲೆಯಲ್ಲೂ ಸ್ಮಾರ್ಟ್ ತರಗತಿ, ಉತ್ತಮ ಪೀಠೋಪಕರಣ, ಸಭಾಭವನ, ಸುಸಜ್ಜಿತ ಪ್ರಯೋಗಾಲಯ, ಆಟದ ಮೈದಾನ, ನೈತಿಕ ಶಿಕ್ಷಣ, ಪಠ್ಯೇತರ ಚಟುವಟಿಕೆಗೂ ಗಮನಹರಿಸಿ ಮಕ್ಕಳ ಪ್ರತಿಭೆ ಪ್ರೋತ್ಸಾಹಿಸುವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಕರ್ನಾಟಕದ ವಿವಿಧೆಡೆ ವಿದ್ಯಾರ್ಥಿಗಳ ಕೊರತೆಯಿಂದ ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುತ್ತಿರುವುದು ಕಂಡುಬರುತ್ತಿದ್ದರೆ, ದೆಹಲಿ ಸರ್ಕಾರವು ಆಯ್ದ ಪ್ರದೇಶಗಳಲ್ಲಿ ಹೊಸದಾಗಿ 55 ಶಾಲೆ ಆರಂಭಿಸುವ ಯೋಜನೆಯನ್ನು ಕಳೆದ ವರ್ಷವೇ ರೂಪಿಸಿದೆ.

ಈಗಾಗಲೇ 25 ಹೊಸ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, 30 ಶಾಲೆಗಳ ಕಾಮಗಾರಿ ಪ್ರಗತಿಯಲ್ಲಿದೆ.

ಗುಣಮಟ್ಟ ಮತ್ತು ವಿದ್ಯಾರ್ಥಿಗಳ ಕೊರತೆಯಿಂದ ದೆಹಲಿಯ ಮೂರು ಮಹಾನಗರ ಪಾಲಿಕೆಗಳ (ಇವು ದೆಹಲಿ ಸರ್ಕಾರದ ವ್ಯಾಪ್ತಿಯ ಶಾಲೆಗಳಲ್ಲ) 109 ಶಾಲೆಗಳನ್ನು ಕಳೆದ ಎಂಟು ವರ್ಷದಲ್ಲಿ ಮುಚ್ಚಲಾಗಿದೆ. ಆ ಶಾಲೆಗಳ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1.40 ಲಕ್ಷ ವಿದ್ಯಾರ್ಥಿಗಳು ದೆಹಲಿ ಸರ್ಕಾರದ ವ್ಯಾಪ್ತಿಯ ಶಾಲೆಗಳಿಗೆ ಪ್ರವೇಶ ಪಡೆದಿದ್ದಾಗಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಈಗಾಗಲೇ ಅಸ್ತಿತ್ವದಲ್ಲಿರುವ ಶಾಲೆಗಳಲ್ಲಿ ಒಟ್ಟು 20,800 ಹೊಸ ಕೊಠಡಿಗಳನ್ನು ನಿರ್ಮಿಸುವ ಗುರಿ ಸರ್ಕಾರದ್ದಾಗಿದೆ. ಈ ಪೈಕಿ 8,095 ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಇನ್ನೂ 12,762 ಕೊಠಡಿಗಳ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

ಮಧ್ಯಮ, ಮೇಲ್ಮಧ್ಯಮ ವರ್ಗದ ವಿದ್ಯಾರ್ಥಿಗಳನ್ನೂ ಸರ್ಕಾರಿ ಶಾಲೆಗಳತ್ತ ಆಕರ್ಷಿಸಲು ಪೌಷ್ಟಿಕ ಆಹಾರ ಹಾಗೂ ಶುದ್ಧ ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಲಾಗಿದೆ. ಸ್ವಚ್ಛತೆ, ವೈದ್ಯಕೀಯ ವ್ಯವಸ್ಥೆ, ಕ್ರೀಡಾಪಟುಗಳಿಗೆ ಪ್ರೋತ್ಸಾಹ, ಆಕರ್ಷಕ ಸಮವಸ್ತ್ರ, ಬ್ಯಾಗ್, ಶೂ, ಗುರುತಿನ ಚೀಟಿ ವಿತರಣೆ ಮೂಲಕ ವಿದ್ಯಾರ್ಥಿಗಳಲ್ಲಿ 'ನಾವು ಯಾರಿಗೇನು ಕಡಿಮೆ' ಎಂಬ ಭಾವ ಮೂಡಿಸಲಾಗಿದೆ.

ಪ್ರತಿ ಸರ್ಕಾರಿ ಶಾಲೆಗಳಲ್ಲಿಯೂ ನರ್ಸರಿ, ಕೆ.ಜಿ. ತರಗತಿ ಆರಂಭಿಸಲಾಗುತ್ತಿದೆ. ನರ್ಸರಿ, ಕೆ.ಜಿ. ಮತ್ತು 1ನೇ ತರಗತಿಗೆ ಪ್ರವೇಶ ಪಡೆಯಲು ತೀವ್ರ ಸ್ಪರ್ಧೆ ಇದೆ. ಪ್ರವೇಶ ಕೋರಿ ಹೆಚ್ಚು ಅರ್ಜಿ ಬರುತ್ತಿರುವುದರಿಂದ ಲಾಟರಿ ಮೂಲಕ ಪ್ರವೇಶವನ್ನು ನಿರ್ಧರಿಸಲಾಗುತ್ತದೆ.

ಈಡೇರದ 'ಕರ್ನಾಟಕ ಪಬ್ಲಿಕ್ ಶಾಲೆ'ಗಳ ಆಶಯ

● ಚಂದ್ರಶೇಖರ್ ಆರ್.

ದಾವಣಗೆರೆ: ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಿಸಲು ಹಾಗೂ ಒಂದೇ ಸೂರಿನಡಿ ಎಲ್‌ಕೆಜಿಯಿಂದ ಪಿಯುಸಿಯವರೆಗೆ ಶಿಕ್ಷಣ ನೀಡುವ ಉದ್ದೇಶದಿಂದ ಆರಂಭಿಸಿರುವ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳ ಉದ್ದೇಶ ಇನ್ನೂ ಈಡೇರಿಲ್ಲ.

ರಾಜ್ಯ ಸರ್ಕಾರವು 2018–19ನೇ ಸಾಲಿನಲ್ಲಿ ಪಬ್ಲಿಕ್ ಶಾಲೆಗಳನ್ನು ಆರಂಭಿಸಿದ್ದು, ಮಕ್ಕಳ ಕಲಿಕಾ ಸಾಮರ್ಥ್ಯದ ಬಗ್ಗೆ ವಿಶ್ವಾಸಾರ್ಹತೆ ಮೂಡಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ರಾಜ್ಯದಲ್ಲಿ ಒಟ್ಟು 264 ಕರ್ನಾಟಕ ಪಬ್ಲಿಕ್ ಶಾಲೆಗಳಿವೆ. ಈ ಶಾಲೆಗಳಲ್ಲಿ ದಾಖಲಾತಿಗೆ ಮಕ್ಕಳ ಪೋಷಕರು ಆಸಕ್ತಿ ತೋರುತ್ತಿದ್ದರೂ ಮೂಲಸೌಕರ್ಯಗಳಿಲ್ಲದೆ ಸೊರಗುತ್ತಿವೆ.

ಪ್ರೌಢಶಿಕ್ಷಣ ಮಂಡಳಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಬೇರೆ ಬೇರೆಯಾಗಿರುವುದರಿಂದ ಎಲ್‌ಕೆಜಿಯಿಂದ ಪಿಯುಸಿಯವರೆಗೆ ಒಂದೇ ಸೂರಿನಡಿ ತರಲು ಸಮಸ್ಯೆಯಾಗಿದೆ. ಪಬ್ಲಿಕ್ ಶಾಲೆಗಳ ಜವಾಬ್ದಾರಿ ತೆಗೆದುಕೊಳ್ಳಲು ಕೆಲ ಪಿಯು ಕಾಲೇಜುಗಳ ಪ್ರಾಚಾರ್ಯರು ಹಿಂದೇಟು ಹಾಕುತ್ತಿದ್ದಾರೆ.

ಮೊದಲಿನಂತೆ 8ನೇ ತರಗತಿಯನ್ನು ಪ್ರೌಢಶಾಲಾ ವಿಭಾಗಕ್ಕೆ ಸೇರಿಸಬೇಕೆಂಬ ಬೇಡಿಕೆ ಇದೆ. ಪಬ್ಲಿಕ್ ಶಾಲೆಗಳೆಲ್ಲಾ ಒಂದೇ ಸೂರು ಎಂದಾಗ 8ನೇ ತರಗತಿಯನ್ನು ಮಾತ್ರ ಪ್ರಾಥಮಿಕಕ್ಕೆ ಸೇರಿಸುವುದು ಏಕೆ ಎಂಬ ಪ್ರಶ್ನೆ ಹಲವು ಶಿಕ್ಷಕರದ್ದು.

'ಕೆಲ ಸಮಸ್ಯೆಗಳ ಹೊರತಾಗಿಯೂ ಪಬ್ಲಿಕ್ ಶಾಲೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕಟ್ಟಡ, ಶಿಕ್ಷಕರ ಕೊರತೆ ಸಂಬಂಧ ಅನುದಾನಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಶಿವಮೊಗ್ಗದ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ತಿಳಿಸಿದರು.

ದಾವಣಗೆರೆ ಜಿಲ್ಲೆ ಸಂತೇಬೆನ್ನೂರರಿನ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣ ಸ್ವಚ್ಛತೆ ಮಾಡುತ್ತಿರುವ ಶಿಕ್ಷಕರು

'ಚಿತ್ರದುರ್ಗ ಜಿಲ್ಲೆಯ ಪಬ್ಲಿಕ್ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ದಾಖಲಾತಿ ಸಂಖ್ಯೆ ಹೆಚ್ಚಾಗುತ್ತಿದೆ. ಕಲಿಕಾ ಉಪಕರಣಗಳು, ವಿಜ್ಞಾನ ಪ್ರಯೋಗಾಲಯ ಹಾಗೂ ನುರಿತ ಶಿಕ್ಷಕರಿಂದ ತರಬೇತಿ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳ ಕಲಿಕಾ ಮಟ್ಟ ಹೆಚ್ಚುತ್ತಿದೆ' ಎನ್ನುತ್ತಾರೆ ಚಿತ್ರದುರ್ಗದ ಬಿ.ಜಿ.ಕೆರೆ ಕರ್ನಾಟಕ ಪಬ್ಲಿಕ್ ಶಾಲೆ ಉಪ ಪ್ರಾಂಶುಪಾಲ ಎಂ.ಮಲ್ಲಿಕಾರ್ಜುನ್.

'ಗ್ರಾಮೀಣ ಭಾಗದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ಪ್ರಾರಂಭಿಸಿದ್ದು, ಮಕ್ಕಳ ಕಲಿಕೆಗೆ ಬಹಳ ಸಹಕಾರಿಯಾಗಿದೆ. ಖಾಸಗಿ ಶಾಲೆಯಲ್ಲಿ ಓದುತ್ತಿದ್ದ ಮಗಳನ್ನು ಈ ಶಾಲೆಗೆ ದಾಖಲಿಸಿದ್ದೇನೆ' ಎಂದು ಮರಡಿಹಳ್ಳಿಯ ವಿ.ರಘುನಾಥ್ ಹೇಳಿದರು.

'ಮಕ್ಕಳ ಸಂಖ್ಯೆಗನುಗುಣವಾಗಿ ಈ ಶಾಲೆಗಳಲ್ಲಿ ಶಿಕ್ಷಕರು ಇಲ್ಲ. ಕೊಠಡಿಗಳ ನಿರ್ಮಾಣವಾಗಿಲ್ಲ' ಎಂದು ಸಾಸ್ವೆಹಳ್ಳಿಯ ಶಾಲೆಯ ಹೆಸರು ಬಹಿರಂಗಪಡಿಸಲು ಬಯಸದ ಶಿಕ್ಷಕರೊಬ್ಬರು ತಿಳಿಸಿದರು.

ಜೀವಭಯದಲ್ಲಿಯೇ ಪಾಠ ಆಲಿಸುವ ವಿದ್ಯಾರ್ಥಿಗಳು

ಸೋರುತಿಹುದು, ಬೀಳುತಿಹುದು ಶಾಲೆ ಮಾಳಿಗೆ...

● ಬಸವರಾಜ ಹವಾಲ್ದಾರ

ಬಾಗಲಕೋಟೆ: ಚಾವಣಿಯ ಸಿಮೆಂಟ್ ಕಿತ್ತು ಕಬ್ಬಿಣದ ಸರಳುಗಳು ಕಾಣುತ್ತಿವೆ. ಹೆಂಚುಗಳು ಒಡೆದು ಅದರೊಳಗಿಂದ ಸೂರ್ಯನ ಕಿರಣಗಳು ಕೊಠಡಿಯೊಳಕ್ಕೆ ಬರುತ್ತವೆ. ಮಳೆ, ಗಾಳಿಗೆ ತಗಡಿನ ಶೀಟ್‌ಗಳು ಹಾರಿಹೋಗಿವೆ. ಮಳೆ ಬಂದರೆ ನೆನೆದುಕೊಂಡೇ ಪಾಠ ಕೇಳಬೇಕಾದ ಸ್ಥಿತಿ ರಾಜ್ಯದ ಹಲವು ಶಾಲೆಗಳಲ್ಲಿದೆ.

ಬಾಗಲಕೋಟೆಯ ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗಳು ಶಿಥಿಲಗೊಂಡಿವೆ. ಇಲ್ಲಿ ಏಳನೇ ತರಗತಿಯವರೆಗೆ ಅವಕಾಶ ಇದ್ದು, 395 ಮಕ್ಕಳು ಓದುತ್ತಿದ್ದಾರೆ. ಶಾಲೆಯ ಆಟದ ಮೈದಾನದಲ್ಲಿಯೇ ಪಾಠ ಮಾಡಬೇಕಾದ ಸ್ಥಿತಿ ಇದೆ.

ಹುನಗುಂದ ತಾಲ್ಲೂಕಿನ ಕೌಜಗನೂರು ಶಾಲೆಯ ಚಾವಣಿಯ ಸಿಮೆಂಟ್ ಉದುರಿ ಬಿದ್ದಿದ್ದು, ಸರಳುಗಳು ಕಾಣಿಸುತ್ತಿವೆ. ಶಾಲೆಯ ಐದು ಕೊಠಡಿಗಳಲ್ಲಿ ಮೂರು ಕೊಠಡಿಗಳು ಶಿಥಿಲಗೊಂಡಿವೆ. ಒಂದೇ ಕೊಠಡಿಯಲ್ಲಿ ಮಕ್ಕಳು ಪಾಠ ಕೇಳಬೇಕಾಗಿದೆ.

ಶಿವಮೊಗ್ಗ ನಗರದ ನ್ಯೂ ಮಂಡ್ಲಿಯಲ್ಲಿರುವ ಶಾಲೆಯ ಕೊಠಡಿಗಳೆಲ್ಲ ಸೋರುತ್ತಿವೆ. ಈಗಲೋ, ಆಗಲೋ ಬೀಳುವ ಸ್ಥಿತಿಯಲ್ಲಿರುವ ಕೊಠಡಿಗಳಲ್ಲಿ ಜೀವ ಕೈಯಲ್ಲಿ ಹಿಡಿದುಕೊಂಡು ವಿದ್ಯಾರ್ಥಿಗಳು ಪಾಠ ಕೇಳುತ್ತಿದ್ದಾರೆ.

ಇದು ಒಂದೆರಡು ಶಾಲೆಗಳ ಕಥೆಯಲ್ಲ. ಸಾವಿರಾರು ಶಾಲೆಗಳ ಸ್ಥಿತಿ ಹೀಗೆಯೇ ಇದೆ. ಶತಮಾನಗಳ ಶಾಲೆಗಳು ಹೊಸ ಕಟ್ಟಡವನ್ನೇ ಕಂಡಿಲ್ಲ. ಇಂದೋ, ನಾಳೆಯೋ ಬೀಳುವಂತಹ ಸ್ಥಿತಿಗಳಲ್ಲಿರುವ ಶಾಲೆಯಲ್ಲಿಯೇ ಕಲಿಸಬೇಕಾಗಿದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೌಜಗನೂರು ಗ್ರಾಮದ ಸರ್ಕಾರಿ ಶಾಲೆಯ ಚಾವಣಿ ಸಿಮೆಂಟ್ ಕಿತ್ತು ಹೋಗಿರುವುದು

ಪ್ರತಿ ವರ್ಷ ಹತ್ತಾರು ಕೋಟಿ ಖರ್ಚು ಮಾಡಿ ಕೊಠಡಿಗಳ ದುರಸ್ತಿ ಮಾಡಲಾಗುತ್ತಿದೆ. ಹೊಸ ಕೊಠಡಿಗಳ ನಿರ್ಮಾಣ ಕಾರ್ಯವೂ ನಡೆದಿದೆ. ಆದರೆ, ಹಳೆಯದಾದ, ಮಳೆ, ಪ್ರವಾಹದಿಂದ ಹಾನಿಗೊಳಗಾಗುವ ಕೊಠಡಿಗಳ ಸಂಖ್ಯೆ ಅದಕ್ಕಿಂತಲೂ ಹೆಚ್ಚಿದೆ.

ಬೆಳಗಾವಿ ವಿಭಾಗದಲ್ಲಿ 8,103 ಕೊಠಡಿಗಳು ದುರಸ್ತಿ ಕಾಣಬೇಕಿದೆ. ದುರಸ್ತಿಗಾಗಿ ₹60 ಕೋಟಿ ಮೊತ್ತದ ಪ್ರಸ್ತಾವವನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿದ್ದಾರೆ. 3,500ಕ್ಕೂ ಹೆಚ್ಚು ಹೊಸ ಕೊಠಡಿಗಳಿಗೆ ಬೇಡಿಕೆ ಇದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಲೂ 807 ಶಾಲೆಗಳು ಮಣ್ಣಿನ ಗೋಡೆ ಹೊಂದಿವೆ. ಅಷ್ಟೂ ಶಾಲೆಗಳನ್ನು ನಿರ್ಮಾಣ ಮಾಡುವ ಕೆಲಸ ಆಗಬೇಕಿದೆ. ಇದೇ ರೀತಿ ರಾಜ್ಯದ ವಿವಿಧೆಡೆಗಳಲ್ಲಿಯೂ ಮಣ್ಣಿನ ಶಾಲೆಗಳಿವೆ.

ಹೊಸ ಶಾಲೆಗಳನ್ನು ಮಂಜೂರು ಮಾಡಲಾಗುತ್ತದೆ. ಆದರೆ, ವಿದ್ಯಾರ್ಥಿಗಳ ಪ್ರವೇಶಕ್ಕೆ ತಕ್ಕಂತೆ ಕೊಠಡಿಗಳ ನಿರ್ಮಾಣ ಮಾಡುವುದಿಲ್ಲ. ಎಷ್ಟೋ ಶಾಲೆಗಳಲ್ಲಿ ಮೂರ್ನಾಲ್ಕು ತರಗತಿಗಳನ್ನು ಒಂದೇ ಕೊಠಡಿಯಲ್ಲಿ ಕಲಿಸಬೇಕಾದ ಸ್ಥಿತಿ ಇದೆ.

ವರ್ಷ	ಹೊಸ ಕೊಠಡಿಗಳ ನಿರ್ಮಾಣ ವಿವರ: ಕೊಠಡಿಗಳ ಸಂಖ್ಯೆ	ಮೊತ್ತ (₹ಕೋಟಿಗಳಲ್ಲಿ)	ದುರಸ್ತಿಗೊಳಿಸಿದ ಕೊಠಡಿಗಳ ವಿವರ: ಕೊಠಡಿಗಳ ಸಂಖ್ಯೆ	ಮೊತ್ತ (₹ಕೋಟಿಗಳಲ್ಲಿ)
2018-19	2,909	174	4,195	424
2019-20	973	219	5,003	368
2020-21	1,483	650	187	47

ಶೈಕ್ಷಣಿಕ 'ಪ್ರಗತಿ' ಅಧೋಗತಿ

ಒಂದನೇ ಪುಟದಿಂದ...

ಅದಕ್ಕೂ 10 ವರ್ಷಗಳ ಹಿಂದೆ ನಡೆದ ಸಮೀಕ್ಷೆ (2008), ಶೇ 45ರಷ್ಟು ಮಕ್ಕಳಿಗೆ ಗಣಿತದಲ್ಲಿ ವ್ಯವಕಲನ ಗೊತ್ತಿಲ್ಲ, ಶೇ 33 ಮಕ್ಕಳು ಒಂದನೇ ತರಗತಿಯ ಪಠ್ಯ ಓದಲಾರರೆಂದೂ ತೋರಿಸಿತ್ತು!

ಶಿಕ್ಷಣದ ಗುಣಮಟ್ಟವು ಮೂಲಸೌಕರ್ಯ ಲಭ್ಯತೆ, ಬಳಕೆ ಮತ್ತು ವಿದ್ಯಾರ್ಥಿಗಳ ಕಲಿಕಾ ಸಾಧನೆಯೊಂದಿಗೆ ಥಳಕು ಹಾಕಿಕೊಂಡಿದೆ. ಆದರೆ, ಕಳೆದ ಐದು ವರ್ಷಗಳಲ್ಲಿ ಅದನ್ನು ಅಳೆದು, ಸುಧಾರಿಸುವ ಯತ್ನಕ್ಕೆ ರಾಜ್ಯ ಸರ್ಕಾರ ಮುಂದಾಗಿಲ್ಲ ಎನ್ನುವುದು ಸತ್ಯ.

2019-20, 2020-21, 2021-22ನೇ ಸಾಲಿನಲ್ಲಿ ಕೆಎಸ್‌ಕ್ಯೂಎಎಸಿ ಯಾವುದೇ ಸಮೀಕ್ಷೆ ಕೈಗೊಂಡಿಲ್ಲ. ಸಮೀಕ್ಷೆ ನಡೆಸುವ ಉದ್ದೇಶಕ್ಕಾಗಿ 2019-20ರಲ್ಲಿ ₹ 10 ಕೋಟಿ ಅನುದಾನವನ್ನು ಕೆಎಸ್‌ಕ್ಯೂಎಎಸಿಗೆ ರಾಜ್ಯ ಸರ್ಕಾರ ನೀಡಿತ್ತು. ಆ ಸಾಲಿನಲ್ಲಿ ಕೇಂದ್ರ ಸರ್ಕಾರ 'ರಾಷ್ಟ್ರೀಯ ಸಾಧನಾ ಸಮೀಕ್ಷೆ' ನಡೆಸಲಿದೆ ಎಂಬ ಕಾರಣಕ್ಕೆ ರಾಜ್ಯಮಟ್ಟದಲ್ಲಿ ಸಮೀಕ್ಷೆ ನಡೆಸುವ ಯೋಜನೆ ಕೈ ಬಿಡಲಾಗಿತ್ತು. ಆದರೆ, ಆ ಸಾಲಿನಲ್ಲಿ ಬಿಡುಗಡೆಯಾಗಿದ್ದ ಅನುದಾನ ಅನ್ಯ ಉದ್ದೇಶಕ್ಕೆ ಬಳಕೆ ಆಗಿದೆ. ಕೋವಿಡ್ ಕಾರಣಕ್ಕೆ ಎರಡು ವರ್ಷ (2020-21, 2021-22) ಶಾಲೆಗಳು ನಡೆದಿಲ್ಲವೆಂಬ ನೆಪ ಮುಂದಿಟ್ಟು ಮಕ್ಕಳ ಕಲಿಕಾ ಮಟ್ಟ ಅಳೆಯುವ ಉಸಾಬರಿಗೆ ರಾಜ್ಯ ಸರ್ಕಾರ ಹೋಗಿಲ್ಲ.

ವಿದ್ಯಾರ್ಥಿಗಳ ಸಾಧನಾ ಸಮೀಕ್ಷೆಯನ್ನು ಸಂಪೂರ್ಣವಾಗಿ ವಸ್ತುನಿಷ್ಠವಾಗಿ ಅಧ್ಯಯನ ಮಾಡಿದಾಗ ಮಕ್ಕಳು ಶಾಲೆಗಳಲ್ಲಿ ಏನನ್ನು ಕಲಿತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಸಮೀಕ್ಷೆಯಲ್ಲಿ 4ರಿಂದ 10ನೇ ತರಗತಿವರೆಗಿನ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳ ಸಾಧನೆಯನ್ನು ಬಹುಆಯ್ಕೆ ಮಾದರಿ ಪ್ರಶ್ನೆಗಳಿಗೆ ಉತ್ತರ ಪಡೆಯುವ ಮೂಲಕ ವಿಶ್ಲೇಷಿಸಲಾಗುತ್ತದೆ. ಈ ಪ್ರಶ್ನೆಗಳಿಗೆ ಮಕ್ಕಳು ನೀಡುವ ಉತ್ತರಗಳ ಆಧಾರದಲ್ಲಿ ರಾಜ್ಯದ ಶಿಕ್ಷಣ ವ್ಯವಸ್ಥೆ ಯಾವ ಮಟ್ಟದಲ್ಲಿದೆ ಎಂದು ಅರ್ಥೈಸಿಕೊಳ್ಳಬಹುದು.

ಕಲಿಕಾಮಟ್ಟ ಗ್ರಹಿಸಲು ಈ ವರ್ಷ ಸಮೀಕ್ಷೆ

ಒಂದನೇ ಪುಟದಿಂದ...

ಈ ಸಮೀಕ್ಷೆಯನ್ನು ₹ 1.89 ಕೋಟಿ ವೆಚ್ಚದಲ್ಲಿ (ಕೇಂದ್ರದ ಅನುದಾನ) ಕೈಗೊಳ್ಳುವ ಅಂಶ ಈ ಪ್ರಸ್ತಾವದಲ್ಲಿದೆ. ಪಿಎಬಿ ಅನುಮೋದನೆ ನೀಡದೇ ಇದ್ದರೆ, ಕೆಎಸ್‌ಕ್ಯೂಎಎಸಿ ಮೂಲಕ, 2018ನೇ ಸಾಲಿನಲ್ಲಿ 8,9 ಮತ್ತು 10ನೇ ತರಗತಿಯ ಮಕ್ಕಳ ಕಲಿಕಾಮಟ್ಟ ಗ್ರಹಿಸಲು ಈ ವರ್ಷ ಸಮೀಕ್ಷೆ ನಡೆಸಲು ಉದ್ದೇಶಿಸಲಾಗಿದೆ. ಈ ಸ್ಯಾಂಪಲ್ ಸಮೀಕ್ಷೆಗೆ ಕೆಎಸ್‌ಕ್ಯೂಎಎಸಿಯಲ್ಲಿರುವ ₹1.50 ಕೋಟಿ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'1ನೇ ತರಗತಿಯಿಂದ 9ನೆಯ ತರಗತಿಯವರೆಗೆ ಅನುತ್ತೀರ್ಣರಹಿತ ಪದ್ಧತಿಯು 10ನೇ ತರಗತಿಯ ಮಕ್ಕಳ ಕಳಪೆ ಸಾಧನೆಗೆ ಪ್ರಮುಖ ಕಾರಣ ಎನ್ನುವುದು ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ವಿಶ್ಲೇಷಿಸಿದಾಗ ಗೊತ್ತಾಗುತ್ತದೆ. ಹೇಗೂ ಪಾಸಾಗುತ್ತೇವೆ ಎಂಬ ನಂಬಿಕೆ ಮಕ್ಕಳಲ್ಲಿದೆ. ಹೀಗಾಗಿ, ಅಧ್ಯಯನದ ಬಗ್ಗೆ ಗಾಂಭೀರ್ಯ ಉಳಿದಿಲ್ಲ. ಪ್ರಾಥಮಿಕ ಶಾಲೆಯಲ್ಲಿ ಅದರಲ್ಲೂ ಕಿರಿಯ ಪ್ರಾಥಮಿಕ ಶಾಲೆಯಲ್ಲಿಯೇ ವಿದ್ಯಾರ್ಥಿಗಳೂ ಓದಲು ಬರೆಯಲು ಹಾಗೂ ಲೆಕ್ಕ ಮಾಡಲು ಅಸಮರ್ಥರಾಗಿದ್ದಾರೆ. ವರ್ಣಮಾಲೆ, ಕೂಡುವ, ಕಳೆಯುವ ಲೆಕ್ಕಗಳನ್ನು 9ನೆಯ ತರಗತಿಗೆ ಹೇಳಿ ಕೊಡಬೇಕಾದ ಪರಿಸ್ಥಿತಿ ಬಂದೊದಗಿದೆ' ಎನ್ನುವುದು ಶಿಕ್ಷಣ ತಜ್ಞರ ವಾದ.

ರಾಜ್ಯದಲ್ಲಿ ಮೂಲಸೌಲಭ್ಯ ಕೊರತೆಯಿಂದ ಅನೇಕ ಸರ್ಕಾರಿ ಶಾಲೆಗಳು ವೆಂಟಿಲೇಟರ್ ಮೇಲಿರುವ ರೋಗಿಗಳ ಸ್ಥಿತಿಯಲ್ಲಿವೆ. ಕರ್ನಾಟಕದಲ್ಲಿ ಪ್ರತಿ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಸಾವಿರಾರು ಕೋಟಿ ಘೋಷಿಸಿದರೂ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ಉತ್ತಮ ಕಲಿಕೆ ವ್ಯವಸ್ಥೆ, ಮೂಲಸೌಕರ್ಯದ ಕೊರತೆ ಇದೆ ಎಂದರೆ ಘೋಷಿಸಿದ ಹಣವೆಲ್ಲ ಎಲ್ಲಿ ತಲುಪಿದೆ? ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ ಎನ್ನುವುದು ಶೈಕ್ಷಣಿಕ ವಲಯದ ಒತ್ತಾಯ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 12-6-1997

● ಗಡಿಯಲ್ಲಿ ಪೃಥ್ವಿ ಕ್ಷಿಪಣಿ ಸಜ್ಜು ಇಲ್ಲ: ಗುಜ್ರಾಲ್

ಪುಣೆ, ಜೂನ್ 12 (ಪಿಟಿಐ, ಯುಎನ್‌ಐ) – ಪಾಕಿಸ್ತಾನ ಗಡಿಯ ಬಳಿ ಸ್ವದೇಶಿ ನಿರ್ಮಿತ ಪೃಥ್ವಿ ಕ್ಷಿಪಣಿಯನ್ನು ಭಾರತವು ಸನ್ನದ್ಧಗೊಳಿಸಿದೆ ಎಂಬ ವರದಿಯನ್ನು ಪ್ರಧಾನಿ ಐ.ಕೆ. ಗುಜ್ರಾಲ್ ಇಂದು ಇಲ್ಲಿ ಸ್ಪಷ್ಟವಾಗಿ ಅಲ್ಲಗಳೆದರು.

ಸುಖೋಯಿ – 30 ಯುದ್ಧ ವಿಮಾನಗಳನ್ನು ಭಾರತೀಯ ವಾಯು ಪಡೆಗೆ ಅಧಿಕೃತ ಸೇರ್ಪಡೆ ಸಮಾರಂಭದ ನಂತರ, ಇಲ್ಲಿನ ವಾಯುನೆಲೆಯಲ್ಲಿ ಸುದ್ದಿಗಾರರ ಜೊತೆ ಅವರು ಮಾತನಾಡುತ್ತಿದ್ದರು.

'ಪೃಥ್ವಿ ಕ್ಷಿಪಣಿಯ ಬಗ್ಗೆ ಈಗ ಉಂಟಾದ ವಿವಾದದಲ್ಲಿ ಸತ್ಯಾಂಶವಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 12-6-1972

● ಸೋಷಲಿಸ್ಟ್ ಐಕ್ಯಮತ್ಯಕ್ಕೆ ಕೊನೇಗಳಿಗೆ ಯತ್ನ ವಿಫಲ

ಪಟನಾ, ಜೂನ್ 11 — 'ರಾಜ್ ನಾರಾಯಣ್ ಗುಂಪು ಮತ್ತು ಅಧಿಕೃತ ಸೋಷಲಿಸ್ಟ್ ಪಕ್ಷದ ನಡುವಣ ಐಕ್ಯಮತ್ಯಕ್ಕಾಗಿ ಸೋಷಲಿಸ್ಟ್ ಪಕ್ಷದ ಮಾಜಿ ಅಧ್ಯಕ್ಷ ಶ್ರೀ ಕರ್ಪೂರಿ ಠಾಕೂರ್ ಮತ್ತು ಹಿರಿಯ ನಾಯಕ ಮಾಮಾ ಬಾಲೇಶ್ವರ ದಯಾಳ್ ಅವರು ನಡೆಸಿದ ಕೊನೇಗಳಿಗೆಯ ಯತ್ನ ಇಂದು ವಿಫಲವಾಯಿತು. ಸೂತ್ರವೊಂದರ ಕಾರ್ಯಗತಕ್ಕಾಗಿ ಈ ನಾಯಕರಿಬ್ಬರೂ ಶ್ರಮಿಸಿದರು. ಅಧಿಕೃತ ಪಕ್ಷವು ಶ್ರೀ ರಾಜ್ ನಾರಾಯಣ್ ಹಾಗೂ ಇತರರ ವಿರುದ್ಧದ ಸಸ್ಪೆಂಡ್ ಆಜ್ಞೆಯನ್ನು ರದ್ದು ಮಾಡಬೇಕು ಎಂಬುದು ಈ ಸೂತ್ರದ ಸಾರಾಂಶ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ತ್ರಯೋದಶಿ ಗಂ. 24-27 ನಕ್ಷತ್ರ: ವಿಶಾಖಾ ಗಂ. 23-59 ಯೋಗ: ಶಿವ ಗಂ. 17-26, ಕರಣ: ಕೌಲವ ಗಂ. 13-59, ವೃಷಭ ಮಾಸದ 28 ನೇ ದಿನ.
ರಾಹುಕಾಲ : ಸಾಯಂಕಾಲ 04:30–06:00
ಸೂರ್ಯೋದಯ : 06-07 ಸೂರ್ಯಾಸ್ತ : 06-54 ಮುಸ್ಲಿಂ ದಿನಾಂಕ : 12 ಜುಲ್ಕಾಯಿದ್
ದಿನ ವಿಶೇಷ : ಪಕ್ಷ ಪ್ರದೋಷ, ಟ್ರನಿಟಿ ಭಾನುವಾರ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 5, 7

ಮೇಷ: ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ. ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವ. ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ವಿಶ್ರಾಂತಿ ಬಯಸುವಿರಿ.

ವೃಷಭ: ಕಟ್ಟಡ ಗುತ್ತಿಗೆದಾರರಿಗೆ ಆರ್ಥಿಕವಾಗಿ ನಷ್ಟ ಮತ್ತು ಕಾರ್ಮಿಕರ ಕೊರತೆ ಉಂಟಾಗುವುದು. ಕಾರ್ಮಿಕರಲ್ಲಿನ ಭಿನ್ನಾಭಿಪ್ರಾಯಗಳು ಬಾರದಂತೆ ಎಚ್ಚರವಹಿಸಿ. ಕುಲದೇವರ ಸೇವೆಯಿಂದ ಹೆಚ್ಚಿನ ಫಲ ಲಭಿಸಲಿದೆ.

ಮಿಥುನ: ಜನರನ್ನು ಆಕರ್ಷಿಸುವ ಕಲೆ ನಿಮಗೆ ಕರಗತವಾಗಿದೆ. ನೀವು ಭರವಸೆಯಂತೆ ನಡೆದುಕೊಳ್ಳುವಿರಿ. ಎಲ್ಲಾ ವಿಷಯಗಳನ್ನು ಅವಲೋಕಿಸಲು ಇದು ಒಳ್ಳೆಯ ದಿನ. ಮನೋಭಿಲಾಷೆ ಪೂರೈಸಲು ವಾಮಮಾರ್ಗ ಸರಿಯಲ್ಲ.

ಕರ್ಕಾಟಕ: ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ನಿಮ್ಮ ತಾಯಿಗೆ ಕಣ್ಣಿನ ದೋಷ ಕಾಣಿಸಿಕೊಂಡಲ್ಲಿ ತಕ್ಷಣ ವೈದ್ಯರನ್ನು ಭೇಟಿಮಾಡಿ. ಭಿನ್ನಾಭಿಪ್ರಾಯಗಳಿಗೆ ಹೆಚ್ಚು ಪ್ರತಿಕ್ರಿಯಿಸುವುದು ಸಮಂಜಸವಲ್ಲ.

ಸಿಂಹ: ಯಾರ ನೆರವೂ ಇಲ್ಲದೆ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವುದು ಉತ್ತಮ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ. ನಿಮ್ಮ ಸೋಲನ್ನು ಬಯಸುವವರ ಸಂಖ್ಯೆಯಲ್ಲಿ ಇಳಿಮುಖ.

ಕನ್ಯಾ: ಗಣ್ಯ ವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ, ಗೌರವ ಲಭ್ಯ. ನಿಮ್ಮ ಆರೋಗ್ಯವು ದಿನದಿಂದ ದಿನಕ್ಕೆ ಸುಧಾರಣೆ. ಅಗ್ನಿ ಅನಾಹುತಗಳಿಂದಾಗಿ ದೇಹಕ್ಕೆ ಗಾಯಗಳಾಗುವ ಸಾಧ್ಯತೆಗಳಿವೆ. ಎಚ್ಚರದಿಂದಿರಿ.

ತುಲಾ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೂ ಸೂಕ್ತವಾದ ಪರಿಹಾರ ಸಿಗಲಿದೆ. ಗಣನೀಯವಾದ ಆದಾಯವಿದ್ದರೂ, ಮನರಂಜನ ಬಯಕೆಯಿಂದಾಗಿ ಖರ್ಚುಗಳು ಸಂಭವ.

ವೃಶ್ಚಿಕ: ನಿಮ್ಮ ಎಣಿಕೆಯಂತೆ ಕಾರ್ಯಗಳ ಸಿದ್ಧಿ. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿದೆ. ಆಮದು ಆಹಾರ ಪದಾರ್ಥಗಳಿಂದ ಹಾಗು ಕಾಡು ಉತ್ಪನ್ನಗಳ ಮಾರಟದಿಂದ ಲಾಭ ಸಿಗಲಿದೆ.

ಧನು: ಬಾಕಿ ಇರಿಸಿದ ಕೆಲಸ ಕಾರ್ಯಗಳು ಸದ್ಯದಲ್ಲೇ ಪೂರ್ಣಗೊಳ್ಳಲಿದೆ. ಪರಸ್ಪರ ಕಾಳಜಿ ಬಗ್ಗೆ ಪಾಲುದಾರರು ಸಂತಸದ ಒಪ್ಪಿಗೆ ನೀಡುತ್ತಾರೆ. ಎಚ್ಚರಿಕೆ ಹೆಜ್ಜೆ ಹೆಜ್ಜೆಗೂ ಅಗತ್ಯ. ವಾತ-ಪಿತ್ತಗಳ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ.

ಮಕರ: ವಸ್ತ್ರ ವಿನ್ಯಾಸಗಾರರಿಗೆ ವಿಶೇಷ ಪರಿಣಿತಿಯ ಅಗತ್ಯವಿದೆ. ಹೆಚ್ಚಿನ ಪರಿಶ್ರಮದಿಂದ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು. ಒಂದು ವಿಚಾರದಲ್ಲಿ ಆಳವಾದ ಅಧ್ಯಯನದ ಬಳಿಕ ತೀರ್ಮಾನ ತೆಗೆದುಕೊಳ್ಳಿ.

ಕುಂಭ: ಆಲಸ್ಯತನವನ್ನು ದೂರಮಾಡುವುದು ಒಳ್ಳೆಯದು. ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ. ಎಂಜಿನಿಯರಿಂಗ್ ವ್ಯಾಸಂಗ ಮಾಡುವವರಿಗೆ ಹೆಚ್ಚಿನ ಉತ್ತೇಜನ.

ಮೀನ: ತಂದೆಯಾಗುವ ಶುಭ ಸುದ್ದಿ ಕೇಳಿ ಬರುವುದು. ಕಲುಷಿತ ಆಹಾರ ಸೇವನೆಯಿಂದ ವೈದ್ಯರ ದರ್ಶನದ ಸಂಭವ. ಪಾಲುದಾರಿಕೆಯಂತಹ ಒಪ್ಪಂದ ವ್ಯವಹಾರಗಳು ಕೈಗೂಡುವುದು. ಆರ್ಥಿಕ ವ್ಯಯವೂ ಸಹ ಅನಿವಾರ್ಯ.

ಪದಬಂಧ 4986 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಂಗಿಯನ್ನು ಅರ್ಧ ಮಾಡಿರುವ ಹೆಂಡತಿ! (3)
2.ಮನದೊಳಗೇ ಕಾಣುತ್ತಿರುವ ವಂಶ (4)
5.ಕೊನೆಗೆ ಜಾಲ ಬೀಸಿದಾಗಲೇಇದು ನಿರಾಯಾಸ (4)
6.ವಟಗುಟ್ಟುವವನ ಹತ್ತಿರವಿರುವ ಬ್ರಹ್ಮಚಾರಿ! (2)
7.ಗಮನವಿಟ್ಟು ನೋಡಿದಾಗ ಕಾಣಿಸಿದ ಆಕಾಶ (3)
9.ನಯನಕ್ಕೆ ಗೋಚರಿಸಿದ್ದು ಹೊಸತು (3)
12.ಪರಾಜಯದಲ್ಲೂ ಗೆಲುವು ನುಸುಳಿದೆಯಲ್ಲಾ! (2)
13.ಮಡಿವಂತಿಕೆ ತೋರುತ್ತಿರುವ ಅಗಸ (4)
15.ಆಸರೆಯ ಮನೆಯಲ್ಲ ಇದು ಜೈಲು! (2)
16.ಕರುವಿನ ಪಚನಾಂಗ ಇಲ್ಲಿ ಕಾಣಿಸುತ್ತಿದೆ (3)

ಮೇಲಿಂದ ಕೆಳಕ್ಕೆ
1.ಅ1.ಈಕೆ ಮಾವನ ಹೆಂಡತಿ (2)
2.ಗೀಟು ಹಾಕಿದವ ಮಾಡಿದ ಮೆರುಗಿನ ಲೇಪನ (3)
3.ಕರೆದು ಹೆಣ್ಣು ಕೊಟ್ಟದ್ದಕ್ಕೇ ಅಳಿಯನಿಗೆ ಈ ಅಪಸ್ಮಾರ ರೋಗವಂತೆ! (4)
4.ಕೂಸು ತುಸು ಕಣ್ಣು ಬಿಟ್ಟಿದ್ದು ಬೆಳಗಿನ ಜಾವ (3)
6.ಆ ವರ್ತಕನೇ ತಿಳಿಸುತ್ತಾನೆ ಎಲ್ಲಾ ಸುದ್ದಿ! (4)
8.ನಯದೊಳಗಿರುವುದು ಉದಯದ ಪ್ರಾರಂಭ (4)
10.ಮನೆಯ ಹಜಾರವನ್ನು ಹೀಗೆನ್ನಿ (4)
11.ಹಸೆ ಬರೆಯುವ ಜಾಗದಲ್ಲೇ ಬೆಳೆದ ಪಾಚಿ (3)
12.ಜಗಳವಾಡುತ್ತಲೇ ಮಾಡಿದ ಸ್ನಾನ! (3)
14.ಅಗುಳು ನುಂಗುವಾಗ ಬಂದ ಕಣ್ಣೀರು! (2)



4985ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಸೂತಿಗೃಹ 4.ಸಮಸ್ಯೆ
5.ವರಾತ 6.ವದನ
7.ತಗಡು 9.ಅಂಕೆ
10.ಹರಿ 12.ಪರಮ
14.ಪ್ರಭಾವ 15.ಸುಲಭ
16.ಪರಾಕು 17.ವಚನಭ್ರಷ್ಟ

ಮೇಲಿಂದ ಕೆಳಕ್ಕೆ:
1.ಪ್ರಸಾಧನ 2.ತಿಳಿವಳಿಕೆ
3.ಹವನ 4.ಸತತ
8.ಗಡಾರಿ 9.ಅಂಬರ
10.ಹಯವದನ 11.ದಷ್ಟಪುಷ್ಟ
13.ಮಸುಕು 14.ಪ್ರಭವ

ಸುಡೊಕು 5372

2		9			7	1		4
				3				
5		7	4		6	2		3
							3	1
	5	1		8			2	
3								8
		2		1		8		5
9			7		8			
	8			2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5371 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ವಿಧಾನ ಪರಿಷತ್ ವಾಯುವ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ; ಕಣದಲ್ಲಿ 12 ಅಭ್ಯರ್ಥಿಗಳು

ಕಾಂಗ್ರೆಸ್‌ಗೆ ಬಂಡಾಯ, ಬಿಜೆಪಿಗೆ ಒಳ ಏಟಿನ ಭೀತಿ

• ಬಸವರಾಜ ಹವಾಲ್ದಾರ


ಪ್ರಕಾಶ ಹುಕ್ಕೇರಿ (ಕಾಂಗ್ರೆಸ್)


ಅರುಣ ಶಹಾಪುರ (ಬಿಜೆಪಿ)


ಎನ್.ಬಿ.ಬನ್ನೂರ (ಪಕ್ಷೇತರ)

ಚಂದ್ರಶೇಖರ ಲೋಣಿ (ಜೆಡಿಎಸ್)

ಬಾಗಲಕೋಟೆ: ಪಕ್ಷ ಸಂಘಟನೆ, ಹೆಚ್ಚಿನ ಸಂಖ್ಯೆಯಲ್ಲಿರುವ ಶಾಸಕರ ಬಲ (33ರಲ್ಲಿ 22) ನೆಚ್ಚಿಕೊಂಡು ಬಿಜೆಪಿಯು ಮೂರನೇ ಬಾರಿಗೆ ಅರುಣ ಶಹಾಪುರ ಅವರನ್ನು ಕಣಕ್ಕಿಳಿಸಿದೆ. ಆದರೆ, ಪಕ್ಷದೊಳಗಿನ ಆಂತರಿಕ ಭಿನ್ನಾಭಿಪ್ರಾಯ ಅವರಿಗೆ ಮಗ್ಗಲು ಮುಳ್ಳಾಗಿದೆ. ಬಿಜೆಪಿಯಲ್ಲಿನ ಮುಸುಕಿನ ಗುದ್ದಾಟದ ಲಾಭ ಪಡೆಯಲು ಕಾಂಗ್ರೆಸ್ ಅನುಭವಿ ರಾಜಕಾರಣಿ ಪ್ರಕಾಶ ಹುಕ್ಕೇರಿ ಅವರನ್ನು ಕಣಕ್ಕಿಳಿಸಿದೆ. ಆದರೆ, ಬಂಡಾಯ ಅವರ ಓಟಕ್ಕೆ ಬ್ರೇಕ್ ಹಾಕುತ್ತಿದೆ.

12 ವರ್ಷಗಳ ಕಾಲ ಶಿಕ್ಷಕರ ಪರವಾಗಿ ಧ್ವನಿ ಎತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆ ಮುಂದಿಟ್ಟುಕೊಂಡು ಶಹಾಪುರ ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ. ಆದರೆ, ಬಿಜೆಪಿ ಮುಖಂಡ, ಕೆ.ಎಲ್.ಇ. ಶಿಕ್ಷಣ ಸಂಸ್ಥೆ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರಿಗೆ ರಾಜ್ಯಸಭೆಗೆ, ಅವರ ಪುತ್ರಿ ಪ್ರೀತಿ ಕೋರೆ ಅವರಿಗೆ ಶಿಕ್ಷಕರ ಕ್ಷೇತ್ರದಿಂದ ಟಿಕೆಟ್ ನಿರಾಕರಿಸಿದ್ದು ಹೊಸ ಲೆಕ್ಕಾಚಾರಕ್ಕೆ ಕಾರಣವಾಗಲಿದೆಯೇ ಎಂಬ ಮಾತು ಬಿಜೆಪಿ ಅಂಗಳದಲ್ಲೇ ಕೇಳಿ ಬರುತ್ತಿದೆ.

ವಾಯವ್ಯ ಶಿಕ್ಷಕರ ಕ್ಷೇತ್ರದ ಮತದಾರರ ವಿವರ			
ಜಿಲ್ಲೆ	ಪುರುಷ	ಮಹಿಳೆ	ಒಟ್ಟು
ಬೆಳಗಾವಿ	8,573	4,714	13,287
ಬಾಗಲಕೋಟೆ	3,680	1,493	5,173
ವಿಜಯಪುರ	4,985	1,943	6,928

ಶಹಾಪುರ ಎರಡನೇ ಅವಧಿಯಲ್ಲಿ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಲಿಲ್ಲ. ಶಿಕ್ಷಕರ ಮುಖಂಡರನ್ನು ದೂರವಿಟ್ಟಿದ್ದರು. ಪಕ್ಷದ ಉಳಿದ ನಾಯಕರ ಚುನಾವಣೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡುವುದಿಲ್ಲ ಎಂಬ ದೂರುಗಳು ಅವರಿಗೆ ಮೈನಸ್ ಆಗಿವೆ.

ಕಳೆದ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎನ್.ಬಿ. ಬನ್ನೂರ ಅವರನ್ನು ಬಿಟ್ಟು, ಚುನಾವಣಾ ರಾಜಕೀಯ ಪಟ್ಟುಗಳನ್ನು ಬಲ್ಲ ಪ್ರಕಾಶ ಹುಕ್ಕೇರಿ ಅವರನ್ನು ಪಕ್ಷ ಕಣಕ್ಕೆ ಇಳಿಸಿದೆ. ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಆದ ಮೇಲೆ ಎಂ.ಬಿ. ಪಾಟೀಲ ಅವರಿಗೆ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮೊದಲ ಚುನಾವಣೆಯಾಗಿದೆ. ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಾದಾಮಿ ಕ್ಷೇತ್ರವೂ ಈ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಇಬ್ಬರೂ ನಾಯಕರು ಹುಕ್ಕೇರಿ ಅವರನ್ನು ಗೆಲ್ಲಿಸಲು ಎಲ್ಲ ದಾಳಗಳನ್ನು ಉರುಳಿಸುತ್ತಿದ್ದಾರೆ.

ಕಣದಲ್ಲಿರುವ ಅಭ್ಯರ್ಥಿಗಳು	
ಅಭ್ಯರ್ಥಿಗಳು	ಪಕ್ಷ
ಅರುಣ ಶಹಾಪುರ	(ಬಿಜೆಪಿ)
ಪ್ರಕಾಶ ಹುಕ್ಕೇರಿ	(ಕಾಂಗ್ರೆಸ್)
ಚಂದ್ರಶೇಖರ ಲೋಣಿ	(ಜೆಡಿಎಸ್)
ನಿಂಗಪ್ಪ ಬನ್ನೂರ, ಶ್ರೀನಿವಾಸಗೌಡ ಗೌಡರ, ಅಪ್ಪಾಸಾಹೇಬ್ ಕುರಣೆ, ಚಂದ್ರಶೇಖರ ಗುಡಸಿ, ಬಸಪ್ಪ ಮನಿಗಾರ, ಶ್ರೀಕಾಂತ ಪಾಟೀಲ, ಶ್ರೇಣಿಕ್ ಜಾಂಗಟೆ, ಸಂಗಮೇಶ ಚಿಕ್ಕನರಗುಂದ, ಜಯಪಾಲ ದೇಸಾಯಿ (ಪಕ್ಷೇತರರು)	

ಹುಕ್ಕೇರಿ ಅವರಿಗೆ ಕ್ಷೇತ್ರ ಹೊಸತು ಹಾಗೂ ವ್ಯಾಪ್ತಿ ದೊಡ್ಡದಾಗಿರುವುದರಿಂದ ವಯಸ್ಸಿನ ಕಾರಣದಿಂದಾಗಿ ಎಲ್ಲೆಡೆ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಪುತ್ರ, ಶಾಸಕ ಗಣೇಶ ಹುಕ್ಕೇರಿ ಮುಖಂಡರನ್ನು ಭೇಟಿಯಾಗುತ್ತಿದ್ದಾರೆ. ಹುಕ್ಕೇರಿ ಅವರಿಗೆ ವಯಸ್ಸಾಗಿದೆ ಎಂಬುದನ್ನೇ ಉಳಿದ ಅಭ್ಯರ್ಥಿಗಳು ಅಸ್ತ್ರವಾಗಿಸಿಕೊಂಡಿದ್ದಾರೆ. ಪಕ್ಷದಲ್ಲಿಯೂ ಅಲ್ಲಲ್ಲಿ ಅಸಮಾಧಾನದ ಮಾತುಗಳು ಕೇಳಿ ಬರುತ್ತಿವೆ.

ಎನ್.ಬಿ. ಬನ್ನೂರ ಅವರು, ಈ ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಮೂರನೇ ಬಾರಿಗೆ ಕಣಕ್ಕಿಳಿದಿರುವುದು ಕಾಂಗ್ರೆಸ್ ಓಟಕ್ಕೆ ಕಡಿವಾಣ ಹಾಕಿದೆ. ಅವರ ಬಗ್ಗೆ ಅಲ್ಲಲ್ಲಿ ಅನುಕಂಪದ ಮಾತುಗಳು ಕೇಳಿ ಬರುತ್ತವೆ. ಇನ್ನೊಬ್ಬ ಪಕ್ಷೇತರ ಅಭ್ಯರ್ಥಿ ಶ್ರೀನಿವಾಸಗೌಡರ ಪ್ರಚಾರ ಮಾಡುತ್ತಿದ್ದಾರೆ.

ಒಟ್ಟು 25,388 ಮತಗಳಿವೆ. ಅದರಲ್ಲಿ ಅರ್ಧಕ್ಕೂ ಹೆಚ್ಚು ಮತಗಳು ಬೆಳಗಾವಿ ಜಿಲ್ಲೆಯೊಂದರಲ್ಲೇ ಇವೆ. ಪಕ್ಷದ ಅಭ್ಯರ್ಥಿಗಳಲ್ಲಿ ಹುಕ್ಕೇರಿ ಬೆಳಗಾವಿ ಜಿಲ್ಲೆಯವರಾಗಿದ್ದಾರೆ. ಬಿಜೆಪಿಯ ಅರುಣ ಶಹಾಪುರ, ಜೆಡಿಎಸ್‌ನ ಚಂದ್ರಶೇಖರ ಲೋಣಿ ವಿಜಯಪುರ ಜಿಲ್ಲೆಯವರಾಗಿದ್ದರೆ, ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಬನ್ನೂರ ಅವರು ಬಾಗಲಕೋಟೆ ಜಿಲ್ಲೆಯವರು.

ಕಳೆದ ಬಾರಿ ಶಹಾಪುರ ಪ್ರಥಮ ಪ್ರಾಶಸ್ತ್ಯದ 5,927, ಎನ್.ಬಿ. ಬನ್ನೂರ 4,918, ಚಂದ್ರಶೇಖರ ಲೋಣಿ 1,230 ಮತಗಳನ್ನು ಪಡೆದಿದ್ದರು. ಬೆಳಗಾವಿಯಲ್ಲಿ ಇತ್ತೀಚೆಗೆ ವಿಧಾನ ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಅವರು ಪಕ್ಷದ ನಾಯಕರ ಆಂತರಿಕ ಆಟದಿಂದಾಗಿ ಸೋತಿದ್ದರು. ಮತ್ತೆ ಅಂಥ ಆಟ ಬೆಳಗಾವಿಯಲ್ಲಿ ನಡೆಯಲಿದೆಯೇ? ಎಂಬ ಚರ್ಚೆಯೂ ಚಾಲ್ತಿಯಲ್ಲಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳೇ ನಿರ್ಣಾಯಕ

ವಾಯವ್ಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ದೊಡ್ಡದಿದೆ. ಅದರಲ್ಲೂ ಸಾವಿರಾರು ಮತಗಳನ್ನು ಹೊಂದಿರುವ ಬೆಳಗಾವಿಯ ಕೆ.ಎಲ್.ಇ ಸಂಸ್ಥೆ, ವಿಜಯಪುರ ಬಿ.ಎಲ್.ಡಿ.ಇ ಹಾಗೂ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಗಳಿವೆ. ಅವುಗಳ ಬೆಂಬಲ ಅಭ್ಯರ್ಥಿಗಳ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ.

ಕೆ.ಎಲ್.ಇ ಸಂಸ್ಥೆ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ವೀರಣ್ಣ ಚರಂತಿಮಠ ಅವರು ಬಿಜೆಪಿಯಲ್ಲಿದ್ದಾರೆ. ವಿಜಯಪುರದ ಬಿ.ಎಲ್.ಡಿ.ಇ.ಯ ಎಂ.ಬಿ. ಪಾಟೀಲ ಅವರು ಕಾಂಗ್ರೆಸ್‌ನಲ್ಲಿದ್ದಾರೆ. ಕೆ.ಎಲ್.ಇ.ಗೆ ಕಾಂಗ್ರೆಸ್ ಶಾಸಕ ಮಹಾಂತೇಶ ಕೌಜಲಗಿ ಅಧ್ಯಕ್ಷರಾಗಿರುವರಾದರೂ, ಕಾರ್ಯಾಧ್ಯಕ್ಷರ ಪ್ರಭಾವವೇ ಜಾಸ್ತಿ.

‘ಕೆಪಿಸಿಸಿ ಪಾದಕ್ಕೆ ಎಐಸಿಸಿ ಸಮರ್ಪಣೆ’

ಪ್ರಜಾವಾಣಿ ವಾರ್ತೆ

ಹಾಸನ: ‘ರಾಷ್ಟ್ರೀಯ ಕಾಂಗ್ರೆಸ್, ರಾಜ್ಯದ ಕಾಂಗ್ರೆಸ್ ಪಾದದಡಿ ಇದೆ. ಕೆಪಿಸಿಸಿ ಪಾದಕ್ಕೆ ಎಐಸಿಸಿಯನ್ನು ಸಮರ್ಪಣೆ ಮಾಡಿದ್ದಾರೆ’ ಎಂದು ಶಾಸಕ ಎಚ್.ಡಿ.ರೇವಣ್ಣ ಲೇವಡಿ ಮಾಡಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್, ಬಿಜೆಪಿ ಬಿ ಟೀಂ ಎಂದು ಪ್ರಚಾರ ಮಾಡಿದರು. ನಂತರ ನಮ್ಮ ಮನೆ ಬಾಗಿಲಿಗೆ ಬಂದು ನೀವೇ ಮುಖ್ಯಮಂತ್ರಿ ಆಗಿ ಎಂದರು. ಕಾಂಗ್ರೆಸ್‌ನವರಿಗೆ ನಾಚಿಕೆ ಆಗಬೇಕು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕಾಂಗ್ರೆಸ್‌ನವರು ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಮಾತನಾಡಿ, ಬಿಜೆಪಿ ಮೂರನೇ ಅಭ್ಯರ್ಥಿಯಾಗಿ ಲಹರ್‌ಸಿಂಗ್ ಅವರನ್ನು ಕಣಕ್ಕಿಳಿಸಿದರು. ಗುಬ್ಬಿ ಶಾಸಕ ಎಸ್. ಆರ್.ಶ್ರೀನಿವಾಸ ದುಡ್ಡು ತಗೊಂಡು ಬಿಜೆಪಿಗೆ ಮತ ನೀಡಿದ್ದಾರೆ. ಎಲ್ಲೆಲ್ಲಿಯೋ ಇದ್ದವರನ್ನು ಕರೆದುಕೊಂಡು ಬಂದು ಕುಮಾರಸ್ವಾಮಿ ಸಚಿವರನ್ನಾಗಿ ಮಾಡಿದರು. ಅಂಥವರ ಬಗ್ಗೆ ಮಾತನಾಡುವುದಿಲ್ಲ. ದೇವರೇ ಅವರಿಗೆ ಶಿಕ್ಷೆ ನೀಡುತ್ತಾನೆ’ ಎಂದರು.

ಬೆಂಗಳೂರಿನ ‘ಕಲಾಗ್ರಾಮ’ದಲ್ಲಿ ಪ್ರಥಮ ವರ್ಷದ ಸ್ಮರಣಾ ಕಾರ್ಯಕ್ರಮ

ಒಡನಾಡಿಗಳ ನೆನಪಿನಂಗಳದಲ್ಲಿ ಕವಿ ಸಿದ್ಧಲಿಂಗಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದನಿ ಇಲ್ಲದವರ ಧ್ವನಿ’ ಯಾಗಿದ್ದ ಕವಿ ಡಾ.ಸಿದ್ಧಲಿಂಗಯ್ಯರವರು ನಿಧನರಾಗಿ ವರ್ಷವಾಗಿದ್ದು, ಶನಿವಾರ ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಕಲಾಗ್ರಾಮದಲ್ಲಿ ಸ್ಮರಣಾ ಕಾರ್ಯಕ್ರಮ ನಡೆಯಿತು.

ಇಡೀ ಕಲಾಗ್ರಾಮ ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗಿತ್ತು. ಅವರ ಒಡನಾಡಿಗಳು, ಅಭಿಮಾನಿಗಳು, ವಿದ್ಯಾರ್ಥಿಗಳು ಸ್ಮರಿಸಿದರು. ಕಾವ್ಯ ವಾಚನ, ಗಾಯನದ ಮೂಲಕ ಬಂಡಾಯ ಕವಿಯನ್ನೂ ನೆನಪಿಸಿದರು.

60 ಮಂದಿ ಬರಹಗಾರರ ‘ಸಾವಿರಾರು ದನಿಗಳು’ (ಸಂಪಾದಕ –ಡಾ.ಶಿವರಾಜ್ ಬ್ಯಾಡರಹಳ್ಳಿ, ಮುದಲ್ ವಿಜಯ್) ಹಾಗೂ ಸಿದ್ಧಲಿಂಗಯ್ಯ ಅವರ ಭಾಷಣದ ‘ಆಕಾಶದ ಅಗಲಕ್ಕೂ ನಿಂತ ಆಲವೇ’ (ಸಂಪಾದಕಿ – ಡಾ.ಸಿ.ಶೋಭಾ) ಕೃತಿಗಳ ಲೋಕಾರ್ಪಣೆಯ ಮೂಲಕ ಗೌರವ ಸಲ್ಲಿಸಲಾಯಿತು.

ಸಚಿವರಾದ ವಿ.ಸೋಮಣ್ಣ, ಮುನಿರತ್ನ, ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ, ಚಿಂತಕ ಶೂದ್ರ ಶ್ರೀನಿವಾಸ, ವಿಮರ್ಶಕ ಡಾ.ಬೈರಮಂಗಲ ರಾಮೇಗೌಡ ಅವರು ಸಿದ್ಧಲಿಂಗಯ್ಯ ಅವರೊಂದಿನ ಒಡನಾಟವನ್ನು ಸ್ಮರಿಸಿದರು. ಸಮಾಧಿ ಸ್ಥಳದಲ್ಲಿ ಬುದ್ಧ ವಂದನೆ ನಡೆಯಿತು.

ಸಚಿವ ವಿ.ಸೋಮಣ್ಣ ಮಾತನಾಡಿ, ‘ನೋವಿನಿಂದಲೇ ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಸಿದ್ಧಲಿಂಗಯ್ಯ ಅವರು ತಮ್ಮ ಸಾಹಿತ್ಯದಿಂದ ಸಮಾಜದ ಓರೆ–ಕೋರೆ ತಿದ್ದಲು ಪ್ರಯತ್ನಿಸಿದವರು. ಅವರ ಕವಿತೆಗಳನ್ನು ಡಿಜಿಟಲ್ ರೂಪದಲ್ಲಿ ಹೊರತಂದರೆ ಆರ್ಥಿಕ ನೆರವು ಒದಗಿಸಲಾಗುವುದು’ ಎಂದರು.

ಚಿಂತಕ ಶೂದ್ರ ಶ್ರೀನಿವಾಸ ಮಾತನಾಡಿದರು. ಲೇಖಕಿ ಡಾ.ಎಂ. ಆರ್.ಕಮಲ, ಗಾಯಕ ಎಚ್. ಜನಾರ್ದನ್, ಡಾ.ಸಿದ್ಧಲಿಂಗಯ್ಯ ಸ್ಮಾರಕದ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಮಾನಸ ಸಿದ್ಧಲಿಂಗಯ್ಯ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ಬಿ.ಕೆ.ಸುರೇಶ್, ಕಿರಂ ಪ್ರಕಾಶನದ ಜಿ.ವಿ.ಧನಂಜಯ್, ಆರ್. ಮೋಹನ್‌ಕುಮಾರ್ ಹಾಜರಿದ್ದರು.

ಕಾರ್ಯಕ್ರಮದಲ್ಲಿ (ಎಡದಿಂದ ಐದನೇಯವರು) ಚಿಂತಕ ಶೂದ್ರ ಶ್ರೀನಿವಾಸ್ ಅವರು ‘ಸಾವಿರಾರು ದನಿಗಳು’ ಹಾಗೂ ‘ಆಕಾಶದ ಅಗಲಕ್ಕೂ ನಿಂತ ಆಲವೇ’ ಕೃತಿಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಗಾಯಕ ಎಚ್. ಜನಾರ್ದನ್, ಪ್ರತಿಷ್ಠಾನದ ಅಧ್ಯಕ್ಷೆ ಡಾ.ಮಾನಸ ಸಿದ್ಧಲಿಂಗಯ್ಯ, ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ, ವಸತಿ ಸಚಿವ ವಿ.ಸೋಮಣ್ಣ, ಲೇಖಕ ಬೈರಮಂಗಲ ರಾಮೇಗೌಡ, ಲೇಖಕಿ ಎಂ.ಆರ್.ಕಮಲ ಮತ್ತು ಸಿ. ರಮಾಕುಮಾರಿ ಸಿದ್ಧಲಿಂಗಯ್ಯ ಇದ್ದರು – ಪ್ರಜಾವಾಣಿ ಚಿತ್ರ

‘₹ 1 ಕೋಟಿ ಅನುದಾನ, ಭೂಮಿ ಮಂಜೂರು’

‘ಕವಿ ಸಿದ್ಧಲಿಂಗಯ್ಯ ನೆನಪಿನಲ್ಲಿ ಸ್ಥಾಪಿಸಲಿರುವ ಗ್ರಂಥಾಲಯಕ್ಕೆ ₹ 1 ಕೋಟಿ ಅನುದಾನ, ಭೂಮಿ ಮಂಜೂರಾತಿ ಹಾಗೂ ವೈಯಕ್ತಿಕವಾಗಿ ಆರ್ಥಿಕ ನೆರವು ಒದಗಿಸಲಾಗುವುದು’ ಎಂದು ಸಚಿವರಾದ ವಿ. ಸೋಮಣ್ಣ ಮತ್ತು ಮುನಿರತ್ನ ಭರವಸೆ ನೀಡಿದರು.

‘ಕಲಾಗ್ರಾಮದಲ್ಲಿ ಸಮಾಧಿ ಸ್ಥಳದಲ್ಲಿ ನೆನಪಿನಲ್ಲಿ ಉಳಿಯುವಂತಹ ಯೋಜನೆ ರೂಪಿಸಲಾಗುವುದು’ ಎಂದು ಸೋಮಣ್ಣ ಹೇಳಿದರು. ‘ಸಿದ್ಧಲಿಂಗಯ್ಯ ಹೆಸರಿನ ಟ್ರಸ್ಟ್‌ಗೆ ಜಮೀನು ನೀಡಿದರೆ ಗ್ರಂಥಾಲಯ ನಿರ್ಮಿಸಲಾಗುವುದು’ ಎಂದು ಮೇಲ್ಮನೆ ಸದಸ್ಯ ಮೋಹನ್ ಕೊಂಡಜ್ಜಿ ಹೇಳಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡುವವರು, ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.finc@printersmysore.co.in**ಗೆ ಮೇಲ್ ಮುಖಾಂತರ ಕಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಕಾಲೇಜಿನ ಶುಲ್ಕ ಕಟ್ಟಲು ನೆರವಾಯಿತು

‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿವೇತನವು ಕಾಲೇಜಿನಲ್ಲಿ ಕೋಚಿಂಗ್‌ಗೆ ಶುಲ್ಕ ಕಟ್ಟಲು ಸಹಕಾರಿಯಾಯಿತು. ಕೊರೊನಾ ಸಂದರ್ಭದಲ್ಲಿ ಮನೆಯ ಆರ್ಥಿಕ ಪರಿಸ್ಥಿತಿ ಸರಿಯಿರಲಿಲ್ಲ. ರ‍್ಯಾಂಕ್ ಬಂದಿದ್ದರಿಂದ ಕಾಲೇಜಿನಲ್ಲಿ ಉಚಿತ ಸೀಟು ಸಿಕ್ಕಿತು. ಆದರೆ, ಸಿಇಟಿ ಕೋಚಿಂಗ್ ಸೇರಿ ಇತರೆ ಶುಲ್ಕ ಕಟ್ಟಲು ತೊಂದರೆಯಾಗಿತ್ತು. ಇಂತಹ ಸಂದರ್ಭದಲ್ಲಿ ‘ಪ್ರಜಾವಾಣಿ’ ನೀಡಿದ ಸಹಾಯಧನ ನೆರವಿಗೆ ಬಂತು. ಪತ್ರಿಕಾ ಬಳಗಕ್ಕೆ ಧನ್ಯವಾದಗಳು.

ತೇಜಸ್ ಎಚ್.ಎಸ್., ನಿಟುವಳ್ಳಿ, ದಾವಣಗೆರೆ

ಪುಸ್ತಕ ಖರೀದಿಸಿದೆ

‘ಪ್ರಜಾವಾಣಿ’ಯು ನೀಡಿದ ವಿದ್ಯಾರ್ಥಿ ವೇತನದಲ್ಲಿ ಪುಸ್ತಕಗಳನ್ನು ಮತ್ತು ಬಟ್ಟೆಗಳನ್ನು ಖರೀದಿಸಿದೆ. ವಿದ್ಯಾರ್ಥಿ ವೇತನ ನೀಡಿದ್ದಕ್ಕೆ ನಮ್ಮ ಕುಟುಂಬದವರೂ ಖುಷಿಪಟ್ಟರು. ಪ್ರಜಾವಾಣಿಗೆ ಥ್ಯಾಂಕ್ಸ್.

ಕೆ.ಗಗನ್, ಶಿಡ್ಲಘಟ್ಟ

ಪಠ್ಯ ಪರಿಷ್ಕರಣೆ: ರಾಜ್ಯದ ವಿವಿಧೆಡೆ ಚರ್ಚಾಗೋಷ್ಠಿ ಆಯೋಜನೆ

ಆಕ್ರೋಶ ಶಮನಕ್ಕೆ ಸಂವಾದದ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ಕುರಿತು ವ್ಯಕ್ತವಾಗಿರುವ ಜನಾಕ್ರೋಶವನ್ನು ತಗ್ಗಿಸಲು ರಾಜ್ಯ ಸರ್ಕಾರ ಈಗ ಸಂವಾದದ ಮೊರೆ ಹೋಗಿದೆ.

ಸಂಘ ಪರಿವಾರದ ಭಾಗವಾಗಿರುವ ಸಂಘಟನೆಗಳು ಮತ್ತು ಸಂಘ–ಸಂಸ್ಥೆಗಳ ನೇತೃತ್ವದಲ್ಲಿ ‘ಪಠ್ಯ ಪುಸ್ತಕ ಪರಿಷ್ಕರಣ ಸತ್ಯ–ಮಿಥ್ಯ’ ಎಂಬ ಶೀರ್ಷಿಕೆ ಅಡಿಯಲ್ಲಿ ರಾಜ್ಯವ್ಯಾಪಿ ಸಂವಾದ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ.

ಸಚಿವರು, ಶಾಸಕರು, ಬಿಜೆಪಿಯ ಪ್ರಮುಖ ನಾಯಕರು, ವಿಶ್ರಾಂತ ಕುಲಪತಿಗಳು, ಪ್ರಾಧ್ಯಾಪಕರು ಸೇರಿದಂತೆ ಶಿಕ್ಷಣ ಕ್ಷೇತ್ರದ ಪ್ರಮುಖರ ಮೂಲಕ ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಚರ್ಚೆ ಆಯೋಜಿಸುವಂತೆ ಸಂಘ ಪರಿವಾರದ ಪ್ರಮುಖರು ನೀಡಿರುವ ನಿರ್ದೇಶನದಂತೆ ಶನಿವಾರವೇ ರಾಜ್ಯದ ಹಲವು ಕಡೆಗಳಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಂವಾದ ಆಯೋಜಿಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಶಿವಮೊಗ್ಗದಲ್ಲಿ ನಡೆದ ಸಂವಾದದಲ್ಲಿ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್.ಎ.ಬಾರಿ, ಮಂಗಳೂರಿನಲ್ಲಿ ನಡೆದ ಸಂವಾದದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಶಾಸಕ ಕುಮಾರ್ ಬಂಗಾರಪ್ಪ ಪಾಲ್ಗೊಂಡಿದ್ದರು.

ಪಠ್ಯ ಪುಸ್ತಕ ಪರಿಷ್ಕರಣೆ ಸಂಬಂಧಿಸಿದ ಚರ್ಚೆಯನ್ನು ತಾಲ್ಲೂಕು, ಹೋಬಳಿ ಮಟ್ಟಕ್ಕೆ ವಿಸ್ತರಿಸಿ ಹೋರಾಟ ನಡೆಸಲು ಕಾಂಗ್ರೆಸ್ ಮುಂದಾಗಿದೆ. ಅದಕ್ಕೆ ಪ್ರತಿಯಾಗಿ ರಾಜ್ಯದ ವಿವಿಧೆಡೆ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸರ್ಕಾರದ ನಿಲುವನ್ನು ಸಮರ್ಥಿಸಿಕೊಳ್ಳಲು ತೀರ್ಮಾನಿಸಲಾಗಿದೆ.

ಸಚಿವರು, ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷರಾಗಿದ್ದ ರೋಹಿತ್ ಚಕ್ರತೀರ್ಥ, ಬಿಜೆಪಿ ಹಾಗೂ ಸಂಘ ಪರಿವಾರದ ಕೆಲವು ಮುಖಂಡರು ಚರ್ಚಿಸಿದ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಚಿವರು, ಶಾಸಕರು ಮತ್ತು ಪಕ್ಷದ ಮುಖಂಡರು ಇತರೆ ಯಾವುದೇ ಕಾರ್ಯಕ್ರಮಗಳಿದ್ದರೂ ಪಠ್ಯ ಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯ ಎಂಬ ಸಂದೇಶವನ್ನು ರವಾನಿಸಲಾಗಿದೆ. ಎಲ್ಲ ಹಂತದ ನಾಯಕರು ಮತ್ತು ಮುಖಂಡರು ಪಠ್ಯಪುಸ್ತಕ ಪರಿಷ್ಕರಣೆಯನ್ನು ಸಮರ್ಥಿಸಿಕೊಳ್ಳಲು ಸಿದ್ಧರಾಗುವಂತೆ ಸೂಚಿಸಲಾಗಿದೆ ಎಂದು ಗೊತ್ತಾಗಿದೆ.

‘ಇನ್ನಷ್ಟು ವಿಲ ವಿಲ ಒದ್ದಾಡಬೇಕು’

ಮಂಗಳೂರು: ‘ದೇಶದ ಹಿತವನ್ನು ಗಮನದಲ್ಲಿಟ್ಟುಕೊಂಡು ನೈಜ ಭಾರತೀಯತೆ ಪರಿಚಯಿಸುವ ಕೆಲಸಕ್ಕೆ ಕೈ ಹಾಕಿದ್ದೇವೆ. ಇದರಿಂದ ಈಗಾಗಲೇ ಕೆಲವರು ವಿಲ ವಿಲ ಒದ್ದಾಡುತ್ತಿದ್ದಾರೆ. ಹಾಗಾಗಿ, ಎಲ್ಲಿ ಹಿಡಿಯಬೇಕೋ ಅಲ್ಲೇ ಹಿಡಿದಿದ್ದೇವೆ ಎಂದರ್ಥ. ಮರ್ಮಾಘಾತ ಎನ್ನುತ್ತೇವಲ್ಲ ಅದು ಆಗುತ್ತಿದೆ. ಇನ್ನಷ್ಟು ಬಲವಾಗಿ ಹಿಡಿಯಬೇಕು. ಅವರು ಇನ್ನಷ್ಟು ಒದ್ದಾಡ ಬೇಕು.....’

ರಾಜ್ಯದಲ್ಲಿ ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಆಗುತ್ತಿರುವ ಬೆಳವಣಿಗೆಗಳಿಗೆ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ನಗರದಲ್ಲಿ ಶನಿವಾರ ಪ್ರತಿಕ್ರಿಯಿಸಿದ್ದು ಹೀಗೆ. ಸಿಟಿಜನ್ಸ್ ಕೌನ್ಸಿಲ್‌ನ ಮಂಗಳೂರು ಘಟಕವು ಇಲ್ಲಿ ಶನಿವಾರ ಏರ್ಪಡಿಸಿದ್ದ ‘ಪಠ್ಯ ರಾಜಕಾರಣ– ಸತ್ಯ– ಮಿಥ್ಯ’ ಸಂವಾದದಲ್ಲಿ ಮಾತನಾಡಿದ ಅವರು, ‘ಸರ್ಕಾರ ಈ ವಿಚಾರದಲ್ಲಿ ಹೇಡಿತನದಿಂದ ವರ್ತಿಸುವ ಪ್ರಶ್ನೆಯೇ ಇಲ್ಲ. ಕೇವಲ ಅಧಿಕಾರ ಹಿಡಿಯಲು ನಾವು ಸರ್ಕಾರದ ಭಾಗವಾಗಿದ್ದಲ್ಲ. ನಮಗೆ ವೈಚಾರಿಕ ಉದ್ದೇಶ ಇದೆ. ಅದನ್ನು ಈಡೇರಿಸಲೆಂದೇ ಸರ್ಕಾರದ ಭಾಗ ಆಗಿದ್ದೇವೆ’ ಎಂದು ಸ್ಪಷ್ಟ ಪಡಿಸಿದರು.

‘ಸಮಿತಿ ವಿಸರ್ಜನೆಯಾದರೂ ಅಧ್ವಾನ ಉಳಿದಿವೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರೋಹಿತ್ ಚಕ್ರತೀರ್ಥ ಸಮಿತಿ ವಿಸರ್ಜನೆಯಾಗಿದ್ದರೂ ಪಠ್ಯದಲ್ಲಿನ ಅಧ್ವಾನಗಳು ಹಾಗೆಯೇ ಉಳಿದಿವೆ. ಪರಿಷ್ಕರಣೆಗೊಂಡ ಪಠ್ಯದ ಸಂಪೂರ್ಣ ಪಿಡಿಎಫ್ ಇನ್ನೂ ಬಿಡುಗಡೆ ಮಾಡಿಲ್ಲ. ಇದು ಒಂದು ಕೋಟಿ ಮಕ್ಕಳ ಭವಿಷ್ಯದ ಪ್ರಶ್ನೆಯಾಗಿದೆ’ ಎಂದು ಮಾಜಿ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅಸಮಾಧಾನ ವ್ಯಕ್ತಪಡಿಸಿದರು.

‘ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ರಚಿಸಿದ್ದ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಎರಡೂವರೆ ವರ್ಷ ಕಾಲ ಸುದೀರ್ಘ ಅಧ್ಯಯನ ನಡೆಸಿ ಪಠ್ಯ ಪರಿಷ್ಕರಣೆ ಮಾಡಿತ್ತು. ಆದರೆ, ರೋಹಿತ್ ಚಕ್ರತೀರ್ಥ ಸಮಿತಿ ದಿಢೀರ್ ಹುಟ್ಟಿಕೊಂಡು ಅಷ್ಟೇ ವೇಗದಲ್ಲಿ ಪರಿಷ್ಕರಣೆ ಮಾಡಿ, ವಿಸರ್ಜನೆಯೂ ಆಗಿದೆ. ಈ ವಿಚಾರದಲ್ಲಿ ಚಕ್ರತೀರ್ಥ ತಮ್ಮನ್ನು ತಾವು ಸಮರ್ಥನೆ ಮಾಡಿಕೊಳ್ಳುತ್ತಿರುವುದು ಕ್ರೌರ್ಯದ ಪರಮಾವಧಿ. ಯಾವುದೇ ಆಕ್ಷೇಪಾರ್ಹ ಪರಿಷ್ಕರಣೆ ಇಲ್ಲದಿದ್ದರೆ ಪಠ್ಯ ಬಹಿರಂಗಪಡಿಸಲು ಸಮಸ್ಯೆ ಏನು? ರೋಹಿತ್ ಚಕ್ರತೀರ್ಥ ಅವರ ವಿದ್ಯಾರ್ಹತೆ ಏನು? ಬೋಧನಾ ಅನುಭವ ಏನು’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ಪಠ್ಯ ಪರಿಷ್ಕರಣೆ ವಿಚಾರ ವಿಧಾನಮಂಡಲದ ಅಧಿವೇಶನದಲ್ಲಿ ಚರ್ಚೆಯಾಗಬೇಕಿತ್ತು. ಇದು ಆಗದಿದ್ದರೆ ವಿಷಯ ತಜ್ಞರ ಜೊತೆಗಾದರೂ ಚರ್ಚಿಸಬೇಕಿತ್ತು. ಅದನ್ನೂ ಮಾಡಿಲ್ಲ. ಬರಗೂರು ರಾಮಚಂದ್ರಪ್ಪ ಪರಿಷ್ಕರಣೆ ಮಾಡಿದಾಗ ಜಗದೀಶ್ ಶೆಟ್ಟರ್, ಕೆ. ಎಸ್. ಈಶ್ವರಪ್ಪ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿದ್ದರು. ಆಗ ಅವರು ಏನನ್ನೂ ಮಾತನಾಡಲಿಲ್ಲ. ಆದರೆ, ಈಗ ಅಂದಿನ ಪರಿಷ್ಕರಣೆ ತಪ್ಪಾಗಿದೆ ಎಂದು ಹೇಳುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕವಿಶೈಲದಿಂದ ಪಾದಯಾತ್ರೆ 15ಕ್ಕೆ

ಪಠ್ಯಪುಸ್ತಕ ಪರಿಷ್ಕರಣೆಯಿಂದ ಆಗಿರುವ ಅಧ್ವಾನ ಸರಿಪಡಿಸುವಂತೆ ಆಗ್ರಹಿಸಿ ಜೂನ್ 15ರಂದು ಕುಪ್ಪಳಿಯ ಕವಿಶೈಲದಿಂದ ತೀರ್ಥಹಳ್ಳಿಯವರೆಗೆ ಪಾದಯಾತ್ರೆ ನಡೆಸಲಾಗುವುದು ಎಂದು ಕಿಮ್ಮನೆ ರತ್ನಾಕರ ತಿಳಿಸಿದರು.

ಅಂದು ಬೆಳಿಗ್ಗೆ 7ಕ್ಕೆ ಕುವೆಂಪು ಸಮಾಧಿಗೆ ಪುಷ್ಪನಮನ ಸಲ್ಲಿಸಿ ಪಾದಯಾತ್ರೆ ಆರಂಭಿಸಲಾಗುವುದು. ಪಾದಯಾತ್ರೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದರು.

‘ಬಿಜೆಪಿ ಚಡ್ಡಿಗಳನ್ನು ಮೋದಿಗೆ ಕಳಿಸುತ್ತೇವೆ’

ಮೈಸೂರು: ‘ಬಳಸಿದ ಚಡ್ಡಿಗಳನ್ನು ಬಿಜೆಪಿಯವರು ಕೆಪಿಸಿಸಿ ಕಚೇರಿಗೆ ಕಳುಹಿಸುತ್ತಿದ್ದು, ಅವುಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ರವಾನಿಸುತ್ತೇವೆ’ ಎಂದು ಕೆಪಿಸಿಸಿ ವಕ್ತಾರರೂ ಆಗಿರುವ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

‘ಚಡ್ಡಿ ಸಂಗ್ರಹ ಅಭಿಯಾನವನ್ನು ಬೀದರ್‌ನಿಂದ ಚಾಮರಾಜನಗರದವರೆಗೂ ನಡೆಸಲಿ. ಮುಖ್ಯಮಂತ್ರಿ ಬೊಮ್ಮಾಯಿ ಸೇರಿ ನಾಯಕರೆಲ್ಲರೂ ಪಾಲ್ಗೊಳ್ಳಲಿ. ಜನರೇ ಅವರ ಮುಖಕ್ಕೆ ಉಗಿಯುತ್ತಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಶನಿವಾರ ಪ್ರತಿಪಾದಿಸಿದರು.

‘ಚಡ್ಡಿ ಹೊರುವ ಕಾರ್ಯವನ್ನು ಬಿಜೆಪಿಯವರು ಪರಿಶಿಷ್ಟ ಜಾತಿ, ಪಂಗಡದ ಮೋರ್ಚಾದವರಿಂದಲೇ ನಡೆಸಿದ್ದೇಕೆ? ಪರಿಶಿಷ್ಟರ ಹಣ ಬಳಸದಿದ್ದಾಗ, ಅವರ ಅನುಕೂಲಕ್ಕೆ ಜಾರಿಗೊಳಿಸಿದ್ದ ಯೋಜನೆಗಳನ್ನು ಸ್ಥಗಿತಗೊಳಿಸಿದಾಗ ರಕ್ತ ಕುದಿಯಲಿಲ್ಲವೇಕೆ?’ ಎಂದು ಕೇಳಿದರು.

7 ಡಿಜಿಟಲ್ ವಿ.ವಿ ಸ್ಥಾಪನೆಗೆ ನಿರ್ಧಾರ: ಸಿ.ಎಂ

ಬೆಳಗಾವಿ: ‘ರಾಜ್ಯದಲ್ಲಿ ಶೀಘ್ರವೇ ಏಳು ಡಿಜಿಟಲ್ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಶನಿವಾರ ವಿಧಾನ ಪರಿಷತ್ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ತಾಂತ್ರಿಕ ಜ್ಞಾನ ಹಾಗೂ ಕೌಶಲ ಸಾಮರ್ಥ್ಯ ಹೆಚ್ಚಾಗಿದೆ. ಇದನ್ನು ಬಳಸಿಕೊಂಡು ವಿಶಿಷ್ಟ ರೀತಿಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗುವುದು. ಈಗಾಗಲೇ ಇರುವ ಭೌತಿಕ ವಿಶ್ವವಿದ್ಯಾಲಯಗಳಲ್ಲಿ ಆಡಳಿತದ ಹೊರೆಯೇ ಹೆಚ್ಚುತ್ತಿದೆ, ಶಿಕ್ಷಣ ಕಡಿಮೆಯಾಗುತ್ತಿದೆ. ಇದನ್ನು ತಪ್ಪಿಸಿ ಶಿಕ್ಷಣಕ್ಕೇ ಹೆಚ್ಚು ಒತ್ತು ಕೊಡುವಂಥ ವಿಶ್ವವಿದ್ಯಾಲಯಗಳನ್ನು ತೆರೆಯಬೇಕಾಗಿದೆ’ ಎಂದರು.

ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ‘ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಮೆಡಿಕಲ್ ರಿಸರ್ಚ್’ ಆರಂಭಿಸಲಾಗುತ್ತಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ‘ಸಂಸ್ಥೆಯಿಂದ 1,000 ಬೆಡ್‌ಗಳ ಅತ್ಯಾಧುನಿಕ ಆಸ್ಪತ್ರೆ ಕಟ್ಟಲಾಗುವುದು. ಇದಕ್ಕೆ ಮುಖ್ಯಮಂತ್ರಿ ಅವರ ಆಶೀರ್ವಾದ ಬೇಕು’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ನಿಮ್ಮನ್ನು ನಿರಾಸೆಗೊಳಿಸುವುದಿಲ್ಲ’ ಎಂದು ಹೇಳಿದರು.

ರಾಷ್ಟ್ರ ಲಾಂಛನ ದುರ್ಬಳಕೆ: ಹೊರಟ್ಟಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ವಿಧಾನ ಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಅವರು ಸ್ವಂತ ಲಾಭಕ್ಕಾಗಿ ರಾಷ್ಟ್ರ ಲಾಂಛನ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ದೂರಿನಡಿ, ಚುನಾವಣಾಧಿಕಾರಿ ಆಮ್ಲಾನ್ ಆದಿತ್ಯ ಬಿಸ್ವಾಸ್ ಅವರು ವಿವರಣೆ ಕೇಳಿ ಶನಿವಾರ ನೋಟಿಸ್ ನೀಡಿದ್ದಾರೆ.

‘ಬಸವರಾಜ ಹೊರಟ್ಟಿ ಕುರಿತಾಗಿ ಬರೆಯಲಾದ ‘ಬಸವರಾಜ ಪಥ’ ಹಾಗೂ ‘ಸಂಘರ್ಷ– ಹೋರಾಟ–ಸಾಧನೆ’ ಎಂಬ ಎರಡು ಪುಸ್ತಕಗಳಲ್ಲಿ ರಾಷ್ಟ್ರ ಲಾಂಛನ, ರಾಜ್ಯ ಲಾಂಛನ ಹಾಗೂ ವಿಧಾನ ಪರಿಷತ್ ಸಭಾಪತಿ ಪೀಠದ ಚಿತ್ರಗಳನ್ನು ಮುದ್ರಿಸಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ವ್ಯಕ್ತಿಯೊಬ್ಬರು ಶುಕ್ರವಾರ ದೂರು ನೀಡಿದ್ದಾರೆ. ಇದನ್ನು ಪರಿಶೀಲಿಸಲಾಗಿ ದುರ್ಬಳಕೆ ಮಾಡಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ. ಇದರ ಬಗ್ಗೆ ವಿವರಣೆ ಕೊಡಬೇಕು ಎಂದು ಹೊರಟ್ಟಿ ಅವರಿಗೆ ನೋಟಿಸ್ ನೀಡಲಾಗಿದೆ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ನೋಟಿಸ್ ಜಾರಿ ಮಾಡಿದ 24 ಗಂಟೆಯೊಳಗೆ ಉತ್ತರ ಕೊಡಬೇಕು ಎಂದು ಸೂಚಿಸಲಾಗಿದೆ. ಒಂದುವೇಳೆ ಸಮರ್ಪಕ ಉತ್ತರ ನೀಡದೇ ಇದ್ದರೆ ಶಿಸ್ತುಕ್ರಮಕ್ಕಾಗಿ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಲಾಗುವುದು’ ಎಂದರು.

‘ದಿ ಸ್ಟೇಟ್ ಎಂಬ್ಲಮ್ ಆಫ್ ಇಂಡಿಯಾ (ಪ್ರೊಹಿಬಿಷನ್ ಆಫ್ ಇಂಪ್ರಾಪರ್ ಯೂಸ್ ಆ್ಯಕ್ಟ್–2005) ಅಡಿ ವಿವರಣೆ ಕೇಳಲಾಗಿದೆ. ಅಲ್ಲದೇ, ‘ಜನಪ್ರತಿನಿಧಿಗಳ ಕಾಯ್ದೆ (ರಿಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆ್ಯಕ್ಟ್)’ ಅಡಿ ಕ್ರಮ ಜರುಗಿಸಲು ನಮಗೂ ಅವಕಾಶವಿದೆ. ಆಯೋಗದ ನಿರ್ದೇಶನ ನೋಡಿಕೊಂಡು ಮುಂದುವರಿಯಲಾಗುವುದು’ ಎಂದು ಹೇಳಿದರು.

ನೋಟಿಸ್ ಬಂದಿಲ್ಲ: ಹೊರಟ್ಟಿ (ಧಾರವಾಡ ವರದಿ): ‘ಸಾಂವಿಧಾನಿಕ ಪೀಠದ ಚಿತ್ರವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಕೆಲವರು ದುರುದ್ದೇಶದಿಂದ ನನ್ನ ಮೇಲೆ ಆರೋಪ ಮಾಡಿದ್ದಾರೆ. ಈ ಸಂಬಂಧ ಚುನಾವಣಾ ಆಯೋಗದಿಂದ ಯಾವುದೇ ನೋಟಿಸ್ ಬಂದಿಲ್ಲ’ ಎಂದು ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ’ಪುಸ್ತಕದ ಮೇಲೆ ಆ ಚಿತ್ರವನ್ನು ಚುನಾವಣೆಗೆ ಮುನ್ನವೇ ಹಾಕಿಸಿದ್ದೇನೆ. ಕಾನೂನು ಪ್ರಕಾರ ಏನಾಗುತ್ತದೆಯೋ ನೋಡೋಣ. ನೋಟಿಸ್ ಬಂದರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ’ ಎಂದರು.

ಆತ್ಮಕಥನ ‘ಬಿದಿರು ನೀನ್ಯಾರಿಗಲ್ಲದವಳು’ ಬಿಡುಗಡೆ

ಯಾಕಿಷ್ಟು ಬೇಗ ಆತ್ಮಕಥನ: ಕೃಷ್ಣ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೋಟಮ್ಮ ಇಷ್ಟು ಬೇಗ ಯಾಕೆ ಆತ್ಮಕಥನ ಬರೆದರೊ ಗೊತ್ತಿಲ್ಲ. ಅವರಿನ್ನೂ ಸಾಧಿಸಬೇಕಾದ್ದು ಬಹಳಷ್ಟಿದೆ’ ಎಂದು ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ನಾಯಕಿ ಮೋಟಮ್ಮ ಅವರ, ‘ಬಿದಿರು ನೀನ್ಯಾರಿಗಲ್ಲದವಳು‘ ಆತ್ಮಕಥನವನ್ನು ಶನಿವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ನಾನು ಮುಖ್ಯಮಂತ್ರಿ ಆಗಿದ್ದ ವೇಳೆ ನನ್ನ ಮಂತ್ರಿಮಂಡಲದಲ್ಲಿ ಸಚಿವೆಯಾಗಿದ್ದ ಮೋಟಮ್ಮ ಸ್ತ್ರೀಶಕ್ತಿ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಬದುಕಿಗೆ ಭದ್ರಬುನಾದಿ ದೊರೆಯುವಂತೆ ನೋಡಿಕೊಂಡರು. ಇವತ್ತು ಅವರು ತಮ್ಮ ಆತ್ಮಕಥನದ ಮೂಲಕ ರಾಜ್ಯ ರಾಜಕಾರಣದ ಭೂತ ಮತ್ತು ವರ್ತಮಾನಗಳ ಕೈಪಿಡಿಯನ್ನು ನಮ್ಮ ಮುಂದಿರಿಸಿದ್ದಾರೆ’ ಎಂದರು.

‘ದೇಶದಲ್ಲಿ 1977–1979ರ ರಾಜಕೀಯ ಕಾಲಘಟ್ಟದ ಸನ್ನಿವೇಶದಲ್ಲಿ, ಚಿಕ್ಕಮಗಳೂರಿನಂತಹ ಅತಿಸೂಕ್ಷ್ಮ ಕ್ಷೇತ್ರದಿಂದ ಮೋಟಮ್ಮ ರಾಜಕೀಯ ಜೀವನ ಆರಂಭಿಸಿದರು. ಅದು ಇಂದಿರಾಗಾಂಧಿ– ದೇವರಾಜ ಅರಸು ದೂರದೂರವಿದ್ದ ಕಾಲ. ಇಬ್ಬರ ಜೊತೆಗೆ ಸಮಾನ ನಿಕಟತೆ ಹೊಂದಿದ್ದು, ಯಾರನ್ನೂ ದೂಷಿಸದೆ ಮೋಟಮ್ಮ ರಾಜಕೀಯ ಮಾಡಿದವರು. ಅವರಿಗೆ ಉತ್ತಮ ಭವಿಷ್ಯವಿದೆ’ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ‘ಉತ್ತಮ ಅಥ್ಲೀಟ್ ಕೂಡಾ ಆದ ಮೋಟಮ್ಮ ರಾಜಕಾರಣಿಯಾಗಿ ರಾಜ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮೋಟಮ್ಮನವರ ಸಾಮಾಜಿಕ ಮತ್ತು ರಾಜಕೀಯ ಬದುಕು ಇನ್ನಷ್ಟು ಉತ್ತಮವಾಗಲಿ’ ಎಂದು ಹಾರೈಸಿದರು.

ಕೃತಿ ಕುರಿತಂತೆ ಪತ್ರಕರ್ತ ದಿನೇಶ್ ಅಮಿನ್ ಮಟ್ಟು, ‘ಪುಸ್ತಕದಲ್ಲಿ ಸುಳ್ಳುಗಳಿಲ್ಲ. ನಮ್ಮಲ್ಲಿ ಮಹಿಳೆಯರು ಆತ್ಮಕಥನ ಬರೆಯುವುದೇ ಕಡಿಮೆ. ಆದರೆ, ಮೋಟಮ್ಮ ಅನೇಕ ಸತ್ಯಗಳನ್ನು ಹೇಳದೇ ಉಳಿಸಿಕೊಂಡಿದ್ದಾರೆ. ಈ ಮೂಲಕ ಪುರುಷರ ಮಾನ ಕಾಪಾಡಿದ್ದಾರೆ. ಮಹಿಳೆಯರು ತಮ್ಮ ಆತ್ಮಕಥನಗಳಲ್ಲಿ ಎಲ್ಲವನ್ನೂ ಹೇಳಿದರೆ ಪರಿಸ್ಥಿತಿ ಹೇಗಿರುತ್ತಿತ್ತು ಎಂದು ಊಹಿಸಿಕೊಳ್ಳಬಹುದು' ಎಂದರು.

ನಿವೃತ್ತ ಪ್ರಾಧ್ಯಾಪಕ ಹಿ.ಶಿ. ರಾಮಚಂದ್ರೇಗೌಡ, ಕಾಂಗ್ರೆಸ್ ಮುಖಂಡರಾದ ವಿ.ಆರ್.ಸುದರ್ಶನ್, ಮಾರ್ಗರೇಟ್ ಆಳ್ವ, ಬಿ.ಎಲ್.ಶಂಕರ್, ವಿಕಾಸ ಪ್ರಕಾಶನದ ಆರ್.ಪೂರ್ಣಿಮಾ, ಆತ್ಮಕಥನದ ನಿರೂಪಕ ವೀರಣ್ಣ ಕಮ್ಮಾರ ಇದ್ದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ (ಎಡದಿಂದ ಐದನೆಯವರು) ಮೋಟಮ್ಮ (ಎಡದಿಂದ ಮೂರನೆಯವರು) ಅವರ ಆತ್ಮಕಥನ ‘ಬಿದಿರು ನೀನ್ಯಾರಿಗಲ್ಲದವಳು’ ಪುಸ್ತಕವನ್ನು ಬಿಡುಗಡೆ ಮಾಡಿದರು. (ಎಡದಿಂದ) ಕಾಂಗ್ರೆಸ್ ನಾಯಕಿ ರಾಣಿ ಸತೀಶ್, ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಸಾಹಿತಿ ಕಮಲಾ ಹಂಪನಾ, ಶಾಸಕ ಜಿ.ಪರಮೇಶ್ವರ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಲೇಖಕಿ ಬಿ.ಟಿ.ಲಲಿತಾ ನಾಯಕ್ ಇದ್ದರು –ಪ್ರಜಾವಾಣಿ ಚಿತ್ರ

ಆತ್ಮಕಥನ: ಬಿದಿರು ನೀನ್ಯಾರಿಗಲ್ಲದವಳು
ಬೆಲೆ: ₹ 400
ಪ್ರಕಾಶಕರು: ವಿಕಾಸ ಪ್ರಕಾಶನ, ಬೆಂಗಳೂರು

ಮೀನುಗಾರಿಕೆ: ಸಿಡಿಲು ಬಡಿದು ವ್ಯಕ್ತಿ ಸಾವು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ಮಳೆ ಬಿರುಸುಗೊಂಡಿದ್ದು ನಾಡ ದೋಣಿಯಲ್ಲಿ ಮೀನುಗಾರಿಕೆಗೆ ತೆರಳಿದ್ದ ಕಸಬಾ ಬೆಂಗರೆ ನಿವಾಸಿ ಹೈದರ್ ಅಲಿ (38) ಉಳ್ಳಾಲ ಕೋಡಿಯ ಸಮುದ್ರದಲ್ಲಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಗಾಳಿ ಸಹಿತ ಮಳೆ ಸುರಿದಿದ್ದು ಬೆಳ್ತಂಗಡಿ ಹಳೆ ಸೇತುವೆ ರಸ್ತೆಯ ಅಂಬೇಡ್ಕರ್ ಭವನದ ಬಳಿ ಬೃಹತ್ ಮರ ರಸ್ತೆಗೆ ಉರುಳಿ ಬಿದ್ದು ವಿದ್ಯುತ್ ಕಂಬಗಳು ಮುರಿದಿವೆ. ಮಂಗಳೂರು ನಗರದಲ್ಲಿ ಉತ್ತಮ ಮಳೆಯಾಗಿದೆ. ಬಂಟ್ವಾಳದಲ್ಲಿ ಸಾಧಾರಣ, ಪುತ್ತೂರು, ಸುಳ್ಯ ತಾಲ್ಲೂಕಿನ ವಿವಿಧ ಕಡೆಗಳಲ್ಲಿ, ಮುಲ್ಕಿ ಮತ್ತು ಮೂಡುಬಿದಿರೆಯಲ್ಲಿ ತುಂತುರು ಮಳೆಯಾಗಿದೆ. ಜಿಲ್ಲೆಯಲ್ಲಿ 14ರ ವರೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಸಾಧಾರಣ ಮಳೆಯಾಗಿದೆ. ಕುಂದಾಪುರ ತಾಲ್ಲೂಕಿನ ಸಿದ್ದಾಪುರದಲ್ಲಿ ಗರಿಷ್ಠ 8.5 ಸೆಂ.ಮೀ ಮಳೆಯಾಗಿದೆ. ಜಿಲ್ಲೆಯಾದ್ಯಂತ 2.7 ಸೆ.ಮೀ ಮಳೆ ಸುರಿದಿದೆ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಮೂಡಿಗೆರೆ ವ್ಯಾಪ್ತಿಯಲ್ಲಿ ಮಳೆಯಾಗಿದೆ.

ಕಾರವಾರದಲ್ಲಿ ಮಧ್ಯಾಹ್ನ ರಭಸದಿಂದ ಮಳೆ ಸುರಿಯಿತು. ನಗರದ ರವೀಂದ್ರನಾಥ ಟ್ಯಾಗೋರ್ ಕಡಲತೀರದ ಎದುರು ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು. ಕಾರವಾರದಲ್ಲಿ 7.7 ಸೆಂ.ಮೀ, ಕುಮಟಾದಲ್ಲಿ 5.2 ಸೆಂ.ಮೀ, ಭಟ್ಕಳದಲ್ಲಿ 2.8 ಸೆಂ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉತ್ತರಪ್ರದೇಶದಲ್ಲಿ ಮತ್ತೆ ಬುಲ್ಡೋಜರ್ ಸದ್ದು: ಪೊಲೀಸ್ ಕಸ್ಟಡಿಯಲ್ಲಿ ಮುಖ್ಯ ಆರೋಪಿ ಜಾಫರ್ ಹಯಾತ್ ಹಶ್ಮಿ

ಕಾನ್ಪುರ ಹಿಂಸೆ: ಆರೋಪಿ ಆಪ್ತನ ಕಟ್ಟಡ ಧ್ವಂಸ

ಕಾನ್ಪುರ (ಪಿಟಿಐ): ಪ್ರವಾದಿ ಬಗ್ಗೆ ಹೇಳಿಕೆ ವಿರೋಧಿಸಿ ಕಾನ್ಪುರದಲ್ಲಿ ಜೂನ್ 3ರಂದು ನಡೆದಿದ್ದ ಹಿಂಸಾಚಾರದ ಮುಖ್ಯ ಆರೋಪಿ ಜಾಫರ್ ಹಯಾತ್ ಹಶ್ಮಿಯ ಆಪ್ತನಿಗೆ ಸೇರಿದ ಬಹುಮಹಡಿ ಕಟ್ಟಡವನ್ನು ಕಾನ್ಪುರ ಅಭಿವೃದ್ಧಿ ಪ್ರಾಧಿಕಾರ ಧ್ವಂಸಗೊಳಿಸಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಹಶ್ಮಿ ಸಂಬಂಧಿ ಮೊಹಮ್ಮದ್ ಇಶ್ತಿಯಾಕ್ ಅವರು ಸ್ವರೂಪ್ ನಗರದಲ್ಲಿ ಹೊಸದಾಗಿ ನಿರ್ಮಿಸಿದ್ದ ಕಟ್ಟಡವನ್ನು ಕೆಡವಲಾಗಿದೆ. ಈ ಕಟ್ಟಡ ನಿರ್ಮಾಣಕ್ಕೆ ಹಶ್ಮಿ ಬಂಡವಾಳ ಹೂಡಿರುವ ಮಾಹಿತಿಯಿದೆ. ಕಟ್ಟಡವನ್ನು ಕಾನೂನು ಪ್ರಕಾರವೇ ಧ್ವಂಸಗೊಳಿಸಲಾಗಿದೆ ಎಂದು ಪೊಲೀಸ್ ಜಂಟಿ ಆಯುಕ್ತ ಆನಂದ್ ಪ್ರಕಾಶ್ ತಿವಾರಿ ಹೇಳಿದ್ದಾರೆ.

ಹಶ್ಮಿ, ಜಾವೇದ್ ಅಹ್ಮದ್ ಖಾನ್, ಮೊಹಮ್ಮದ್ ರಾಹಿಲ್ ಮತ್ತು ಸುಫಿಯಾನ್ ಅವರನ್ನು ಶನಿವಾರ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಬಿಜೆಪಿ ಉಚ್ಚಾಟಿತ ನಾಯಕಿ ನೂಪುರ್ ಶರ್ಮಾ ಅವರು ಪ್ರವಾದಿ ಮೊಹಮ್ಮದರ ಕುರಿತು ನೀಡಿದ್ದ ಆಕ್ಷೇಪಾರ್ಹ ಹೇಳಿಕೆ ವಿರೋಧಿಸಿ ಕಾನ್ಪುರದಲ್ಲಿ ನಡೆದ ಪ್ರತಿಭಟನೆ ಹಿಂಸೆಗೆ ತಿರುಗಿತ್ತು. ಉದ್ರಿಕ್ತರ ಗುಂಪು ಕಲ್ಲು ತೂರಾಟ ನಡೆಸಿ, ಪೆಟ್ರೋಲ್ ಬಾಂಬ್ ಎಸೆದಿತ್ತು. ಈ ಗಲಭೆಯಲ್ಲಿ ಪೊಲೀಸ್ ಸಿಬ್ಬಂದಿ ಸೇರಿ 40 ಜನರು ಗಾಯಗೊಂಡಿದ್ದರು.

ನೂಪುರ್‌ಗೆ ಸಮನ್ಸ್

ಮುಂಬೈ: ಪ್ರವಾದಿ ಬಗ್ಗೆ ಹೇಳಿಕೆ ನೀಡಿದ ಬಿಜೆಪಿಯಿಂದ ಅಮಾನತುಗೊಂಡಿರುವ ನೂಪುರ್ ಶರ್ಮಾ ಅವರಿಗೆ ಮುಂಬೈ ಪೊಲೀಸರು ಶನಿವಾರ ಸಮನ್ಸ್ ನೀಡಿದ್ದು, ಇದೇ 25ರಂದು ಹಾಜರಾಗಿ ಹೇಳಿಕೆ ದಾಖಲಿಸುವಂತೆ ಸೂಚಿಸಿದ್ದಾರೆ.



ಕಾನ್ಪುರದಲ್ಲಿ ಅಕ್ರಮ ಕಟ್ಟಡವನ್ನು ಬುಲ್ಡೋಜರ್ ಮೂಲಕ ಶನಿವಾರ ತೆರವು ಮಾಡಲಾಯಿತು (ಎಡಚಿತ್ರ), ಪಶ್ಚಿಮ ಬಂಗಾಳದ ಹೌರಾದಲ್ಲಿ ಶನಿವಾರ ನಡೆದ ಹಿಂಸಾಚಾರದಲ್ಲಿ ಕಟ್ಟಡವೊಂದಕ್ಕೆ ಹಚ್ಚಿದ್ದ ಬೆಂಕಿಯನ್ನು ಅಗ್ನಿಶಾಮಕ ಸಿಬ್ಬಂದಿ ನಂದಿಸಿದರು —ಪಿಟಿಐ ಚಿತ್ರಗಳು

ಉತ್ತರ ಪ್ರದೇಶದಲ್ಲಿ 227 ಜನರ ಬಂಧನ

ಲಖನೌ: ಶುಕ್ರವಾರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶದ ವಿವಿಧ ಕಡೆಗಳಲ್ಲಿ ಒಟ್ಟು 227 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಯಾಗ್‌ರಾಜ್‌ನಲ್ಲಿ 68, ಹಾಥರಸ್‌ನಲ್ಲಿ 50ಕ್ಕೂ ಹೆಚ್ಚು ಜನರು, ಸಹಾರನ್‌ಪುರದಲ್ಲಿ 48, ಅಂಬೇಡ್ಕರ್ ನಗರದಲ್ಲಿ 28, ಮೊರಾದಾಬಾದ್‌ನಲ್ಲಿ 25, ಫಿರೋಜ್‌ಬಾದ್‌ನಲ್ಲಿ 8 ಜನರು ಬಂಧನಕ್ಕೆ ಒಳಗಾಗಿದ್ದಾರೆ ಎಂದು ಎಡಿಜಿಪಿ ಪ್ರಶಾಂತ್ ಕುಮಾರ್ ಶನಿವಾರ ತಿಳಿಸಿದ್ದಾರೆ.

100 ಜನರ ವಿರುದ್ಧ ಪ್ರಕರಣ: ಅನಧಿಕೃತವಾಗಿ ಗುಂಪುಸೇರಿದ ಆರೋಪದ ಮೇಲೆ ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ 100ಕ್ಕೂ ಹೆಚ್ಚು ಪ್ರತಿಭಟನಕಾರರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೂಪುರ್ ಶರ್ಮಾ ಹಾಗೂ ನವೀನ್ ಜಿಂದಾಲ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆದಿತ್ತು. ಪ್ರತಿಭಟನಕಾರರ ವಿರುದ್ಧ ಐಪಿಸಿ ಸೆಕ್ಷನ್ 149 ಹಾಗೂ ಮೋಟಾರು ವಹನ ಕಾಯ್ದೆಗಳ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಬೇಗಂಪುರ ಠಾಣೆ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಎಫ್‌ಐಆರ್ ದಾಖಲು: ದೆಹಲಿಯ ಜಾಮಾ ಮಸೀದಿಯ ಹೊರಗಡೆ ಶುಕ್ರವಾರ ದಿಢೀರ್ ಪ್ರತಿಭಟನೆ ನಡೆಸಿದ ಪ್ರಕರಣ ಸಂಬಂಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಪ್ರತಿಭಟನೆ ನಡೆಸದಂತೆ ಪೊಲೀಸರು ನೀಡಿದ ಸಲಹೆಯನ್ನು ಧಿಕ್ಕರಿಸಿ ಘೋಷಣೆ ಕೂಗಿದ ಪ್ರತಿಭಟನಕಾರರ ವಿರುದ್ಧ ಸೆಕ್ಷನ್ 188ರ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಂಧನ: ನೂಪುರ್ ಶರ್ಮಾ ಅವರ ಶಿರಚ್ಛೇದನ ಮಾಡುವುದನ್ನು ಬಿಂಬಿಸುವ ವಿಡಿಯೊವೊಂದನ್ನು ಅಪ್‌ಲೋಡ್ ಮಾಡಿದ್ದ ಕಾಶ್ಮೀರದ ಯೂಟ್ಯೂಬರ್ ಫೈಸಲ್ ವಾನಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಈ ವಿಡಿಯೊ ಮಾಡಿದ್ದಕ್ಕೆ ಕ್ಷಮೆ ಕೇಳಿರುವ ವಾನಿ, ವಿಡಿಯೊ ಡಿಲೀಟ್ ಮಾಡಿದ್ದಾನೆ. ಈ ಮಧ್ಯೆ, ಜಮ್ಮುವಿನ ಚೆನಾಬ್ ಕಣಿವೆಯಲ್ಲಿ ಶನಿವಾರವೂ ಕರ್ಫ್ಯೂ ಮುಂದುವರಿದಿದೆ.

ಬ್ರಾಡ್‌ಬ್ಯಾಂಡ್ ಹಾಗೂ ಮೊಬೈಲ್ ಇಂಟರ್‌ನೆಟ್ ಸೇವೆ ಸ್ಥಗಿತಗೊಂಡಿದೆ.

ಕಟ್ಟೆಚ್ಚರ: ಮುಸ್ಲಿಂ ಮುಖಂಡರ ಸಭೆ

ಬೆಂಗಳೂರು: ಪ್ರವಾದಿ ಮಹಮ್ಮದರ ಕುರಿತ ಅವಹೇಳನಕಾರಿ ಹೇಳಿಕೆಗೆ ದೇಶದಾದ್ಯಂತ ಮುಸ್ಲಿಂ ಸಮುದಾಯದಿಂದ ಆಕ್ರೋಶ ವ್ಯಕ್ತವಾಗಿರುವುದರಿಂದ ಮುಂಜಾಗ್ರತೆಯಾಗಿ ರಾಜ್ಯದಲ್ಲೂ ಕಟ್ಟೆಚ್ಚರ ವಹಿಸಲಾಗಿದೆ.

ಉತ್ತರ ಪ್ರದೇಶ, ಜಾರ್ಖಂಡ್‌ನಲ್ಲಿ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಶುಕ್ರವಾರ ಘರ್ಷಣೆ ನಡೆದಿದೆ. ಇಂಥ ಘಟನೆಗಳು ರಾಜ್ಯದಲ್ಲಿ ನಡೆಯದಂತೆ ಎಚ್ಚರಿಕೆ ವಹಿಸಲು ಪೊಲೀಸರು, ತಮ್ಮ ವ್ಯಾಪ್ತಿಯಲ್ಲಿ ಭದ್ರತೆ ಬಿಗಿಗೊಳಿಸಿದ್ದಾರೆ.

ಮಸೀದಿ, ಮಂದಿರ ಹಾಗೂ ಚರ್ಚ್‌ಗಳ ಸುತ್ತಮುತ್ತ ಪೊಲೀಸರು ಭದ್ರತೆ ವಹಿಸಲಾಗಿದೆ. ಬೆಂಗಳೂರು, ಮೈಸೂರು, ಕಲಬುರಗಿ, ಇತರೆ ಜಿಲ್ಲೆಗಳ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪ್ರದೇಶಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದರು.

'ಪ್ರತಿ ಠಾಣೆ ವ್ಯಾಪ್ತಿಯ ಸೂಕ್ಷ್ಮ, ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ. ಅಗತ್ಯವಿರುವೆಡೆ ಹೆಚ್ಚಿನ ಸಿಬ್ಬಂದಿ ನಿಯೋಜಿಸಲು, ಗಸ್ತು ಹೆಚ್ಚಿಸಲು ಹೇಳಲಾಗಿದೆ' ಎಂದೂ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಸಭೆ: ಬೆಂಗಳೂರು ಕಮಿಷನರ್ ಪ್ರತಾಪ್ ರೆಡ್ಡಿ ಅವರು ಮುಸ್ಲಿಂ ಮುಖಂಡರ ಜೊತೆ ಶನಿವಾರ ಸಭೆ ನಡೆಸಿದರು. ಶ್ರೀರಾಮಪುರ ಹಾಗೂ ಇತರೆ ಠಾಣೆಗಳಲ್ಲೂ ಸಭೆ ಜರುಗಿದವು. 'ಅನುಮತಿ ಇಲ್ಲದೇ ನಗರದಲ್ಲಿ ಯಾವುದೇ ಪ್ರತಿಭಟನೆ ನಡೆಸಲು ಅವಕಾಶವಿಲ್ಲ. ಶಾಂತಿಯಿಂದ ವರ್ತಿಸುವಂತೆ ಮುಖಂಡರು ತಮ್ಮ ಸಮುದಾಯದ ಜನರಿಗೆ ತಿಳಿವಳಿಕೆ ಹೇಳಬೇಕು' ಎಂದು ಪ್ರತಾಪ್ ರೆಡ್ಡಿ ಸಭೆಯಲ್ಲಿ ಕೋರಿದರು.

ಶ್ರೀರಾಮಪುರ ಠಾಣೆ ಸಭೆಯಲ್ಲಿ ಮಾತನಾಡಿದ ಮುಸ್ಲಿಂ ಮುಖಂಡ ಸೈಯದ್ ತಬ್ರೇಜ್, 'ರಾಜಕೀಯ ಷಡ್ಯಂತ್ರದಿಂದ ಕೂಡಿದ ಪ್ರತಿಭಟನೆಗೆ ನಮ್ಮ ಬೆಂಬಲವಿಲ್ಲ' ಎಂದರು.

ದಾವಣಗೆರೆಯಲ್ಲಿ ನಿಷೇಧಾಜ್ಞೆ ಜಾರಿ

ದಾವಣಗೆರೆ: ಪ್ರವಾದಿ ಮಹಮ್ಮದರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪ ಸಂಬಂಧ ದೇಶದಾದ್ಯಂತ ಮುಸ್ಲಿಂ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿರುವ ಕಾರಣ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜೂನ್ 11ರ ಸಂಜೆ 6ರಿಂದ 12ರ ರಾತ್ರಿ 10 ಗಂಟೆವರೆಗೂ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶ ಹೊರಡಿಸಿದ್ದಾರೆ. 'ಎಸ್‌ಡಿಪಿಐ ಸಂಘಟನೆ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಜನಾಧಿಕಾರ ಸಮಾವೇಶವನ್ನು ನಿಷೇಧಾಜ್ಞೆ ಜಾರಿಗೊಳಿಸಿರುವುದರಿಂದ ಮುಂದೂಡುವಂತೆ ಸಮುದಾಯದ ಮುಖಂಡರಿಗೆ ಮನವಿ ಮಾಡಲಾಗಿದೆ. ನಗರದಲ್ಲಿ ಬಂದೋಬಸ್ತ್ ಮಾಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

ವಿಶ್ವಸಂಸ್ಥೆ ಮುಖ್ಯಸ್ಥರ ಪ್ರತಿನಿಧಿಯಾಗಿ ಗಿಲ್

ಒಂದನೇ ಪುಟದಿಂದ

ಗಿಲ್ ಅವರನ್ನು 'ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದ ಚಿಂತನಾಶೀಲ ನಾಯಕ' ಎಂದು ವಿಶ್ವಸಂಸ್ಥೆ ಬಣ್ಣಿಸಿದೆ. ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಡಿಜಿಟಲ್ ತಂತ್ರಜ್ಞಾನದ ಸಮರ್ಥ ಬಳಕೆ ಹೇಗೆ ಉಪಯುಕ್ತ ಎಂಬ ಬಗ್ಗೆ ಅವರು ಆಳವಾದ ಜ್ಞಾನ ಹೊಂದಿದ್ದಾರೆ.

ಇವರು 2016ರಿಂದ 2018ರವರೆಗೆ ನಿಶ್ಶಸ್ತ್ರೀಕರಣ ಕುರಿತ ಸಮ್ಮೇಳನಕ್ಕೆ ಭಾರತೀಯ ರಾಯಭಾರಿ ಮತ್ತು ಶಾಶ್ವತ ಪ್ರತಿನಿಧಿ ಹಾಗೂ ಅಂತರರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮತ್ತು ಕೃತಕ ಬುದ್ಧಿಮತ್ತೆ ಸಂಶೋಧನೆಗೆ ಸಿಇಒ ಆಗಿಯೂ ಕಾರ್ಯನಿರ್ವಹಿಸಿದ್ದರು.

ಗಿಲ್ ಅವರು 1992ರಲ್ಲಿ ಭಾರತೀಯ ರಾಜತಾಂತ್ರಿಕ ಸೇವೆಗೆ ಸೇರಿದರು. ಅಂತರರಾಷ್ಟ್ರೀಯ ಭದ್ರತಾ ವ್ಯವಹಾರ ಸೇರಿದಂತೆ ವಿವಿಧ ಸ್ಥಾನಗಳನ್ನು ನಿಭಾಯಿಸಿದ್ದು, ಟೆಹರಾನ್ ಮತ್ತು ಕೊಲಂಬೊದಲ್ಲಿಯೂ ಕಾರ್ಯನಿರ್ವಹಿಸಿದ್ದರು. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಸಂದರ್ಶಕ ವಿಷಯತಜ್ಞರಾಗಿ ಸೇವೆ ಸಲ್ಲಿಸಿದ್ದಾರೆ.

ಲಂಡನ್‌ನ ಕಿಂಗ್ಸ್ ಕಾಲೇಜಿನಲ್ಲಿ ಪಿಎಚ್.ಡಿ ಪದವಿ ಪಡೆದಿರುವ ಅವರು ಪದವಿ ಶಿಕ್ಷಣವನ್ನು ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ವಿಷಯದಲ್ಲಿ ಪೂರ್ಣಗೊಳಿಸಿದರು.

ಜಿನೇವಾ ವಿಶ್ವವಿದ್ಯಾಲಯದಲ್ಲಿ ಫ್ರೆಂಚ್ ಇತಿಹಾಸ ಮತ್ತು ಭಾಷಾ ವಿಷಯದಲ್ಲಿ ಉನ್ನತ ಡಿಪ್ಲೊಮಾ ಪದವಿ ಪಡೆದಿದ್ದಾರೆ.

ನಾಗರಿಕರ ಹತ್ಯೆ ಪ್ರಕರಣ: 30 ಯೋಧರ ವಿರುದ್ಧ ಚಾರ್ಜ್‌ಶೀಟ್

ದಿಮಾಪುರ್ (ಪಿಟಿಐ): ನಾಗಾಲ್ಯಾಂಡ್‌ನ ಮೋನ್ ಜಿಲ್ಲೆಯ ಓಟಿಂಗ್-ತಿರು ಪ್ರದೇಶದಲ್ಲಿ ಕಳೆದ ಡಿಸೆಂಬರ್ 4 ರಂದು ಸೇನಾಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ 13 ನಾಗರಿಕರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ರಾಜ್ಯ ಪೊಲೀಸರು 21 ಪ್ಯಾರಾ ಸ್ಪೆಷಲ್ ಫೋರ್ಸ್‌ನ ಮೇಜರ್ ಸೇರಿದಂತೆ 30 ಯೋಧರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಚಾರ್ಜ್‌ಶೀಟ್‌ನಲ್ಲಿ ಕೊಲೆ ಮತ್ತು ಅಪರಾಧ ಆರೋಪಗಳನ್ನು ಹೊರಿಸಲಾಗಿದೆ. ವಿಶೇಷ ಪಡೆ ತಂಡವು ಕಾರ್ಯಾಚರಣೆ ನಿಯಮಗಳನ್ನು ಅನುಸರಿಸಿಲ್ಲ ಮತ್ತು ಅಸಮಂಜಸವಾದ ಗುಂಡಿನ ದಾಳಿಯಲ್ಲಿ ಆರು ನಾಗರಿಕರು ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾಗಾಲ್ಯಾಂಡ್ ಪೊಲೀಸ್ ಮಹಾನಿರ್ದೇಶಕ ಟಿ. ಜಾನ್ ಲಾಂಗ್‌ಕುಮರ್, 'ನಾಗರಿಕರ ಸಾವಿನ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಲಾಗಿದೆ. ಅಧಿಕಾರಿಗಳು ಮತ್ತು ಮೂಲಗಳಿಂದ ಸಂಬಂಧಿಸಿದ ಪ್ರಮುಖ ದಾಖಲೆಗಳು, ಕೇಂದ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯ ಗುವಾಹಟಿ, ಹೈದರಾಬಾದ್ ಮತ್ತು ಚಂಡೀಗಡದಿಂದ ವೈಜ್ಞಾನಿಕ ಅಭಿಪ್ರಾಯ, ಮಾಹಿತಿ ತಂತ್ರಜ್ಞಾನ ಸಂಸ್ಥೆಯಿಂದ ತಾಂತ್ರಿಕ ಸಾಕ್ಷ್ಯಗಳನ್ನು ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ' ಎಂದರು.

ರಾಜ್ಯಸಭೆ ಚುನಾವಣೆ: ಎರಡು ಹೆಚ್ಚುವರಿ ಸ್ಥಾನ ಗೆದ್ದ ಕಮಲ ಪಾಳಯ

ಬಿಜೆಪಿಗೆ ಉಲ್ಲಾಸ: ಕಾಂಗ್ರೆಸ್‌ಗೆ ಆಘಾತ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭಾ ಚುನಾವಣೆಯಲ್ಲಿ ತಂತ್ರಗಾರಿಕೆ ಬಳಸಿ ಎರಡು ಹೆಚ್ಚುವರಿ ಸ್ಥಾನಗಳಲ್ಲಿ ಗಳಿಸಿದ ಗೆಲುವು ಬಿಜೆಪಿ ಪಾಳಯದಲ್ಲಿ ಮತ್ತಷ್ಟು ಹುರುಪು ಮೂಡಿಸಿದೆ. ಹರಿಯಾಣದಲ್ಲಿ ಪಕ್ಷದ ಅಭ್ಯರ್ಥಿ ಅಜಯ್ ಮಾಕನ್ ಅವರ ಸೋಲು ಕಾಂಗ್ರೆಸ್‌ಗೆ ಆಘಾತ ಉಂಟುಮಾಡಿದೆ.

ಹರಿಯಾಣ ಹಾಗೂ ಮಹಾರಾಷ್ಟ್ರದಲ್ಲಿ ಮತದಾನದ ವೇಳೆ ನಿಯಮ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ವಿವಿಧ ಪಕ್ಷಗಳು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದವು. ಹೀಗಾಗಿ ಈ ರಾಜ್ಯಗಳಲ್ಲಿ ಮತ ಎಣಿಕೆ ಆರಂಭವಾಗಿದ್ದು ಮಧ್ಯರಾತ್ರಿಯ ಬಳಿಕವಷ್ಟೇ.

ಹರಿಯಾಣ ವಿಧಾನಸಭೆಯಲ್ಲಿ ಕೈ ಪಾಳಯ 31 ಸದಸ್ಯರನ್ನು ಹೊಂದಿದೆ. ಮಾಕನ್ ಗೆಲುವಿಗೆ 31 ಮತಗಳು ಬೇಕಿದ್ದವು. ಆದರೆ, ಅವರು ಗಳಿಸಿದ್ದು 29 ಮತಗಳನ್ನು ಮಾತ್ರ. ಕಾಂಗ್ರೆಸ್‌ನ ಅತೃಪ್ತ ಶಾಸಕ ಕುಲದೀಪ್ ಬಿಷ್ಣೋಯಿ ಅವರು ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿ ಕಾರ್ತಿಕೇಯ ಶರ್ಮಾ ಅವರಿಗೆ ಮತ ಹಾಕಿದರು. ಕಾಂಗ್ರೆಸ್‌ನ ಮತ್ತೊಬ್ಬ ಶಾಸಕನ ಮತ ಅಸಿಂಧುವಾಯಿತು. ಇದರಿಂದಾಗಿ, ಮಾಕನ್ ಅವರಿಗೆ 29 ಮತಗಳಷ್ಟೇ ದೊರೆತವು.

ಮುಖ್ಯಾಂಶಗಳು

- 15 ರಾಜ್ಯಗಳ 57 ರಾಜ್ಯಸಭಾ ಸ್ಥಾನಗಳಿಗಾಗಿ ಚುನಾವಣೆ
- 41 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆ
- 4 ರಾಜ್ಯಗಳ 16 ಸ್ಥಾನಗಳಿಗೆ ಚುನಾವಣೆ (ಮಹಾರಾಷ್ಟ್ರ 6, ಕರ್ನಾಟಕ 4, ರಾಜಸ್ಥಾನ 4 ಹಾಗೂ ಹರಿಯಾಣ 2)

ಬಿಜೆಪಿಯ ಕೃಷ್ಣಲಾಲ್ ಪನ್ವರ್ ಅವರು ಪ್ರಥಮ ಪ್ರಾಶಸ್ತ್ಯದ 36 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಕಾರ್ತಿಕೇಯ ಶರ್ಮಾ ಅವರು ಮೊದಲ ಪ್ರಾಶಸ್ತ್ಯದ 23 ಮತಗಳನ್ನು ಪಡೆದರು. ಶರ್ಮಾ ಅವರಿಗೆ ಎರಡನೇ ಪ್ರಾಶಸ್ತ್ಯದ 6.6 ಮತಗಳು ಸಿಕ್ಕಿದವು. ಇದರಿಂದಾಗಿ ಅವರ ಮತಗಳ ಸಂಖ್ಯೆ 29.6 ಆಯಿತು. ಮಾಕನ್ ಅವರಿಗೆ ಎರಡನೇ ಪ್ರಾಶಸ್ತ್ಯದ ಮತಗಳು ಸಿಗಲಿಲ್ಲ. ಶರ್ಮಾ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾ ಆಯೋಗ ಪ್ರಕಟಿಸಿತು.

ರಾಜ್ಯಸಭೆಯಲ್ಲಿ ಪ್ರಮುಖ ಪಕ್ಷಗಳ ಬಲಾಬಲ (ಚುನಾವಣೆಯ ನಂತರ)

ಬಿಜೆಪಿ	92
ಕಾಂಗ್ರೆಸ್	31
ಟಿಎಂಸಿ	13
ಡಿಎಂಕೆ	10
ಬಿಜೆಡಿ	9
ಟಿಆರ್‌ಎಸ್	7

ಮಹಾರಾಷ್ಟ್ರದಲ್ಲಿ ಶಿವಸೇನಾದ ಎರಡನೇ ಅಭ್ಯರ್ಥಿಗೆ ಸೋಲಾಗಿದೆ. ಬಿಜೆಪಿಯು ತನ್ನ ಹೆಚ್ಚುವರಿ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡಿದೆ. ಇದರಿಂದಾಗಿ 'ಮಹಾವಿಕಾಸ ಅಘಾಡಿ' ಸರ್ಕಾರಕ್ಕೆ ಹಿನ್ನಡೆಯಾಗಿದೆ.

ಆರನೇ ಸ್ಥಾನಕ್ಕಾಗಿ ಶಿವಸೇನಾದ ಸಂಜಯ್ ಪವಾರ್ ಹಾಗೂ ಬಿಜೆಪಿಯ ಧನಂಜಯ ಮಹಾದಿಕ್ ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿತ್ತು. ಬಿಜೆಪಿಯ ಪೀಯೂಷ್ ಗೋಯೆಲ್ (48 ಮತ), ಅನಿಲ್ ಬೊಂಡೆ (48 ಮತ), ಶಿವಸೇನಾದ ಸಂಜಯ್ ರಾವತ್ (41 ಮತ), ಕಾಂಗ್ರೆಸ್‌ನ ಇಮ್ರಾನ್ ಪ್ರತಾಪ್‌ಗರಿ (44 ಮತ), ಎನ್‌ಸಿಪಿಯ ಪ್ರಫುಲ್ ಪಟೇಲ್ (43 ಮತ) ಗೆಲುವು ಸಾಧಿಸಿದ್ದರು. ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕೆಯ ಬಳಿಕ ಮಹಾದಿಕ್ ಗೆಲುವನ್ನು ಪ್ರಕಟಿಸಲಾಯಿತು.

ಫಲಿಸಿದ ಗೆಹಲೋತ್ ತಂತ್ರ: ರಾಜಸ್ಥಾನದಲ್ಲಿ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮೂರು ಸ್ಥಾನಗಳನ್ನು ಗೆದ್ದುಕೊಂಡು ಬೀಗಿತು. ಇಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ತಂತ್ರ ಕೆಲಸ ಮಾಡಿತು. ಬಿಜೆಪಿ ಬೆಂಬಲದಿಂದ ಕಣಕ್ಕೆ ಇಳಿದಿದ್ದ ಝಿ ಸಮೂಹದ ಅಧ್ಯಕ್ಷ ಸುಭಾಷ್‌ಚಂದ್ರ ಅವರಿಗೆ ಸೋಲಾಯಿತು. ಆದರೆ, ಹರಿಯಾಣದಲ್ಲಿ ಕಾಂಗ್ರೆಸ್ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ. ಕುಲದೀಪ್ ಬಿಷ್ಣೋಯಿ ಅವರ ಮನವೊಲಿಸಲು ಕಾಂಗ್ರೆಸ್ ಮುಖಂಡರು ಪ್ರಯತ್ನ ಮಾಡಿದ್ದರು. ಅದಕ್ಕೆ ಬಿಷ್ಣೋಯಿ ಮಣಿಯಲಿಲ್ಲ. ಅವರು ಅಡ್ಡ ಮತದಾನ ಮಾಡಿದರು. 'ಬಿಷ್ಣೋಯಿ ಅವರನ್ನು ಪಕ್ಷದ ಎಲ್ಲ ಹುದ್ದೆಗಳಿಂದ (ಸಿಡಬ್ಲ್ಯುಸಿಯ ವಿಶೇಷ ಆಹ್ವಾನಿತ ಸೇರಿ) ತೆಗೆದು ಹಾಕಲಾಗಿದೆ' ಎಂದು ಕಾಂಗ್ರೆಸ್ ಹೇಳಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಕಿತ್ತಾಟದ ಲಾಭ ಬಿಜೆಪಿಗೆ ದಕ್ಕಿತು. ಕಮಲ ಪಾಳಯದ ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಗೆಲುವಿನ ನಗೆ ಬೀರಿದರು.

15 ರಾಜ್ಯಗಳ 57 ಸ್ಥಾನಗಳ ಪೈಕಿ 22 ಸ್ಥಾನಗಳಲ್ಲಿ ಕಮಲ ಪಾಳಯ ಗೆಲುವು ಸಾಧಿಸಿತು. ವಿಧಾನಸಭೆಗಳ ಸದಸ್ಯರ ಬಲಾಬಲದ ಪ್ರಕಾರ, ಬಿಜೆಪಿ 20 ಸ್ಥಾನಗಳಲ್ಲಿ ಗೆಲ್ಲಲು ಸಾಧ್ಯವಿತ್ತು. ಕಳೆದ ಸಾಲಿಗೆ ಹೋಲಿಸಿದರೆ (ಈಗ ಚುನಾವಣೆ ನಡೆದ ಸ್ಥಾನಗಳ ಲೆಕ್ಕಾಚಾರದಲ್ಲಿ) ಬಿಜೆಪಿಗೆ ಮೂರು ಸ್ಥಾನಗಳ ನಷ್ಟವಾಗಿದೆ. ಉತ್ತರ ಪ್ರದೇಶದಲ್ಲಿ ಕಳೆದ ಸಲ ಪಕ್ಷ 5 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಈ ಸಲ ಸಂಖ್ಯೆ ಎಂಟಕ್ಕೆ ಏರಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಹೆಚ್ಚುವರಿಯಾಗಿ ಎರಡು ಸ್ಥಾನಗಳನ್ನು ಗೆದ್ದಿದೆ. ಇದರ ಮಧ್ಯೆಯೂ, ರಾಜ್ಯಸಭೆಯಲ್ಲಿ ಪಕ್ಷದ ಸದಸ್ಯರ ಸಂಖ್ಯೆ 95ರಿಂದ 92ಕ್ಕೆ ಇಳಿಯಲಿದೆ.

ಕಾಂಗ್ರೆಸ್ ಕಳೆದ ಸಾಲಿನಲ್ಲಿ ಎಂಟು ಸ್ಥಾನಗಳಲ್ಲಿ ಗೆದ್ದಿತ್ತು. ಈ ಸಲ ಒಂಬತ್ತರಲ್ಲಿ ಗೆಲುವು ಸಾಧಿಸಿದೆ. ಆದರೆ, ಹರಿಯಾಣದ ಸೋಲು ಪಕ್ಷಕ್ಕೆ ಮುಜುಗರ ಉಂಟುಮಾಡಿದೆ.

ತೊಡೆ ತಟ್ಟಿದ ಗುಬ್ಬಿ ಶಾಸಕ ಶ್ರೀನಿವಾಸ್

'ಎಚ್‌ಡಿಕೆ ನನ್ನ ವಿರುದ್ಧ ಸ್ಪರ್ಧಿಸಿ ಗೆಲ್ಲಲಿ'

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿರುವ ಜೆಡಿಎಸ್ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಅವರು ತಮ್ಮ ಪಕ್ಷದ ಮುಖಂಡ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಅವನು ನನ್ನ ಎದುರು ನಿಂತು ಗೆದ್ದು ತೋರಿಸಲಿ. ಆಗ ನನ್ನ ಜೀವನಪೂರ್ತಿ ಅವರ ಮನೆಯಲ್ಲಿ ಕೂಲಿ ಮಾಡುತ್ತೇನೆ' ಎಂದು ಗುಡುಗಿದರು.

'ರಾಜ್ಯದ 224 ಕ್ಷೇತ್ರಗಳಿಗೆ ಅಭ್ಯರ್ಥಿ ಸಿಗದ ಪರಿಸ್ಥಿತಿ ಜೆಡಿಎಸ್‌ಗೆ ಇರುವಾಗ, 123 ಕ್ಷೇತ್ರಗಳನ್ನು ಗೆಲ್ಲುತ್ತೇವೆ ಎಂದು ಹಗಲುಕನಸು ಕಾಣುತ್ತಿದ್ದಾರೆ. ಈ ಬಾರಿ 13 ಸೀಟುಗಳನ್ನು ಗೆಲ್ಲಲಿ' ಎಂದು ಸವಾಲು ಎಸೆದರು.

'ಅವನು ಉತ್ತಮನಾ, ಅವನು ಯಾವುದರಲ್ಲಿ ಉತ್ತಮನೆಂದು ಹೇಳಲಿ. ಬೆಳಿಗ್ಗೆ ಒಂದು ಹೇಳುತ್ತಾನೆ, ಸಂಜೆ ಮತ್ತೊಂದು ಹೇಳುತ್ತಾನೆ. ಊಸರವಳ್ಳಿ ಇದ್ದಂತೆ. ಇನ್ನು ಮುಂದೆ ನೋಡಲಿ, ಎಲ್ಲವನ್ನೂ ಬಿಚ್ಚಿಡುತ್ತೇನೆ. ಯಾವುದರಲ್ಲಿ ಪರಿಶುದ್ಧವಾಗಿ ಇದ್ದಾನೆ. ಕಚ್ಚೆ ಸರಿ ಇಲ್ಲ, ಬಾಯಿ ಸರಿ ಇಲ್ಲ. ಇನ್ನೊಬ್ಬರ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ?' ಎಂದು ಪ್ರಶ್ನಿಸಿದರು.

'ಕುಮಾರಸ್ವಾಮಿಗೆ ಪಕ್ಷ ನಡೆಸುವ ಯೋಗ್ಯತೆ ಇಲ್ಲ. ಅವನು ನನ್ನ ಮನೆ ಮುಂದೆ ಪ್ರತಿಭಟನೆ ಮಾಡಲು ಕಳುಹಿಸಿದ್ದಾನೆ. ಇವನ ವಿರುದ್ಧ ಹೋರಾಟ ಮಾಡುವುದು ನನ್ನ ಮುಂದಿನ ನಡೆ. ನಾನು ಸೋತರೂ ಪರವಾಗಿಲ್ಲ. ಇವನ ಅಭ್ಯರ್ಥಿಯನ್ನು ಗೆಲ್ಲುವುದಕ್ಕೆ ಬಿಡುವುದಿಲ್ಲ' ಎಂದರು.

'ನಾನು ಮತ ಪತ್ರವನ್ನು ಸರಿಯಾಗಿಯೇ ತೋರಿಸಿದ್ದೇನೆ. ಹೆಬ್ಬೆಟ್ಟಿನಿಂದ ಮುಚ್ಚಿಟ್ಟುಕೊಂಡಿರಲಿಲ್ಲ. ಮೂರುನಾಲ್ಕು ನಿಮಿಷ ಹಿಡಿದುಕೊಂಡು ತೋರಿಸಿದೆ. ಅದಾದ ನಂತರ ಹೋಗಿ ಮತ ಪೆಟ್ಟಿಗೆಗೆ ಹಾಕಿದ್ದೇನೆ. ಅವನೇನು ಕತ್ತೆ ಕಾಯುತ್ತಿದ್ದನಾ? ಹೆಬ್ಬೆಟ್ಟು ತೆಗಿಅನ್ನಬೇಕಿತ್ತು' ಎಂದು ನಿಂದಿಸಿದರು.

'ಬಿಜೆಪಿ ಗೆಲ್ಲಲು ಸಿದ್ದರಾಮಯ್ಯ ಕಾರಣ'

ಶಿವಮೊಗ್ಗ: 'ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಯ ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಗೆಲ್ಲಲು ಹಾಗೂ ಕಾಂಗ್ರೆಸ್ ಪಕ್ಷದ ಮುಸ್ಲಿಂ ಅಭ್ಯರ್ಥಿ ಸೋಲಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೇ ನೇರ ಕಾರಣ' ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಆರೋಪಿಸಿದರು.

'ನಮ್ಮ ಪಕ್ಷದ ಮೂರನೇ ಅಭ್ಯರ್ಥಿ ಗೆಲ್ಲಲು ಕಾರಣರಾದ ಸಿದ್ದರಾಮಯ್ಯ ಅವರನ್ನೂ ಅಭಿನಂದಿಸುತ್ತೇನೆ' ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಟಾಂಗ್ ನೀಡಿದರು.

'ಸಿದ್ದರಾಮಯ್ಯ ಯಾರ ಪರ ಇರುತ್ತಾರೆ ಎಂಬುದೇ ಗೊತ್ತಾಗುವುದಿಲ್ಲ. ವೀರಶೈವ ಮತ್ತು ಲಿಂಗಾಯತ ಸಮುದಾಯದವರನ್ನು ಒಡೆದರು. ಗೋ ಹತ್ಯೆ ನಿಷೇಧ ವಿರೋಧಿಸಿದರು. ಅವರು ಯಾರಿಗೂ ಒಳ್ಳೆಯದನ್ನು ಮಾಡಿಲ್ಲ. ಕಾಂಗ್ರೆಸ್‌ನ ಮುಸ್ಲಿಂ ಅಭ್ಯರ್ಥಿ ಮನ್ಸೂರ್ ಅವರ ಸೋಲಿಗೆ ಕಾರಣರಾದ ಸಿದ್ದರಾಮಯ್ಯ ಮುಸ್ಲಿಂ ಸಮುದಾಯಕ್ಕೆ ದ್ರೋಹ ಬಗೆದಿರುವುದನ್ನು ಆ ಸಮುದಾಯ ಅರ್ಥ ಮಾಡಿಕೊಳ್ಳಬೇಕು' ಎಂದರು.

'ನೂರಾರು ಕೋಟಿ ರೂಪಾಯಿ ವಹಿವಾಟು'

ರಾಜ್ಯಸಭೆ ಚುನಾವಣೆಯಲ್ಲಿ ನೂರಾರು ಕೋಟಿ ವಹಿವಾಟು ನಡೆದಿದೆ. ಸಿದ್ದರಾಮಯ್ಯ ಅವರ ಜಾತ್ಯತೀತ ಸಿದ್ಧಾಂತದ ಬಣ್ಣ ಬಯಲಾಗಿದೆ. ಈಗ ಅವರು ರಾಜ್ಯದ ಜನರ ಮುಂದೆ ಬೆತ್ತಲಾಗಿದ್ದಾರೆ. ಅಡ್ಡ ಮತದಾನ ಮಾಡಿರುವ ಶ್ರೀನಿವಾಸ ಗೌಡ ಮತ್ತು ಎಸ್.ಆರ್. ಶ್ರೀನಿವಾಸ್ ವಿರುದ್ಧ ವಿಧಾನಸಭೆ ಅಧ್ಯಕ್ಷರಿಗೆ ದೂರು ನೀಡುತ್ತೇನೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದ್ದಾರೆ.

ತಿರುಮಲದಲ್ಲಿ ಚಪ್ಪಲಿ ಧರಿಸಿ ಓಡಾಡಿದ ನಯನತಾರಾ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇತ್ತೀಚೆಗೆ ವಿವಾಹವಾದ ಚಿತ್ರನಟಿ ನಯನತಾರಾ ಹಾಗೂ ನಟ ವಿಘ್ನೇಶ್ ಶಿವನ್ ಅವರು ತಿರುಮಲ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಚಪ್ಪಲಿ ಧರಿಸಿದ್ದರು ಎಂಬ ವಿಚಾರ ವಿವಾದಕ್ಕೆ ಕಾರಣವಾಗಿದೆ. ಈ ತಾರಾದಂಪತಿ ದೇವಸ್ಥಾನದ ಎದುರಿನಲ್ಲಿ ಫೋಟೊಶೂಟ್ ಮಾಡಿದ್ದಕ್ಕೆ ಭಕ್ತರಿಂದ ಟೀಕೆ ಎದುರಾಗಿದೆ.

ನಯನತಾರಾ ಅವರು ಚಪ್ಪಲಿ ಧರಿಸಿ ದೇವಸ್ಥಾನದ ಆವರಣದಲ್ಲಿ ಸುತ್ತಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪ್ರತಿ ವರ್ಷ ಬ್ರಹ್ಮೋತ್ಸವ ನಡೆಯುವ ಈ ಜಾಗದಲ್ಲಿ ಚಪ್ಪಲಿ ಧರಿಸಿ ಓಡಾಡಿದ್ದಾರೆ. ದೇವಸ್ಥಾನ ಪ್ರವೇಶಿಸುವ ನಾಲ್ಕು ಮಾರ್ಗಗಳಲ್ಲಿ ಚಪ್ಪಲಿ ಧರಿಸಬಾರದು ಎಂದು ಟಿಟಿಡಿ ಫಲಕ ಹಾಕಿದೆ.

ನಯನತಾರಾ

ಮಹಾಬಲಿಪುರಂ ಸಮೀಪದ ರೆಸಾರ್ಟ್‌ನಲ್ಲಿ ಗುರುವಾರ ಮದುವೆಯಾಗಿದ್ದ ಇವರು, ಮರುದಿನ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಬಂದಿದ್ದರು. ದಂಪತಿಯ ಜೊತೆ ಬಂದಿದ್ದ ಸಹಾಯಕರೂ ಚಪ್ಪಲಿ ಧರಿಸಿದ್ದರು ಎಂದು ಭಕ್ತರು ದೂರು ನೀಡಿದ್ದಾರೆ.

ಶಾಸಕರಿಗೆ ಗೋವಿಂದರಾಜು ತಲಾ ₹ 50 ಲಕ್ಷ ನೀಡಿದ್ದರು: ಶಾಸಕ ಶ್ರೀನಿವಾಸಗೌಡ

ಪ್ರಜಾವಾಣಿ ವಾರ್ತೆ

ಕೋಲಾರ: 'ಮೇಲ್ಮನೆ ಚುನಾವಣೆ ವೇಳೆ ಇಂಚರ ಗೋವಿಂದರಾಜು ಪರಿಷತ್ ಸದಸ್ಯರಾಗಲು ಜೆಡಿಎಸ್ ಪಕ್ಷದ ಶಾಸಕರಿಗೆ ತಲಾ ₹ 50 ಲಕ್ಷ ನೀಡಿದ್ದಾರೆ. ನನಗೂ ಕೊಡಲು ಬಂದರು. ಆದರೆ, ನಾನು ತೆಗೆದುಕೊಳ್ಳಲಿಲ್ಲ' ಎಂದು ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ ಬಹಿರಂಗಪಡಿಸಿದರು.

'ಶಿರಸಿಯಲ್ಲಿ ಅವರು ಕೆಎಸ್‌ಆರ್‌ಟಿಸಿಯಲ್ಲಿ ಕೆಲಸ ಮಾಡುತ್ತಿದ್ದಾಗ ವರ್ಗಾವಣೆ ಬಯಸಿದ್ದರು. ಅಂದಿನ ಸಾರಿಗೆ ಸಚಿವ ಪಿ.ಜಿ.ಆರ್.ಸಿಂಧ್ಯ ಅವರನ್ನು ಮೂರು ಬಾರಿ ಭೇಟಿಯಾಗಿ ವರ್ಗಾವಣೆ ಮಾಡಿಸಿದ್ದೆ. ಶಿರಸಿಯಲ್ಲಿದ್ದಾಗ ಟೀಕ್ ಮರಗಳ ವ್ಯಾಪಾರ ಮಾಡಿ ಆರ್ಥಿಕವಾಗಿ ಚೆನ್ನಾಗಿದ್ದರು' ಎಂದು ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಕೆ.ಶ್ರೀನಿವಾಸ ಗೌಡ

'ನನ್ನ ಮನೆ ಬಳಿ ಬಂದು ಪ್ರತಿಭಟನೆ ನಡೆಸಿದ ಗೋವಿಂದರಾಜು ಹಾಗೂ ಆ ಪಕ್ಷದ ಉಳಿದ ಮುಖಂಡರಿಗೆ ದೇವರು ಒಳ್ಳೆಯದು ಮಾಡಲಿ' ಎಂದರು.

'ಏಳು ತಿಂಗಳ ಹಿಂದೆಯೇ ನನ್ನನ್ನು ಜೆಡಿಎಸ್‌ನಿಂದ ಉಚ್ಚಾಟನೆ ಮಾಡಿರುವುದಾಗಿ ದೇವೇಗೌಡರ ಮೊಮ್ಮಗ, ಸಂಸದ ಪ್ರಜ್ವಲ್ ರೇವಣ್ಣ ಕೂಡ ಹೇಳಿದ್ದಾರೆ. ಹೀಗಾಗಿ, ನಾನು ಯಾವುದೇ ಪಕ್ಷಕ್ಕೆ ಹೋಗಬಹುದು. ರಾಜ್ಯಸಭೆ ಚುನಾವಣೆಯಲ್ಲಿ ನಾನು ಕಾಂಗ್ರೆಸ್‌ಗೆ ಮತ ನೀಡಿದ್ದು ನಿಜ. ಅದನ್ನು ಪ್ರಶ್ನಿಸಲು ಅವರು ಯಾರು' ಎಂದು ತಿರುಗೇಟು ನೀಡಿದರು.

'ಕುಮಾರಸ್ವಾಮಿ ಸರ್ವಾಧಿಕಾರಿ ಧೋರಣೆ ಉಳ್ಳವರು. ಅವರ ವರ್ತನೆ ಸರಿ ಇಲ್ಲ. ಮುಂದಿನ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಕೇಳಿದ್ದೇನೆ. ಟಿಕೆಟ್ ಕೊಡುವುದು ಆ ಪಕ್ಷದ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಸಿದ್ದರಾಮಯ್ಯ ಬಂದರೆ ಕ್ಷೇತ್ರ ಬಿಟ್ಟುಕೊಡುತ್ತೇನೆ' ಎಂದರು.

'ಕೋವಿಡ್ ಹೆಚ್ಚಳ: ಆತಂಕದ ಅಗತ್ಯವಿಲ್ಲ'

ನವದೆಹಲಿ (ಪಿಟಿಐ): ದೇಶದಲ್ಲಿ ಕೆಲ ದಿನಗಳಿಂದ ಹೆಚ್ಚಾಗುತ್ತಿರುವ ಕೋವಿಡ್ ಪ್ರಕರಣಗಳಿಂದ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಆರೋಗ್ಯ ತಜ್ಞರು ಶನಿವಾರ ಹೇಳಿದ್ದಾರೆ.

ದೇಶದ ಕೆಲ ಜಿಲ್ಲೆಗಳಲ್ಲಿ ಮಾತ್ರ ಪ್ರಕರಣಗಳು ಏರಿಕೆ ದಾಖಲಾಗುತ್ತಿವೆಯೇ ಹೊರತು, ಎಲ್ಲೂ ವೈರಸ್‌ನ ಹೊಸ ರೂಪಾಂತರಿ ಪತ್ತೆಯಾಗಿಲ್ಲ. ಕೋವಿಡ್ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸದಿರುವುದು ಹಾಗೂ 'ಬೂಸ್ಟರ್ ಡೋಸ್' ಪಡೆಯುವಲ್ಲಿ ಜನರು ಅಷ್ಟಾಗಿ ಉತ್ಸಾಹ ತೋರದಿರುವುದರಿಂದ ಸೋಂಕಿಗೆ ತುತ್ತಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಕೇರಳದ 7 ಮತ್ತು ಮಿಜೋರಾಂನಲ್ಲಿ 5 ಜಿಲ್ಲೆಗಳೂ ಸೇರಿದಂತೆ ದೇಶದ 17 ಜಿಲ್ಲೆಗಳಲ್ಲಿ ವಾರದ ಪಾಸಿಟಿವಿಟಿ ದರ ಶೇ 10ಕ್ಕಿಂತ ಹೆಚ್ಚು ವರದಿಯಾಗಿದೆ. ಕೇರಳದ 7, ಮಹಾರಾಷ್ಟ್ರ ಮತ್ತು ಮಿಜೋರಾಂ ತಲಾ 4 ಜಿಲ್ಲೆಗಳೂ ಸೇರಿದಂತೆ ದೇಶದ 24 ಜಿಲ್ಲೆಗಳಲ್ಲಿ ವಾರದ ಪಾಸಿಟಿವಿಟಿ ದರ ಶೇ 5ರಿಂದ 10ರಷ್ಟಿದೆ ಎಂದು ಮೂಲಗಳು ತಿಳಿಸಿವೆ.

'ದೇಶದಲ್ಲಿ ವೈರಸ್‌ನ ಹೊಸ ರೂಪಾಂತರಿ ಪತ್ತೆಯಾಗಿಲ್ಲ. ಪ್ರಸ್ತುತ ದೇಶದಲ್ಲಿ ಬಿಎ.2 ಜೊತೆಗೆ ಬಿಎ.4, ಬಿಎ 5 ತಳಿಯಿದ್ದು, ಇವು ಓಮೈಕ್ರಾನ್ ಉಪತಳಿಗೆ ಹೋಲಿಸಿದರೆ ಸ್ವಲ್ಪ ಹೆಚ್ಚಿನ ಪ್ರಸರಣ ಹೊಂದಿವೆ' ಎಂದು ಕೋವಿಡ್– 19ರ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ. ಎನ್.ಕೆ.ಅರೋರಾ ತಿಳಿಸಿದ್ದಾರೆ. 'ಆಸ್ಪತ್ರೆಗೆ ದಾಖಲಾಗುತ್ತಿರುವವರ ಮತ್ತು ಮೃತಪಡುತ್ತಿರುವವರ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ. ಸೋಂಕಿನ ಹೆಚ್ಚಳವು ಕೆಲ ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾಗಿದೆ' ಎಂದು ದೆಹಲಿಯ ಏಮ್ಸ್‌ನ ನಿರ್ದೇಶಕ ಡಾ.ರಂದೀಪ್‌ಗುಲೇರಿಯಾ ತಿಳಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆ: 15ರಂದು ಸಭೆ ಕರೆದ ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ರಾಷ್ಟ್ರಪತಿ ಚುನಾವಣೆಗೆ ಜಂಟಿ ಕಾರ್ಯತಂತ್ರ ರೂಪಿಸಲು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಇದೇ 15ರಂದು ನವದೆಹಲಿಯಲ್ಲಿ ಪ್ರತಿಪಕ್ಷಗಳ ಸಭೆ ಕರೆದಿದ್ದಾರೆ. ಸಭೆಗೆ ಬರುವಂತೆ ಎಲ್ಲ ಪ್ರತಿಪಕ್ಷಗಳ ನಾಯಕರಿಗೆ ಅವರು ಶನಿವಾರ ಪತ್ರ ಬರೆದಿದ್ದಾರೆ.

'ಎಲ್ಲ ಪ್ರಗತಿಪರ ವಿರೋಧ ಪಕ್ಷಗಳಿಗೆ ಬ್ಯಾನರ್ಜಿ ಅವರು ಪತ್ರ ಬರೆದಿದ್ದು, ಸಭೆಯಲ್ಲಿ ಭಾಗವಹಿಸುವಂತೆ ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ಮತ್ತು ನಾಯಕರನ್ನು ಬ್ಯಾನರ್ಜಿ ಸಂಪರ್ಕಿಸಿ ಮಾತನಾಡಿದ್ದಾರೆ' ಎಂದು ತೃಣಮೂಲ ಕಾಂಗ್ರೆಸ್ ಹೇಳಿದೆ.

ಧರ್ಮ–ಚಾರ್ಲಿಯ ಭಾವನಾತ್ಮಕ ಪಯಣ

ನಾವು ನೋಡಿದ ಸಿನಿಮಾ

777 ಚಾರ್ಲಿ (ಕನ್ನಡ)

- ನಿರ್ಮಾಪಕ: ರಕ್ಷಿತ್ ಶೆಟ್ಟಿ, ಜಿ.ಎಸ್.ಗುಪ್ತಾ
- ನಿರ್ದೇಶನ: ಕಿರಣ್‌ರಾಜ್ ಕೆ.
- ತಾರಾಗಣ: ರಕ್ಷಿತ್ ಶೆಟ್ಟಿ, ಸಂಗೀತಾ ಶೃಂಗೇರಿ, ರಾಜ್ ಬಿ.ಶೆಟ್ಟಿ, ಬಾಬಿ ಸಿಂಹ

ಮಹಾಭಾರತದ ಕಥೆ ನೆನಪಿದೆಯೇ? ಸ್ವರ್ಗಕ್ಕೆ ನಾಯಿಗೆ ಪ್ರವೇಶವನ್ನು ಇಂದ್ರ ನಿರಾಕರಿಸಿದಾಗ 'ನಾಯಿಗೆ ವಾಸದ ಅವಕಾಶವಿಲ್ಲದ ನಿನ್ನ ಸ್ವರ್ಗ ನನಗೂ ಬೇಡ' ಎಂದು ತಿರಸ್ಕರಿಸಿದಾತ ಧರ್ಮರಾಯ. ಈ ಚಿತ್ರದಲ್ಲಿರುವ ನಾಯಕನೂ 'ಕಲಿಯುಗದ ಧರ್ಮರಾಯ'. ಆತನ ಹೆಸರೂ 'ಧರ್ಮ' (ರಕ್ಷಿತ್ ಶೆಟ್ಟಿ). ಆದರೆ ವ್ಯತ್ಯಾಸವೊಂದೇ, ಈ ಕಲಿಯುಗದ 'ಧರ್ಮ'ನಿಗೆ 'ಭೂಲೋಕದ ಸ್ವರ್ಗ'ದ ದಾರಿ ತೋರಿಸಿದ್ದು 'ಚಾರ್ಲಿ' ಹೆಸರಿನ ನಾಯಿ.

ನಾಯಿ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ಕಟ್ಟಿಕೊಡುವ ಹಲವು ಸಿನಿಮಾಗಳು ಹಾಲಿವುಡ್‌ನಲ್ಲಿ ಬಂದಿವೆ. 'ಹಚಿ' ಇಂಥ ಸಿನಿಮಾಗಳಲ್ಲೊಂದು. ಮಾಲೀಕ ನಿಧನನಾದರೂ ಆತನ ಬರುವಿಕೆಗಾಗಿಯೇ ಹತ್ತು ವರ್ಷ ರೈಲು ನಿಲ್ದಾಣ ಪ್ರವೇಶದ್ವಾರದಲ್ಲಿ ಕಾದುಕೂರುವ 'ಹಚಿ' ಹಲವು ವಾಸ್ತವವನ್ನು ತೆರೆದಿಡುತ್ತದೆ. '777 ಚಾರ್ಲಿ' ಕಥೆಯೂ ಈ ಎಳೆಯನ್ನೇ ಹೊಂದಿದೆ. ಕಥೆ ಕೊಂಚ ಭಿನ್ನವಷ್ಟೆ.



ರಕ್ಷಿತ್ ಶೆಟ್ಟಿ

'ಮನೆ, ಫ್ಯಾಕ್ಟರಿ, ಗಲಾಟೆ, ಇಡ್ಲಿ, ಸಿಗರೇಟ್, ಬಿಯರ್'– ಬಾಲ್ಯದಲ್ಲೇ ಹೆತ್ತವರು, ತಂಗಿಯನ್ನು ಅಪಘಾತವೊಂದರಲ್ಲಿ ಕಳೆದುಕೊಂಡ 'ಧರ್ಮ'ನ ಜೀವನ ಸುತ್ತುತ್ತಿರುವುದು ಇವುಗಳ ನಡುವೆಯಷ್ಟೇ. ಈತನದು 'ಚೌಕಟ್ಟಿನ ಜೀವನ'. ಇವನ ಬಾಳಿಗೆ ಅಚಾನಕ್ ಆಗಿ ಪ್ರವೇಶಿಸುವವಳು ಚಾರ್ಲಿ. 'ದೊಡ್ಡ ದುರದೃಷ್ಟ'ವಾಗಿ ತನ್ನ ಬದುಕಿಗೆ ಪ್ರವೇಶಿಸಿದವಳನ್ನು ಧರ್ಮ ಮೊದಲು ಕಡೆಗಣಿಸುತ್ತಾನೆ. ಆದರೆ ಮುಗುಳುನಗೆಯನ್ನೂ ಬೀರದ ಧರ್ಮ ಮನಸ್ಸುಬಿಚ್ಚಿ ನಗುವಷ್ಟು, ಆನಂದಿಸುವಷ್ಟು ಕಾರಣ ನೀಡುತ್ತಾಳೆ ಚಾರ್ಲಿ. ಕಪ್ಪು–ಬಿಳುಪಿನಲ್ಲೇ ಜೀವನಕ್ಕೆ ಬಣ್ಣತುಂಬಿದ ನಟ ಚಾರ್ಲಿ ಚಾಪ್ಲಿನ್ ಧರ್ಮನ ಜೀವನಕ್ಕೂ ಊರುಗೋಲಾಗುತ್ತಾನೆ. ಇನ್ನೇನು ಮಧ್ಯಂತರ ಹತ್ತಿರವಾಗುತ್ತಿದಂತೆ ಕಥೆಗೊಂದು ತಿರುವು. ಈ ತಿರುವೇ ದ್ವಿತೀಯಾರ್ಧದಲ್ಲಿ ಧರ್ಮ, ಚಾರ್ಲಿಯ ಭಾವನಾತ್ಮಕ ಪಯಣಕ್ಕೆ ಕಾರಣವಾಗುತ್ತದೆ.

ಕಿರಣ್‌ರಾಜ್ ಅವರ ಚೊಚ್ಚಲ ಸಿನಿಮಾ ಇದು. ಪರಂವಃ ಪಿಕ್ಚರ್ಸ್ ಇದಕ್ಕೆ ಕೈಜೋಡಿಸಿರುವ ಕಾರಣ ಚೊಚ್ಚಲ ಚಿತ್ರದ ನ್ಯೂನತೆಗಳು ಹೆಚ್ಚು ಕಾಣಸಿಗುವುದಿಲ್ಲ. ಕಿರಣ್‌ರಾಜ್ ಪರಿಪೂರ್ಣವಾಗಿ ತೊಡಗಿಸಿಕೊಂಡು ಸಿನಿಮಾ ಕಟ್ಟಿರುವುದು ಪ್ರತಿದೃಶ್ಯದಲ್ಲೂ ಕಾಣಿಸುತ್ತದೆ. ನಟನೆಯಲ್ಲಿ ರಕ್ಷಿತ್ ಶೆಟ್ಟಿ ಮುಂದಡಿ ಇಟ್ಟಿದ್ದಾರೆ. ಧರ್ಮನ ಪರದಾಟ, ಸಂಕಟ ಕಟ್ಟಿಕೊಡುತ್ತಾ, ದ್ವಿತೀಯಾರ್ಧದಲ್ಲಿ ತಾವೇ 'ಧರ್ಮ' ಎನ್ನುವಷ್ಟರಮಟ್ಟಿಗೆ ಪಾತ್ರದೊಳಗಿಳಿದಿದ್ದಾರೆ. ಚಾರ್ಲಿಯನ್ನು ಅದ್ಭುತವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ. ಆಕೆಯ ತುಂಟಾಟ, ಚೆಲ್ಲಾಟಗಳೆಲ್ಲವೂ ಪ್ರೇಕ್ಷಕರಿಗೆ ಹಿಡಿಸುತ್ತದೆ. 'ತಿಂಡಿಪೋತಿ' ಚಾರ್ಲಿ ಬಗೆಬಗೆಯ ಆಹಾರ ನೀಡಿದರಷ್ಟೇ ಹೇಳಿದ ಹಾಗೆ ಕೇಳುತ್ತಿದ್ದಳು ಎನ್ನುವುದಕ್ಕೆ ಪೂರಕವಾಗಿ ಹಲವು ದೃಶ್ಯಗಳು ಇಲ್ಲಿ ಸೆರೆಯಾಗಿವೆ. ರಾಜ್ ಬಿ.ಶೆಟ್ಟಿ, ಪಶುವೈದ್ಯ ಅಶ್ವಿನ್ ಕುಮಾರ್ ಆಗಿ ಪ್ರತಿ ದೃಶ್ಯದಲ್ಲೂ ನಗಿಸುತ್ತಾರೆ. ಅತಿಥಿ ಪಾತ್ರದಲ್ಲಿ ಕೆಲ ಸಮಯ ತೆರೆಮೇಲೆ ಕಾಣಿಸಿಕೊಳ್ಳುವ ಬಾಬಿ ಸಿಂಹ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಭಾರ್ಗವಿ ನಾರಾಯಣ್, ಬೆಂಗಳೂರು ನಾಗೇಶ್, ಶಾರ್ವರಿ ನಟನೆ ಮನಸ್ಸು ತಟ್ಟುತ್ತದೆ. ಸಂಗೀತಾ ಶೃಂಗೇರಿ ಹಾಗೂ ಡ್ಯಾನಿಷ್ ಸೇಟ್ ಪಾತ್ರಗಳು ಕಥೆಯ ನೆಪಕ್ಕಷ್ಟೇ. ಮೊದಲಾರ್ಧದಲ್ಲಿ ಸಂಭಾಷಣೆ ಮೇಲುಗೈ ಸಾಧಿಸಿದೆ. ದ್ವಿತೀಯಾರ್ಧದ ಭಾವನಾತ್ಮಕ ಪಯಣ ಕೊಂಚ ಸುದೀರ್ಘವೆನಿಸಿದರೂ, ನೋಬಿನ್ ಪೌಲ್ ಸಂಗೀತ, ಅರವಿಂದ್ ಕಶ್ಯಪ್ ಅವರ ಕ್ಯಾಮೆರಾ ಕೈಚಳಕ ಹಿಡಿದಿಡುತ್ತದೆ. 'ದೊಡ್ಡಮ್ಮ'ನ ಆರ್ಭಟದಿಂದ ಹೊರಬರಲಿಚ್ಛಿಸುತ್ತಿರುವ ಪ್ರೇಕ್ಷಕರಿಗೆ ಇಂಥ ಸರಳ ಕಥೆಯ ಸಿನಿಮಾವೊಂದು ಅಗತ್ಯವಿತ್ತು.

ಅಭಿಲಾಷ್ ಪಿ.ಎಸ್.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್.ಜಿ.ಇ.ಎಫ್. ಬಸ್ ನಿಲ್ದಾಣದ ಹತ್ತಿರ, ಬೈಯ್ಯಪ್ಪನಹಳ್ಳಿ, ಬೆಂಗಳೂರು–560038.

ಸಂ.: ಬಿಎಂಆರ್‌ಸಿಎಲ್/ಓ&ಎಂ/ಆರ್‌ಎಸ್/01/2022–23 ದಿನಾಂಕ: 12.06.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್), ಇವರು ಕೆಳಕಂಡ ಅಂಶಗಳಿಗೆ ಅರ್ಹ ಸಂಸ್ಥೆಗಳಿಂದ ಅಲ್ಪಾವಧಿ ತೆರೆದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(1) ಬಿಎಂಆರ್‌ಸಿಎಲ್ ಡಿಪೋಗಳಲ್ಲಿ ರೋಲಿಂಗ್ ಸ್ಟಾಕ್ ನಿತ್ಯಕ್ರಮ ಭಾಗಗಳನ್ನು ಸ್ವಚ್ಛಗೊಳಿಸುವ ಸೇವೆಗಳನ್ನು ಒದಗಿಸುವುದು.** ಟೆಂಡರ್ ದಸ್ತಾವೇಜು ದರ: **ರೂ. 59,000/–.**

ಆನ್‌ಲೈನ್ ಮೂಲಕ ಟೆಂಡರ್ ಹೆಸರಿನಲ್ಲಿ ಪಡೆದ ಮರುಪಾವತಿಸಲಾಗದ ಟೆಂಡರ್ ಶುಲ್ಕವನ್ನು ಪಾವತಿಸಿದವರಿಗೆ **ದಿನಾಂಕ: 13.06.2022 ರಿಂದ** ಟೆಂಡರ್ ದಸ್ತಾವೇಜುಗಳನ್ನು ನೀಡಲಾಗುವುದು ಮತ್ತು **13.06.2022 ರಿಂದ 12.07.2022 ರವರೆಗೆ** ಶುಲ್ಕ ಪಾವತಿಸಿ ಟೆಂಡರ್ ದಸ್ತಾವೇಜುಗಳನ್ನು ಬಿಎಂಆರ್‌ಸಿಎಲ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸಿಂಗಲ್ ಪಾಯಿಂಟ್ ಮಾರಾಟಗಾರರ ನೋಂದಣಿ ಯೋಜನೆಯಡಿ ಎನ್‌ಎಸ್‌ಐಸಿಯಲ್ಲಿ ನೋಂದಯಿಸಲಾದ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಟೆಂಡರ್ ದಸ್ತಾವೇಜುಗಳ ಮಾರಾಟ ಅವಧಿಯಲ್ಲಿ ಟೆಂಡರ್ ದಸ್ತಾವೇಜುಗಳ ವೆಚ್ಚವನ್ನು ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ. ಅಂತಹ ಮಾರಾಟಗಾರರು ಸಿಂಧುತ್ವವಾದ ಎಂಎಸ್‌ಎಂಇ ಪ್ರಮಾಣಪತ್ರವನ್ನು ಇ–ಮೇಲ್ **sudhir@bmrc.co.in** ಗೆ ಕಳುಹಿಸುವ ಮೂಲಕ ಟೆಂಡರ್ ದಸ್ತಾವೇಜುಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಬಹುದು. ಮೊಹರಾದ ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ: 15.07.2022 ವರೆಗೆ** ಸ್ವೀಕರಿಸಲಾಗುವುದು. ಅದೇ ದಿನದಂದು ಟೆಂಡರ್ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಿದ ಸಮಯಕ್ಕೆ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: **www.bmrc.co.in/Tender**

ಸಹಿ/– ಪ್ರಧಾನ ವ್ಯವಸ್ಥಾಪಕರು (ಆರ್‌ಎಸ್)

ಹನಿ ಹನಿ ಜೇನ ಕಹಾನಿ!

ಸೀಮಾ ಹೆಗಡೆ

ಬೆಳ್ಳಂಬೆಳಗ್ಗೆ ಸದ್ದು ಗದ್ದಲವಿಲ್ಲದೆ ಬಣ್ಣದ ಅಂಗಿ ತೊಟ್ಟು ಅಕ್ಕರೆಯ ಅತಿಥಿಗಳ ಆಗಮನಕ್ಕೆ ಅರಳಿನಿಂತ ಹೂಗಳು; ಹೆಚ್ಚು ಕಾಯಿಸದೆ 'ಗುಂಯ್ಯ್'ಗುಡುತ್ತಾ ಮೌನ ಮುರಿದು ಹೂಗಳನ್ನು ಮುತ್ತುವ ದುಂಬಿಗಳು. ಮನುಷ್ಯ ಪ್ರಾಣಿಯು ಏಳುವ ಮುನ್ನವೇ ಕಾರ್ಯಪ್ರವೃತ್ತವಾಗಿ ಹೂವಿಂದ ಹೂವಿಗೆ ಹಾರುತ್ತಾ ಹಿಂಗಾಲಿನ ಪುಟ್ಟ ಪರಾಗ ಚೀಲದಲ್ಲಿ ಪುಷ್ಪದೂಳಿ ಸಂಗ್ರಹಿಸಿ ಮಕರಂದ ಹೀರುತ್ತಾ ಸಂಜೆಯವರೆಗೂ ಪುಷ್ಪಬೇಟೆ ನಡೆಸಿ ಮನೆಗೆ ವಾಪಸ್ ಆಗುವ ಇವುಗಳು ಕಷ್ಟಜೀವಿಗಳು! ಹೀಗೆ ಸಂಗ್ರಹಿಸಿ ತಂದ ಪರಾಗ, ಮಕರಂದವನ್ನು ಸಂಸ್ಕರಿಸಿ, ಗೂಡಿನ ಕೋಶಗಳಲ್ಲಿ ಇಳಿಸಿ, ಕೋಶದ್ವಾರವನ್ನು ಮುಚ್ಚುವ ನಿತ್ಯದ ಆ ಗಡಿಬಿಡಿ, ಯಾವ ಸಮರಸಿದ್ಧತೆಗೂ ಕಡಿಮೆಯಿಲ್ಲ ಬಿಡಿ. ರಾಜನ ಸೈನ್ಯದಲ್ಲಿ ಯುದ್ಧ ಮಾಡುವವರು, ಕೋಟೆ ಕಾಯುವವರು, ಆಹಾರ ಸರಬರಾಜಿಗೆ ನಿಂತವರು, ಬಿಡಾರ ಸ್ವಚ್ಛಗೊಳಿಸುವವರು ಇರುವಂತೆಯೇ ಈ ಜೇನುರಾಣಿಯ ಸೈನ್ಯದಲ್ಲಿ ಆಕೆ ಮತ್ತು ಗೂಡಿನ ಎಲ್ಲ ಮರಿಗಳ ಆರೈಕೆ ಮಾಡುವವರು, ಬಿಡಾರದ ಸ್ವಚ್ಛತೆಗೆ ಟೊಂಕಕಟ್ಟಿ ನಿಂತವರು, ಮಧುಪಾತ್ರೆಯ ಸುತ್ತ ಹಗಲು-ರಾತ್ರಿ ಪಹರೆ ಮಾಡುವವರ ಪಡೆಯೇ ಇದೆ. ಹಾಗೆಂದೇ ಜೇನು ನೊಣಗಳ ಜಗತ್ತೆಂದರೆ ಅದೊಂದು ವಿಸ್ಮಯ ಲೋಕ.

ರಾಜ್ಯದ ಜೇನು ಕೃಷಿಯ ಜಾಡು ಹಿಡಿದು ಹೊರಟರೆ ಅದು ನಮ್ಮನ್ನು ಕಣಿವೆಯಲ್ಲಿ ಅರಳಿನಿಂತ ಕುಸುಮದಿಂದ ಹಿಡಿದು ಗಗನಚುಂಬಿ ಮರಗಳ ತುತ್ತತುದಿಯಲ್ಲಿ ಕಟ್ಟಿದ ಗೂಡಿನವರೆಗೆ ರೊಯ್ಯನೆ ಸುತ್ತಾಡಿಸಿ ಸುಸ್ತು ಹೊಡಿಸುತ್ತದೆ. ಆಗ ಒಂದು 'ಹನಿ' ಮಧುವೇ ನಮಗೆ ಬೇಕೆನಿಸುತ್ತದೆ. ತಮ್ಮ ಹಿಂಗಾಲಿನ ಪುಟ್ಟ ಪರಾಗ ಚೀಲದಲ್ಲಿ ಪುಷ್ಪದೂಳಿ ಸಂಗ್ರಹಿಸಿ, ಮಕರಂದವನ್ನೂ ಹೀರಿ ಬರುವ ದುಂಬಿಗಳು ಗೂಡಿನ ಕೋಶಗಳಲ್ಲಿ ಜೇನು ಸಂಗ್ರಹಿಸಲು ಏನೆಲ್ಲಾ ಕಸರತ್ತು ನಡೆಸುತ್ತವೆ ಗೊತ್ತೆ? ಮಧುವನದ ಚೆಂದ ನೋಡುತ್ತಾ, ಮಧುವನ್ನೂ ಸವಿಯೋಣ ಬನ್ನಿ...

ಜೇನು ನೊಣಗಳ ಜಾಡು ಹಿಡಿದು

ಮೂರು ಕೋಟಿ ವರ್ಷಗಳಿಂದ ಜೀವಿಸುತ್ತಿರುವ, ಡೈನೋಸಾರ್‌ಗಳಿಗಿಂತ ಮೊದಲು ಅಸ್ತಿತ್ವ ಪಡೆದ ಈ ಪುಟ್ಟ ಜೀವಿಗಳು 25 ಲಕ್ಷ ವರ್ಷಗಳ ಹಿಂದೆ ಉಗಮಿಸಿದ ಮನುಷ್ಯನ ಕೃಷಿ ಚಟುವಟಿಕೆಗಳ ಆಧಾರವಾಗಿ ಅಲ್ಲದೇ ವನ ಸಂಪತ್ತಿನ ಕೇಂದ್ರ ಬಿಂದುವಾಗಿ ನಿರ್ವಹಿಸುತ್ತಿರುವ ಪಾತ್ರ ಅತ್ಯಂತ ಮಹತ್ವದ್ದು. ಜೇನ್ ನೊಣಗಳ ಪರಿಶ್ರಮದ ಬಗ್ಗೆ, ಪರಿಶ್ರಮದ ಫಲವಾದ ಜೇನುತುಪ್ಪದ ಬಗ್ಗೆ ಅನಾದಿ ಕಾಲದಿಂದ ಇರುವ ಪ್ರಶಂಸೆ ಹೇಳತೀರದ್ದು. ಮಧ್ಯ ಶಿಲಾಯುಗದ ಕಾಲದಲ್ಲಿಯೇ ಜೇನು ಸಂಗ್ರಹಣೆ ಮಾಡುತ್ತಿದ್ದ ಪುರಾವೆಯಾಗಿ ಭಾರತ ಮಧ್ಯ ಭೂಭಾಗದ 'ಗೊಂಡ್ವಾನಾ' ಪ್ರದೇಶದಲ್ಲಿ ಕಲ್ಲಿನ ಮೇಲೆ ಬಿಡಿಸಿದ ಜೇನು ಹಟ್ಟಿ ಸುತ್ತುವರೆದ 'ಮಧುಮಕ್ಕಿ'ಗಳ ಚಿತ್ರಗಳು ಲಭ್ಯವಾಗಿವೆ.

ಜೇನೆಂದರೆ ಜನವಸತಿ ಇರದ ಘಟ್ಟದ ಕಗ್ಗಾಡು, ಮರದ ಪೊಟರೆ, ಮುಗಿಲೆತ್ತರದ ಗೋಪುರಗಳು-ಬೆಟ್ಟಗಳು, ಬೆಟ್ಟದ ಸಂಧಿನ ಕತ್ತಲ ಗವಿಗಳಲ್ಲಿ ಕಾಣುವ ಸಾಹಸಮಯ ಬದುಕಿನ ಸ್ವರೂಪ ಎಂಬುದು ಮಲೆನಾಡಿನ ಹಳಬರ ಅನುಭವ. ಸಾಧಾರಣವಾಗಿ ಎತ್ತರದ ಕೈಗೆಟುಕದ ಜಾಗದಲ್ಲಿ ಹಗಲು ಕಂಡ ಬೃಹತ್ ಗೂಡುಗಳನ್ನು ರಾತ್ರಿ ಅರಸಿ 'ಸೌಡಿ' ಹಿಡಿದು ಹೊಗೆ ಎಬ್ಬಿಸುತ್ತಾ ಜೇನು ಕೊಯ್ಲಿಗೆ ಹೋದ ಇಲ್ಲಿನ ಹಿರಿಯರ ಅನುಭವದ ಕಥೆಗಳು ರೋಚಕ. ಕೆಲವೊಮ್ಮೆ ಸಾಹಸ ಫಲಿಸಿ ಡಬ್ಬಿಗಟ್ಟಲೆ ಜೇನಿನ ಶೇಖರಣೆಯಾದರೆ ಕೆಲವೊಮ್ಮೆ ಮರದ ಮೇಲಿಂದ ಬಿದ್ದು, ಕೈ ಕಾಲು ಸೊಂಟ ಮುರಿದು, ರೊಚ್ಚಿಗೆದ್ದ ಜೇನಿಂದ ಕಚ್ಚಿಸಿಕೊಳ್ಳುತ್ತಾ ಎದ್ದು ಬಿದ್ದು ಓಡಿದ ಫಜೀತಿಯ ಕಥೆಗಳು ಕೇಳಲು ಕುತೂಹಲಕಾರಿ. ಇವೆಲ್ಲಾ ಪಟಪಟನೆ ಮರ ಗುಡ್ಡ-ಬೆಟ್ಟ-ಮರ ಹತ್ತಿ ಇಳಿಯುವ ಕಾಡಿನ ಮಕ್ಕಳಾದ ಸಿದ್ದಿ, ಹಾಲಕ್ಕಿ, ಕುಣಬಿ, ಕುಮ್ರಿ ಮರಾಠೆಗಳ ಹೆಜ್ಜೇನಿನ ಕೊಯ್ಲಿನ ಕಥೆಯಾದರೆ ನಾಡಿನ ಮೇಲಿನವರದು ಮತ್ತೊಂದು. ಲಡ್ಡಾದ ಮರದ ಬೊಡ್ಡೆ, ಮನೆ ಹಿಂದಿನ ಕಟ್ಟಿಗೆ ರಾಶಿ, ಮುರುಕು ಗೋಡೆಯ ಕಂಡಿ, ಬಳಸದೆ ಬಿಟ್ಟ ಚೂಳಿ-ಬುಟ್ಟಿಗಳ ಚಿಕ್ಕ ಜಾಗದಲ್ಲಿ ಅಂಗೈ ಅಗಲದಷ್ಟೇ ಗೂಡು ಕಟ್ಟಿದ ಮಿಸರಿ ಜೇನಿನ ತುಪ್ಪವೇ ಇವರಿಗೆ ಹೆಚ್ಚು ಪ್ರೀತಿ.

ಜೇನು ಕುರುಬರು, ಮಂದಣ್ಣ ಹಾಗೂ ಚೆನ್ನಭೈರಾದೇವಿ!

ಕಾಡಿನಿಂದ ಜೇನನ್ನು ಸಂಗ್ರಹಿಸಿಕೊಂಡು ಬರುವ ಜೇನು ಕುರುಬರ ಕುರಿತು ಬಹುತೇಕರಿಗೆ ಗೊತ್ತಿದೆ. ಕಾಡಿನ ಹಾಡಿಗಳಲ್ಲಿ ವಾಸಿಸುವ ಈ ಸಮುದಾಯದವರು ಸಂಗ್ರಹಿಸಿ ತರುತ್ತಿದ್ದ ಜೇನಿಗೆ ಭಾರಿ ಬೇಡಿಕೆ ಇತ್ತು. ಮಲೆ ಮಾದೇಶ್ವರನ ಭಕ್ತರಾದ ಜೇನುಕುರುಬರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಾಡುಗಳಲ್ಲಿ ಈಗಲೂ ವಾಸವಾಗಿದ್ದಾರೆ ಮತ್ತು ಜೇನು ಸಂಗ್ರಹ ಕಾರ್ಯ ಮುಂದುವರಿಸಿದ್ದಾರೆ. ಕಾಳುಮೆಣಸಿನ ರಾಣಿ ಎಂದೇ ಹೆಸರಾದ ಚೆನ್ನಭೈರಾದೇವಿ ಕಾಲದಲ್ಲಿ ಕಾಳುಮೆಣಸಿನ ಜತೆಗೆ ಜೇನು ಸಹ ವಿದೇಶಗಳಿಗೆ ರಫ್ತಾಗುತ್ತಿತ್ತು ಎಂದು ಹೇಳಲಾಗುತ್ತಿದೆ. ಲಂಡನ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲೂ ಕನ್ನಡ ನಾಡಿನ ಜೇನಿನ ಕುರಿತು ಮಾಹಿತಿ ಇದೆ.

ಇನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕರ್ವಾಲೊ ಅವರ ಕಾದಂಬರಿಯನ್ನು ಓದಿದವರಿಗೆ ಜೇನಿನ ಪ್ರಸಂಗದ ನೆನಪು ಇದ್ದೇ ಇರುತ್ತದೆ. ಜೇನು ಖರೀದಿಸಲು ಹೋದ ತೇಜಸ್ವಿಯವರಿಗೆ 'ಬಾಟ್ಲಿ ಆದರೆ ಒಂದು ಬಾಟ್ಲಿ ತುಪ್ಪಕ್ಕೆ ಹತ್ತು ರೂಪಾಯಿ ಆಗುತ್ತೆ ಸರ್. ಮಡಕೆ ತುಪ್ಪಾ ಆದರೆ ಹೆಚ್ಚೂ ಕಡಿಮೆ ಹಾಕಿ ಕೊಡೋಣ ಸಾರ್. ಬಾಟ್ಲೀದಾದರೆ ಮೆಶೀನಿನಲ್ಲಿ ತೆಗೆದಿರ್ತೀವೆ, ಮಡಕೇದು ಕೈಯಲ್ಲಿ ಹಿಂಡಿ ತೆಗೆದಿರ್ತೀವೆ' ಎಂದು ಮಂದಣ್ಣ ಉಪನ್ಯಾಸ ಕೊಡುವುದು, ಟಿನ್ನುಗಳ ದೊಡ್ಡ ರಾಶಿಯ ತುದಿವರೆಗೆ ಹೋದ ಮಂದಣ್ಣ ಯಾವುದೋ ಒಂದು ಟಿನ್ನಿನ ಜುಟ್ಟು ಹಿಡಿದು ಎಳೆದೊಡನೆ ಉಳಿದವು ಕುಸಿದು, ಮಂದಣ್ಣ ಜಾರಿ ಬೀಳುವುದು... ಇತ್ಯಾದಿ ಪ್ರಸಂಗಗಳು ತುಟಿಯಂಚಿನಲ್ಲಿ ನಗೆ ಅರಳಿಸುತ್ತವೆ.

ಜೀಪಿನಲ್ಲಿ ಜೇನಿನ ಟಿನ್ ಇಟ್ಟುಕೊಂಡು ಹೊರಟಾಗ ಹಿಂಬಾಲಿಸುವ ಜೇನ್ನೊಣಗಳಿಂದ ಅನುಭವಿಸುವ ಫಜೀತಿಯನ್ನೂ ತೇಜಸ್ವಿಯವರು ಸೊಗಸಾಗಿ ವಿವರಿಸಿದ್ದಾರೆ. ಜೀಪಿನಲ್ಲಿ ಪೆಟ್ರೋಲ್ ಖಾಲಿಯಾಗಿ ಅರ್ಧ ಹಾದಿಯಲ್ಲಿ ನಿಂತಾಗ, ದಾರಿಯಲ್ಲಿ ಸಿಕ್ಕ ಹುಡುಗರಲ್ಲಿ ಒಬ್ಬ 'ಬನ್ನಿ ಸಾರ್ ಅವೇನ್ಮಾಡ್ತವೆ. ಇದಕ್ಕೆಲ್ಲ ಹೆದರಿದರೆ ಆಯ್ತು' ಎಂದು ಉಡಾಫೆಯಿಂದ ಒಂದು ನೊಣವನ್ನು ಸಾಯಿಸಿದಾಗ, ಉಳಿದ ನೊಣಗಳು ಅವನ ಮೂತಿಗೆ ಕಚ್ಚಿದ ಪ್ರಸಂಗವನ್ನೂ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಜೇನು ಮಾನವನ ಮೊದಲ ಶತ್ರು. ಹಾವಿನಂತೆಯೇ ಮನುಷ್ಯನನ್ನು ಕಚ್ಚಿ ಕೊಲ್ಲಲು ಯತ್ನಿಸುವ ಕೀಟ ಎಂದೇ ತೇಜಸ್ವಿ ಭಾವಿಸಿದ್ದರಂತೆ. ಅದಕ್ಕೆ ಕಾರಣ ಜೇನು ಅವರ ತಂದೆ ಕುವೆಂಪು ಅವರಿಗೆ ಕಡಿದು ಮುಖ ಊದಿ ಕೊನೆಗೆ ವೈದ್ಯರಿಂದ ಚಿಕಿತ್ಸೆ ಪಡೆಯಬೇಕಾದ ಪ್ರಸಂಗದಿಂದ. ಮುಂದೆ ತೇಜಸ್ವಿ ಅವರಿಗೆ ಜೇನಿನ ಸಖ್ಯ ಬೆಳೆದದ್ದು ಅವರ ಬರಹದಲ್ಲಿ ಮತ್ತೆ ಮತ್ತೆ ಇಣುಕಿದೆ.

ತುಡುವೆ ಶೇಖರಿಸಿದ 'ಕಾಸರಕ'ನ ಕಹಿ ತುಪ್ಪ, 'ಮತ್ತಿ'ಯ ಹುಳಿ ತುಪ್ಪ, 'ನೇರಳೆ'ಯ ಔಷಧಿ ತುಪ್ಪ ಯಾವುದೇ ಇರಲಿ, ಗಾಜು, ಪಿಂಗಾಣಿ, ಟಿನ್ ಬಾಕ್ಸ್‌ಗಳಲ್ಲಿ ಸಂಗ್ರಹಿಸಿಟ್ಟು ಮಾಡಿದ ಪೇಟೆ ಮೇಲಿನ ಮಾರಾಟದ ಲಾಭದಲ್ಲಿ ದೋಖಾ ಇರಲಿಲ್ಲ. ಆಗಿನ ಕಾಲದಲ್ಲಿ ಕಾಡು ಜೇನಿನ ಸವಿಯ ದಿಗ್ಬಂಧನ ಹಾಕಿ ಇಂಗ್ಲಿಷರಡಿ ಕೆಲಸ ಗಿಟ್ಟಿಸಿಕೊಂಡವರಿಗಂತೂ ಲೆಕ್ಕವಿಲ್ಲ.

ಸಮಯ ಕಳೆದಂತೆ ಬಿದಿರಿನ ಅಂಡೆ, ಹೂಜಿ, ಮಡಕೆಗಳಲ್ಲಿ ಮಜಂಟಿಯ ಪಾಲನೆಯಿಂದ ಪ್ರಾರಂಭವಾಗಿ, ನಿಧಾನಕ್ಕೆ 19ನೇ ಶತಮಾನದ ಕೊನೆಯಲ್ಲಿ ಕಿರು ಅರಣ್ಯ ಉತ್ಪನ್ನವಾಗಿ, ಜೇನು ಪೆಟ್ಟಿಗೆಗಳ ಪರಿಚಯದಿಂದಾಗಿ, ಸರ್ಕಾರದ ಸವಲತ್ತುಗಳಿಂದಾಗಿ ಜೇನು ಸಂಗ್ರಹ 'ಸಾಕಣೆಯ' ಹಾದಿ ಹಿಡಿದು ಇಂದು ವಾಣಿಜ್ಯಕವಾಗಿ ಬೆಳೆದು ನಿಂತಿದೆ.

ಒಂದೇ ಏಟಿಗೆ ಜೇನ ಹುಳುಗಳನ್ನು ಬೆದರಿಸಿ ಓಡಿಸಿ, ಜೇನು ರಟ್ಟನ್ನು ಬೇಕಾಬಿಟ್ಟಿ ಮುರಿದು ತುಪ್ಪ ಸಂಗ್ರಹಿಸುವ ಸಾಂಪ್ರದಾಯಿಕ ಅವೈಜ್ಞಾನಿಕ ವಿನಾಶಕಾರಿ ಪದ್ಧತಿ ಈಗಿಲ್ಲ. ಮನೆಯಲ್ಲಿ ಒಂದೋ ಎರಡೋ ಜೇನು ಪೆಟ್ಟಿಗೆಯಿಟ್ಟು ಸುಸ್ಥಿರವಾಗಿ ನಡೆಸುತ್ತಿದ್ದ ಜೇನು ಕೃಷಿಯೂ ಈಗ ಹಳತಾಯಿತು. ಕ್ರಮಬದ್ಧವಾಗಿ ವೈಜ್ಞಾನಿಕವಾಗಿ 'ನ್ಯೂಟನ್' ಮಾದರಿಯಿಂದ ಪ್ರಾರಂಭವಾದ ಪೆಟ್ಟಿಗೆಗಳ ಸ್ವರೂಪ ಇಂದು ಜೇನುತುಪ್ಪ ತಾನಾಗಿಯೇ ಬಸಿಯುವ 'ಫ್ಲೋ ಹೈವ್'ಗಳಾಗಿ ಅಭಿವೃದ್ಧಿ ಹೊಂದಿದೆ. ರಟ್ಟನ್ನು ಹಿಂಡಿ ತುಪ್ಪ ತೆಗೆಯುತ್ತಿದ್ದ ಅಭ್ಯಾಸವನ್ನು ಯಂತ್ರಗಳು ಬದಲಿಸಿವೆ. 'ಎರಿ ಕಟ್ಟುವ' ಸಮಯವನ್ನು ಉಳಿಸಲು ಅರ್ಧ ಕಟ್ಟಿದ ಕೃತಕ ರಟ್ಟುಗಳು, ಮರುಬಳಕೆಗೆ ಸಾಧ್ಯವಾದ ಮೇಣದ ಹಾಳೆಗಳು ಲಭ್ಯವಿವೆ. ಆಧುನಿಕ ಜಗತ್ತು ಬರಿಯ ಜೇನುತುಪ್ಪವಲ್ಲದೆ ಮೌಲ್ಯವರ್ಧಿತ ಉಪ ಉತ್ಪನ್ನಗಳಿಗೂ ವೇದಿಕೆಯಾಗಿದೆ. ಹೂವಿನ ಅಭಾವವಿದ್ದಾಗ 'ಸಕ್ಕರೆ ದ್ರಾವಣದ ಫೀಡಿಂಗ್' ಪ್ರತಿ ತಿಂಗಳ ಕೊಯ್ಲಿಗೆ ಎಡೆ ಮಾಡಿಕೊಟ್ಟಿದೆ. ಮುಖಗವಸು, ಕೈಗವಸು, ಕವಚಗಳ ರಕ್ಷಣೆಯೊಂದಿಗೆ ಯಾರು ಬೇಕಾದರೂ ಜೇನಿನ ತುಪ್ಪದ ಸಂಗ್ರಹ ಮಾಡುವ ಸರಳತೆ ಈ ಜಮಾನಾದ ಕೊಡುಗೆ. ಕೋವಿಡ್ ಸಮಯದ 'ವರ್ಕ್ ಫ್ರಮ್ ಹೋಮ್' ಪರ್ವ ಮತ್ತಷ್ಟು ಹವ್ಯಾಸಿ ಜೇನು ಸಾಕಣೆದಾರರನ್ನು ಹುಟ್ಟಿಸಿದೆ.

'ಮೀಠೀ' ಕ್ರಾಂತಿ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಸಿಹಿ ಕ್ರಾಂತಿ'ಗೆ ಚಾಲನೆ ದೊರಕಿದ ಮೇಲೆ ಭಾರತ ಜಾಗತಿಕವಾಗಿ ಜೇನು ಉತ್ಪಾದಿಸುವ 'ಟಾಪ್ ಟೆನ್' ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ರಾಷ್ಟ್ರೀಯ ಜೇನು ಮಂಡಳಿಯ ವರದಿ ಪ್ರಕಾರ 2020-21 ರಲ್ಲಿ ಭಾರತ ಒಂದು ಲಕ್ಷದ ಇಪ್ಪತ್ತೈದು ಸಾವಿರ ಮೆಟ್ರಿಕ್ ಟನ್ ಜೇನುತುಪ್ಪದ ಉತ್ಪಾದನೆ ಮಾಡಿದೆ. ಅಮೆರಿಕ, ಸೌದಿ, ಕೆನಡಾ, ಬೆಲ್ಜಿಯಂ ಸೇರಿದಂತೆ ಇತರ ರಾಷ್ಟ್ರಗಳಿಗೆ ಏಳುನೂರು ಕೋಟಿ ರೂಪಾಯಿ ಮೌಲ್ಯದ, ಅರವತ್ತು ಸಾವಿರ ಟನ್ ಜೇನುತುಪ್ಪವನ್ನು ರಫ್ತು ಮಾಡಿದೆ. 'ಬೀ ಕೀಪಿಂಗ್ ಸೊಸೈಟಿ'ಗಳ ಸ್ಥಾಪನೆ, ಖಾದಿ ಗ್ರಾಮೋದ್ಯೋಗ ಮಂಡಳಿ, ತೋಟಗಾರಿಕಾ ಇಲಾಖೆಯ ತಾಂತ್ರಿಕ ಹಾಗೂ ಆರ್ಥಿಕ ಸಹಾಯ, ಕಿರು ಆಹಾರ ಸಂಸ್ಕರಣೆಗೆ ಸಹಾಯಧನ, ಕೃಷಿ ವಿಜ್ಞಾನ ಕೇಂದ್ರಗಳ ಕೌಶಲ್ಯಾಭಿವೃದ್ಧಿ ತರಬೇತಿ, 'ಹನಿ ಮಿಷನ್', ಮುಂತಾದ ಸರ್ಕಾರದ ಯೋಜನೆಗಳಿಂದ ಜೇನು ಸಾಕಣೆಗೆ ಮತ್ತಷ್ಟು ಒತ್ತು ಸಿಕ್ಕಿದೆ.

'ನ್ಯಾಷನಲ್ ಬೀ ಬೋರ್ಡ್'ನಲ್ಲಿ ದಾಖಲಾದ ಜೇನು ಕಾಲೊನಿಗಳ ಆಧಾರದ ಮೇಲೆ ಅಂದಾಜು 100 ಟನ್ ತುಪ್ಪವನ್ನು ಕರ್ನಾಟಕ 2019ರಲ್ಲಿ ಉತ್ಪಾದಿಸಿತ್ತು. ಕರ್ನಾಟಕದ ಮಲೆನಾಡ ಭಾಗವಾದ ಉತ್ತರ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗಮನಾರ್ಹವಾದ ಮಟ್ಟದಲ್ಲಿ ಜೇನು ಸಾಕಣೆ ಚಾಲ್ತಿಯಲ್ಲಿದೆ. ಇಲ್ಲಿನ ತೋಟಗಾರರು ಜೇನುಹುಳುಗಳ ಪರಾಗಸ್ಪರ್ಶ ಕ್ರಿಯೆಯ ಸದುಪಯೋಗದಿಂದ ತೆಂಗು-ಕಂಗುಗಳಲ್ಲಿ ಹೆಚ್ಚು ಇಳುವರಿಯನ್ನು ದಾಖಲಿಸಿದ್ದಾರೆ. ವರ್ಷವಿಡಿ ಹೂ ಬಿಡುವ ಕಾಡು ಮರಗಳು ಮತ್ತು ಸೂಕ್ತ ವಾತಾವರಣ ಇನ್ನಷ್ಟು ಸುಧಾರಣೆಗೆ ಈ ಭಾಗದಲ್ಲಿ ಅವಕಾಶವನ್ನು ಕಲ್ಪಿಸಿದೆ. ಬಯಲು ಸೀಮೆಯಲ್ಲಿಯೂ ಸೂರ್ಯಕಾಂತಿ, ಸಾಸಿವೆ, ವಿವಿಧ ತರಕಾರಿ ಬೆಳೆಗಳ ಹೆಚ್ಚಿನ ಇಳುವರಿಯ ಲಾಭಕ್ಕಾಗಿ ಜೇನುಪೆಟ್ಟಿಗೆ ಇಡುವ ಅಭ್ಯಾಸವನ್ನು ರೈತರು ರೂಢಿಸಿಕೊಂಡಿದ್ದಾರೆ.

ಜೇನೊಂದು ರೂಪ ನೂರು

'ಫ್ರಕ್ಟೋಸ್' ಎಂಬ ಸಕ್ಕರೆ ಹೇರಳವಾಗಿರುವ, ಹಲವು ರೀತಿಯ ಪ್ರೋಟಿನ್, ವಿಟಮಿನ್, ಮಿನರಲ್‌ನಂತಹ 180ಕ್ಕಿಂತ ಅಧಿಕ ಪೋಷಕಾಂಶಗಳಿಂದ ಕೂಡಿರುವ 'ಹನಿ' ಆಹಾರವಾಗಿ, ಔಷಧವಾಗಿ ಶತಮಾನಗಳಿಂದ ಬಳಕೆಯಲ್ಲಿದೆ. ಈ ಮೊದಲು ಮಾರುಕಟ್ಟೆಯಲ್ಲಿ ಬರೀ ಜೇನು ತುಪ್ಪ ಲಭ್ಯವಿತ್ತು. ಈಗ ವಿವಿಧ ಸುವಾಸನೆ, ರುಚಿಯ 'ಫ್ಲೇವರ್ಡ್ ಹನಿ'ಯ ಉತ್ಪನ್ನಗಳು ದೊರಕುತ್ತವೆ.

9ನೇ ಪುಟಕ್ಕೆ...

'ಮರುಸೃಷ್ಟಿ'ಯ ಗ್ರಾಮದಲ್ಲಿ...

ಬೆಂಗಳೂರಿನ ದಂಡು ಪ್ರದೇಶದಲ್ಲಿದ್ದ ಬ್ರಿಟಿಷ್ ಬಂಗಲೆಯ ಪ್ರತಿರೂಪ

ಜೆ.ಸಿ.ಜಾಧವ

ಇದು ಮಣಿಪಾಲದಲ್ಲಿರುವ ಹಸ್ತಶಿಲ್ಪ ಸಂಸ್ಕೃತಿ ಗ್ರಾಮ (ಹಸ್ತಶಿಲ್ಪ ಹೆರಿಟೇಜ್ ವಿಲೇಜ್). ಇಂತಹ ಗ್ರಾಮವನ್ನು ನೀವು ಬೇರೆಲ್ಲಿಯೂ ನೋಡಲು ಸಾಧ್ಯವಿಲ್ಲ. ಒಳಹೊಕ್ಕರೆ ಸಾಕು, ಕಾಲ ಸರ್ರನೆ ಶತಮಾನಗಳಷ್ಟು ಹಿಂದಕ್ಕೆ ಸರಿಯುತ್ತದೆ. ಚರಿತ್ರೆಯ ಪುಟಗಳು ಇದ್ದಕ್ಕಿದ್ದಂತೆ ಜನ್ಮತಾಳಿ ಕಣ್ಮುಂದೆ ನಿಲ್ಲುತ್ತವೆ. ಆಗಿನ ಕಾಲದ ಸಂಸ್ಕೃತಿಯೂ ನಮ್ಮ ಮುಂದೆಯೇ ಮೆರವಣಿಗೆ ಹೊರಡುತ್ತದೆ. ಮಗಳ ಭೇಟಿಗಾಗಿ ಉಡುಪಿಗೆ ಹೋಗಿದ್ದಾಗ ನಾನು ಈ ಗ್ರಾಮದಲ್ಲಿ ಒಮ್ಮೆ ಸುತ್ತು ಹೊಡೆದೆ, ಸ್ನೇಹಿತರೊಂದಿಗೆ.

ಉಡುಪಿ ಎಂದರೆ ಶ್ರೀ ಕೃಷ್ಣನ ಸಾನಿಧ್ಯದ ತಾಣ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಉಡುಪಿ ಜಿಲ್ಲೆಯ ಮಣಿಪಾಲ ಎಂದ ತಕ್ಷಣ ನೆನಪಾಗುವುದು ಬ್ಯಾಂಕಿಂಗ್ ಕ್ಷೇತ್ರದ ಉಗಮಕ್ಕೆ ಕಾರಣವಾದ ನೆಲ, ವೈದ್ಯಕೀಯ, ತಾಂತ್ರಿಕ ಹಾಗೂ ಉನ್ನತ ಶಿಕ್ಷಣಗಳ ಸಂಸ್ಥೆಗಳ ತಾಣ ಎಂದೇ. ಇಂತಹ ನಗರದಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದ ವಿಜಯನಾಥ್ ಶೆಣೈ ಅವರ ಕನಸಿನ ಕೂಸು ಹಸ್ತಶಿಲ್ಪ ಸಂಸ್ಕೃತಿ ಗ್ರಾಮ. ತಮ್ಮ ಬಿಡುವಿನ ಸಮಯದಲ್ಲಿ ಹಳ್ಳಿಗಳಿಗೆ ಭೇಟಿ ನೀಡಿ, ಪುರಾತನ ವಸ್ತುಗಳನ್ನು ಸಂಗ್ರಹಿಸುವುದು ಇವರ ಹವ್ಯಾಸವಾಗಿತ್ತು. ಇವರು ಸಂಗ್ರಹಿಸುತ್ತಿದ್ದ ವಸ್ತುಗಳು, ಅದನ್ನಿಟ್ಟುಕೊಂಡು ವಾಸಿಸುತ್ತಿದ್ದ ಬಾಡಿಗೆ ಮನೆಯ ವಾತಾವರಣವು ನೆರೆಹೊರೆಯವರಿಗೆ ಗುಜರಿಯಂಗಡಿಯಂತೆ ಕಂಡುಬಂದರೂ, ಮುಂದೆ ಅದೇ ನೆರೆಹೊರೆಯವರು ಆಶ್ಚರ್ಯಪಡುವಂತೆ ಸಂಸ್ಕೃತಿ ಗ್ರಾಮ ಸೃಷ್ಟಿಯಾಯಿತು. ಕಂಬವೊಂದರಿಂದ ಆರಂಭವಾದ ಈ ಪಯಣ ಇಂದಿಗೆ ಅಂತರರಾಷ್ಟ್ರೀಯ ಪ್ರಸಿದ್ಧಿ ಪಡೆದ ತಾಣವಾಗಿ ರೂಪಾಂತರ ಹೊಂದುವವರಿಗೆ ಮುಂದುವರಿದಿದೆ.

ಈಗಿನ ಕಾಲದ ಮನೆಗಳಿಗೆ ಹಳೆಯ ಕಾಲದ ಮನೆಗಳ ಸ್ಪರ್ಶ ನೀಡುವುದು ಫ್ಯಾಶನ್. ಆದರಿಲ್ಲಿ, ಆರು ಎಕರೆ ಪ್ರದೇಶದಲ್ಲಿ ಮೂರ್ನಾಲ್ಕು ಶತಮಾನದ ಹಿಂದಿನ ಮನೆಗಳು, ಮಹಲ್‌ಗಳು, ಮಠಗಳನ್ನು ಮರುಸೃಷ್ಟಿಸಲಾಗಿದೆ. ಈ ಗ್ರಾಮದಲ್ಲಿ 17 ಮನೆಗಳನ್ನು (ಪಾರಂಪರಿಕ ಕಟ್ಟಡಗಳು) ಮರುಸೃಷ್ಟಿಸಲಾಗಿದ್ದು, ಜೊತೆಗೆ 11 ವಸ್ತು ಸಂಗ್ರಹಾಲಯಗಳನ್ನು ನಿರ್ಮಿಸಲಾಗಿದೆ.

ಈ ಮರುಸೃಷ್ಟಿ ಸರಳವೂ ಅಲ್ಲ, ಅಗ್ಗವೂ ಆಗಿರಲಿಲ್ಲ. ಮೂಲ ಸ್ಥಳದ ಅವಶೇಷಗಳಿಂದ ವಸ್ತುಗಳನ್ನು ಖರೀದಿಸಿ, ಅವುಗಳನ್ನು ಮಣಿಪಾಲಕ್ಕೆ ಸಾಗಿಸಿ, ಮರುನಿರ್ಮಾಣ ಮಾಡುವಲ್ಲಿ ಹಾಕಿದ ಪರಿಶ್ರಮ ಹಾಗೂ ವೆಚ್ಚ ಬಹಳಷ್ಟಾಗಿದೆ. ಕೇರಳ, ಕರ್ನಾಟಕದ ಮಲೆನಾಡು, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉತ್ತರ ಕರ್ನಾಟಕದ ಐತಿಹಾಸಿಕ ಹಾಗೂ ಪುರಾತನ ಕಾಲದ ಮನೆಗಳನ್ನು ಮತ್ತು 13ನೇ ಶತಮಾನದ ಹರಿಹರ ಮಂದಿರ ಹಾಗೂ ಜಂಗಮ ಮಠವನ್ನು ಇಲ್ಲಿ ಮರುನಿರ್ಮಾಣ ಮಾಡಲಾಗಿದೆ. ಈ ಅಪರೂಪದ ಕಲಾಕೃತಿಗಳನ್ನು, ಆ ಗತವೈಭವವನ್ನು ಕಣ್ತುಂಬಿಕೊಳ್ಳುವುದೇ ಚೆಂದ. ಎಲ್ಲಾ ನಿರ್ಮಾಣಗಳು ಅದೇ ಕಾಲದ ಸಂಸ್ಕೃತಿಯನ್ನು ನೆನಪಿಸುವಂತಿವೆ.

ಗ್ರಾಮ ಪ್ರವೇಶಿಸಿದೊಡನೆ ಕಾಣಸಿಗುವುದು 'ಮಿಯಾರು ಮನೆ'. ಇದು ಸುಮಾರು 165 ವರ್ಷಗಳ ಹಳೆಯದಾದ ಕಟ್ಟಡ. ಈ ಮನೆಯು ದಕ್ಷಿಣ ಕನ್ನಡದ ಬ್ರಾಹ್ಮಣರ ಪುರಾತನ ಮನೆಯ ಮರುನಿರ್ಮಾಣವಾಗಿದೆ. ಈ ಕಟ್ಟಡ ಆಡಳಿತ ಕಚೇರಿ, ಟಿಕೆಟ್ ಕೌಂಟರ್ ಹಾಗೂ ಸಂಸ್ಕೃತಿ ಗ್ರಾಮಕ್ಕೆ ಪ್ರವೇಶ ದ್ವಾರವಾಗಿದೆ. ಈ ಮನೆಯ ದ್ವಾರದ ಮೇಲೆ ಗಜಲಕ್ಷ್ಮಿಯ ವಿಶಿಷ್ಟ ಕಲಾಕೃತಿಯನ್ನು ಕೆತ್ತಲಾಗಿದೆ. ಎರಡನೆಯದು 'ಶೃಂಗೇರಿ ಮನೆ'. ಇದೂ ಸಹಿತ 160 ವರ್ಷದ ಹಳೆಯ ಮನೆಯ ಮರು ನಿರ್ಮಾಣ. ಈ ಮನೆಯಲ್ಲಿ ಸಾಂಪ್ರದಾಯಿಕ ಶೈಲಿಯ ಅಡುಗೆ ಮನೆ ಹಾಗೂ ಪೂಜಾ ಕೋಣೆಯಿದೆ.

ಜನರನ್ನು ಆಕರ್ಷಿಸುವ ಕಟ್ಟಡವೆಂದರೆ, 'ಮುಧೋಳ ಪ್ಯಾಲೇಸ್-ದರ್ಬಾರ್ ಹಾಲ್'. ಇದು 205 ವರ್ಷಕ್ಕೂ ಹೆಚ್ಚು ಹಳೆಯದಾದ ಮರಾಠಾ ಮನೆತನದ ಬಾಗಲಕೋಟೆ ಜಿಲ್ಲೆಯ ಮುಧೋಳ ಘೋರ್ಪಡೆ ವಂಶಸ್ಥರ ಮಹಲು. ರಾಜ ವೈಭವ ನೆನಪಿಸುವಂತಹ ಕಲಾಕೃತಿಗಳು ಇಲ್ಲಿವೆ.

11ನೇ ಪುಟಕ್ಕೆ...

ಮಧುಬಟ್ಟಲಿನಲ್ಲಿ ಬಿರುಗಾಳಿ

ಕೆ.ಎಸ್.ಗಿರೀಶ

ರಾಜ್ಯದ ಮಧುಬಟ್ಟಲುಗಳಲ್ಲಿ ಕೊಡಗು ಕೂಡ ಒಂದು. ಅದೊಂದು ಕಾಲವಿತ್ತು. ಕೊಡಗಿಗೆ ಬಂದರೆ ಜೇನು ಸವಿಯದೇ ಹೋಗಬಾರದು, ಇಲ್ಲಿನ ಜೇನು ಉಳಿದೆಲ್ಲ ಜೇನಿಗಿಂತಲೂ ಸವಿ ಮತ್ತು ಹಲವು ಕಾಯಿಲೆಗಳಿಗೆ ರಾಮಬಾಣ ಎಂಬ ಮಾತು ಜನಜನಿತವಾಗಿತ್ತು. ಇಂತಹ ನಂಬಿಕೆ, ನಾಣ್ಣುಡಿಗಳು ಈಗ ಹುಸಿಯಾಗುತ್ತಿವೆ. ದಿನ ಕಳೆದಂತೆ ಕೊಡಗಿನ ಜೇನು ಸವಿ ಕಳೆದುಕೊಳ್ಳುತ್ತಿರುವುದು ಮಾತ್ರವಲ್ಲ, ಜೇನು ಹುಳಗಳು ಜೀವವನ್ನೂ ಕಳೆದುಕೊಳ್ಳುತ್ತಿವೆ. ಜೇನುಕೃಷಿ ಕ್ರಮೇಣ ಚರಿತ್ರೆಯ ಭಾಗವಾಗುತ್ತಿದೆ.

ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ರಾಸಾಯನಿಕಗಳ ಬಳಕೆಯು ಜೇನ್ನೊಣಗಳ ಮೇಲೆ ಮಾರಕ ಪ್ರಭಾವ ಬೀರುತ್ತಿದೆ. ವರ್ಷದಿಂದ ವರ್ಷಕ್ಕೆ ಜೇನಿನ ಗುಣಮಟ್ಟ ಕುಸಿಯುತ್ತಿದೆ. ಮೊದಲಿದ್ದ ರುಚಿ ಈಗ ಕಡಿಮೆಯಾಗುತ್ತಿದೆ ಎಂಬ ನೋವು ಈ ಭಾಗದ ಜೇನುಪ್ರಿಯರನ್ನು ಕಾಡುತ್ತಿದೆ.

ದಟ್ಟ ಅರಣ್ಯದಿಂದ ಆವೃತವಾಗಿರುವ ಬೆಟ್ಟಗುಡ್ಡಗಳಲ್ಲಿನ ವೈವಿಧ್ಯಮಯ ಹೂಗಳಿಂದ ಜೇನ್ನೊಣಗಳು ಜೇನನ್ನು ಸಂಗ್ರಹಿಸುತ್ತವೆ. ಬೆತ್ತು, ಪುಲಿಯಾಜಿನಿ, ಕರಿಮರ, ನಂದಿ, ಚಾಕೋಟೆ ಮೊದಲಾದ ಕಾಡು ಮರಗಳಲ್ಲಿನ ಹೂಗಳು ಹಲವು ಔಷಧೀಯ ಗುಣಗಳನ್ನು ಹೊಂದಿವೆ. ಈ ಕಾರಣಕ್ಕೆ ಕೊಡಗಿನ ಜೇನು ಉಳಿದ ಜಿಲ್ಲೆಗಳ ಜೇನುತುಪ್ಪಕ್ಕಿಂತ ಅಧಿಕ ಪೋಷಕಾಂಶ, ಔಷಧೀಯ ಗುಣಗಳನ್ನು ಹೊಂದಿದೆ ಎಂದು ತಜ್ಞರು ಹೇಳುತ್ತಾರೆ. ಹೀಗಾಗಿ ಇಲ್ಲಿನ ಜೇನು ತನ್ನದೇ ವಿಶೇಷ ಸ್ಥಾನ ಗಳಿಸಿದೆ.

‘ಥ್ಯಾಸಾಕ್ ಬ್ರೂಡ್’ ಎಂಬ ಕಾಯಿಲೆಯು 1990ರ ದಶಕದಲ್ಲಿ ಕೊಡಗಿನ ಜೇನ್ನೊಣಗಳನ್ನು ಇನ್ನಿಲ್ಲದಂತೆ ಬಾಧಿಸಿತು. ಕ್ರಮೇಣ ಅವುಗಳು ಚೇತರಿಸಿಕೊಂಡವು ಎನ್ನುವಷ್ಟರಲ್ಲಿ ರಾಸಾಯನಿಕಗಳ ಅಧಿಕ ಬಳಕೆಯಿಂದ ಜೇನು ಸಂತತಿಗಳೇ ನಾಶವಾಗುವ ಹಂತಕ್ಕೆ ತಲುಪಿದೆ. ಕಾಫಿ ಸೇರಿದಂತೆ ಕೊಡಗಿನಲ್ಲಿ ಬೆಳೆಯುವ ಬಹುತೇಕ ಎಲ್ಲ ಬೆಳೆಗಳಿಗೂ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳನ್ನು ಹೆಚ್ಚಾಗಿಯೇ ಬಳಸಲಾಗುತ್ತಿದೆ. ಇದರಿಂದ ಜೇನ್ನೊಣಗಳ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಿದೆ.

ಕೊಡಗಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಉಂಟಾದ ಪ್ರವಾಹ, ಭೂಕುಸಿತಗಳೂ ಜೇನು ಕೃಷಿಗೆ ಹೊಡೆತ ನೀಡಿವೆ. ವಾತಾವರಣದ ಬದಲಾವಣೆಯಿಂದ ಮಳೆ ಬರಬೇಕಿರುವ ಕಾಲದಲ್ಲಿ ಮಳೆ ಬಾರದೇ, ವಿಪರೀತ ಬಿಸಿಲು ಆವರಿಸುವುದು, ಮಳೆ ಬಂದರೆ ನಿಲ್ಲದೇ ಒಮ್ಮೆಗೆ ಮೇಘಸ್ಫೋಟದಂತೆ ಸುರಿಯುವುದು ಹೆಚ್ಚಾಗುತ್ತಿದೆ. ಹವಾಮಾನ ಬದಲಾವಣೆಯೂ ಜೇನು ಕೃಷಿಗೆ ದೊಡ್ಡ ಪೆಟ್ಟು ನೀಡಿದೆ.

ಕೊಡಗು ಜಿಲ್ಲೆಯ ವಿರಾಜಪೇಟೆಯ ಕೊಡಗು ಜೇನು ಮತ್ತು ಮೇಣ ಉತ್ಪಾದಕರ ಸಹಕಾರ ಸಂಘದ ಜೇನು ಸಂಸ್ಕರಣಾ ಘಟಕ

ಕೊಡಗು ಜಿಲ್ಲೆಯಲ್ಲಿ ಎರಡು ಜೇನು ಕೃಷಿಕರ ಸಹಕಾರ ಸಂಘಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. 1936ರಲ್ಲಿ ರಾಮಕೃಷ್ಣ ಮಠದ ಸ್ವಾಮಿ ಶಾಂಭವಾನಂದ ಅವರು ದೇಶದಲ್ಲೇ ಮೊದಲ ಬಾರಿಗೆ ವಿರಾಜಪೇಟೆಯಲ್ಲಿ ಸ್ಥಾಪಿಸಿದ ಕೊಡಗು ಜೇನು ಮತ್ತು ಮೇಣ ಉತ್ಪಾದಕರ ಸಹಕಾರ ಸಂಘ 2,200 ಸಕ್ರಿಯ ಸದಸ್ಯರನ್ನು ಹೊಂದಿದ್ದು, ವಾರ್ಷಿಕ 60 ಸಾವಿರ ಕೆ.ಜಿಯಷ್ಟು ಜೇನುತುಪ್ಪವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದೆ. ವಿರಾಜಪೇಟೆಯಲ್ಲಿ ಮೂರು, ಗೋಣಿಕೊಪ್ಪದಲ್ಲಿ ಒಂದು ಶಾಖೆಯನ್ನು ತೆರೆದಿದೆ. ನಿತ್ಯ 300 ಕೆ.ಜಿ ಜೇನುತುಪ್ಪವನ್ನು ಸಂಸ್ಕರಿಸುವ ದೊಡ್ಡ ಕಾರ್ಯಾಗಾರವೂ ಇದರಲ್ಲಿದೆ.

‘ಜೇನು ಕೃಷಿಕರು ತರುವ ಜೇನುತುಪ್ಪವನ್ನು ಮೊದಲು ‘ಎಜಿಮಾರ್ಕ್’ ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷಿಸಲಾಗುತ್ತಿದೆ. ಕಲಬೆರಕೆ ಇಲ್ಲ ಎಂದು ಗೊತ್ತಾದ ನಂತರವಷ್ಟೇ ಖರೀದಿಸಿ, ಇದರಲ್ಲಿರುವ ತೇವಾಂಶವನ್ನು ತೆಗೆದು, ಮಾರಾಟಕ್ಕೆ ಸಿದ್ಧಪಡಿಸಲಾಗುತ್ತದೆ. ಕೆಡಬಾರದೆಂದು ಯಾವುದೇ ರಾಸಾಯನಿಕ ಸೇರಿಸುವುದಿಲ್ಲ’ ಎಂದು ಸಂಘದ ಕಾರ್ಯದರ್ಶಿ ತಿಮ್ಮಯ್ಯ ಹೇಳುತ್ತಾರೆ.

ಭಾಗಮಂಡಲದ ಕೊಡಗು ಪ್ರಗತಿಪರ ಜೇನು ಕೃಷಿಕರ ಸಹಕಾರಿ ಸಂಘವು 1954ರಲ್ಲಿ ಶುರುವಾಯಿತು. 1,100 ಸಕ್ರಿಯ ಸದಸ್ಯರನ್ನು ಹೊಂದಿರುವ ಸಂಘದಲ್ಲಿ ಹವ್ಯಾಸಿ ಜೇನು ಕೃಷಿಕರು ಸೇರಿದಂತೆ ಸುಮಾರು ಮೂರು ಸಾವಿರ ಮಂದಿ ಜೇನು ಸಂಗ್ರಹ ಮಾಡುತ್ತಾರೆ. ವಾರ್ಷಿಕ ಒಂದೂವರೆ ಲಕ್ಷ ಕೆ.ಜಿಯಷ್ಟು ಸಂಗ್ರಹಿಸಿ ಮಾರಾಟ ಮಾಡುತ್ತಿದೆ.

‘ಡಿಸೆಂಬರ್‌ನಿಂದ ಮೇ ಜೇನು ಕೃಷಿಯ ಉತ್ತುಂಗದ ಕಾಲ. ಈ ಅವಧಿಯಲ್ಲಿ 15ರಿಂದ 25 ದಿನಗಳ ಅವಧಿಗೊಮ್ಮೆ ಜೇನು ಪಡೆಯಬಹುದು. ಸಂಘವೇ ಸ್ಥಾಪಿಸಿರುವ ಪ್ರಯೋಗಾಲಯದಲ್ಲಿ ನಿತ್ಯ ಮೂರು ಮಾದರಿಗಳನ್ನು ಪರೀಕ್ಷಿಸಬಹುದು. ಇದರಲ್ಲಿ ಶುದ್ಧ ಎಂದು ಕಂಡು ಬಂದ ಜೇನನ್ನು ಮಾತ್ರವೇ ಖರೀದಿಸಲಾಗುತ್ತದೆ. ನಿತ್ಯ ಸಾವಿರ ಕೆ.ಜಿಯಷ್ಟು ತುಪ್ಪವನ್ನು ಸಂಸ್ಕರಿಸುವ ಕಾರ್ಯಾಗಾರ ಇಲ್ಲಿದ್ದು, ಇದರಲ್ಲಿ ತೇವಾಂಶ ತೆಗೆದು, ಯಾವುದೇ ರಾಸಾಯನಿಕ ಬಳಸದೇ ಮಾರಾಟಕ್ಕೆ ಅಣಿಗೊಳಿಸಲಾಗುತ್ತದೆ’ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಧಾ ಹೇಳುತ್ತಾರೆ.

ಭಾಗಮಂಡಲದಲ್ಲಿ ಪ್ರಧಾನ ಕಚೇರಿ ಹೊಂದಿರುವ ಸಂಘವು ಬೆಂಗಳೂರು, ಸೋಮವಾರಪೇಟೆ, ಕುಶಾಲನಗರ, ಮಡಿಕೇರಿಗಳಲ್ಲಿ ತನ್ನ ಶಾಖೆಗಳನ್ನು ತೆರೆದಿದೆ. ಎರಡೂ ಸಂಘಗಳಲ್ಲಿ ‘ಎಪಿಸೆರೆನ್’ ಎಂಬ ತಳಿಯ ಜೇನು ನೊಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಈಗ ಕೊಡಗಿನ ಜೇನುತುಪ್ಪಕ್ಕೆ ಹೆಚ್ಚಿನ ಬೇಡಿಕೆ ಇದೆ. ಆದರೆ, ಬೇಡಿಕೆಗೆ ತಕ್ಕಷ್ಟು ಪೂರೈಕೆ ಇಲ್ಲ. ಪರಿಶುದ್ಧವಾದ ಜೇನು ತುಪ್ಪವನ್ನು ಎರಡೂ ಸಂಘಗಳೂ ಉತ್ಪಾದಿಸುತ್ತಿವೆ ಎಂದು ಆಯಾಯ ಸಂಘಗಳು ಪ್ರತಿಪಾದಿಸುತ್ತವೆ. ಆದರೆ, ಇವುಗಳ ಹೆಸರಿನಲ್ಲಿ ನಕಲಿ ಬ್ರಾಂಡ್‌ಗಳ ಜೇನುತುಪ್ಪಗಳು ಸಾಕಷ್ಟಿವೆ. ಪೂರೈಕೆಯ ಕೊರತೆಯಿಂದ ಕೆಲವೊಂದು ಕಡೆ ಜೇನುತುಪ್ಪಕ್ಕೆ ಕಲಬೆರಕೆ ಮಾಡಿ, ಅದನ್ನು ಹೆಚ್ಚಿಸಿ, ಪರಿಶುದ್ಧವಾದ ಜೇನು ಎಂದೇ ಮಾರಾಟ ಮಾಡಲಾಗುತ್ತಿದೆ. ಇಂತಹ ನಕಲಿ ಬ್ರಾಂಡ್‌ಗಳು ಕೊಡಗಿನ ಜೇನಿನ ವಿಶ್ವಾಸಾರ್ಹತೆಯನ್ನೇ ಕುಂದಿಸುತ್ತಿವೆ.

ಹನಿ ಹನಿ ಜೇನ ಕಹಾನಿ...

ಮಧುಕೇಶ್ವರ ಹೆಗಡೆ

8ನೇ ಪುಟದಿಂದ...

ಅಂಟುವಾಳ, ನೇರಳೆ, ಕೋಕಂ, ಶುಂಠಿ, ನೆಲ್ಲಿ, ಅಶ್ವಗಂಧದ ಸವಿಯ ಜೇನುತುಪ್ಪಗಳಿಗೆ ಬಹಳ ಬೇಡಿಕೆ ಇದೆ ಎಂಬುದು ‘ಹನಿ ಜ್ಯಾಮ್’ ತಯಾರಿಸುವ ಶಿರಸಿ ಸಮೀಪದ ಕಲ್ಲಳ್ಳಿಯ ಮಧುಕೇಶ್ವರ ಹೆಗಡೆಯವರ ಅಭಿಪ್ರಾಯ.

1992ರಿಂದ ಜೇನು ಕೃಷಿಯಲ್ಲಿ ತೊಡಗಿಕೊಂಡು ಮಾರುಕಟ್ಟೆಯ ‘ಟ್ರೆಂಡ್’ಗೆ ತಕ್ಕಹಾಗೆ ಜೇನಿನ ಉಪ ಉತ್ಪನ್ನಗಳ ತಯಾರಿಕೆಯಲ್ಲಿ ನುರಿತರಾಗಿರುವ ಮಧುಕೇಶ್ವರ ಹೆಗಡೆಯವರು ತಮ್ಮ ‘ಮಧುಬನವನ್ನೇ’ ಜೇನು ಸಂಶೋಧನೆಗೆ, ತರಬೇತಿಗೆ, ಮೀಸಲಿಟ್ಟಿದ್ದಾರೆ. ಪುಷ್ಪ ಪರಾಗದ ಚಾಕೋಲೇಟ್, ಪರಾಗದ ಸೌಂದರ್ಯವರ್ಧಕ, ಜೇನು ಮೇಣದ ಬತ್ತಿ, ‘ರಾಯಲ್ ಜೆಲ್ಲಿ’, ‘ಕೋಕಂ-ಜೇನಿನ ಸಿಹಿ ಉಪ್ಪಿನಕಾಯಿ’, ಬಾಟಲ್‌ನಲ್ಲಿ ಬೆಳೆಸಿದ ‘ಕೊಂಬ್ ಹನಿ’, ಜೇನು-ಸಿರಿಧಾನ್ಯ-ಡ್ರೈಫ್ರೂಟ್ಸ್ ಲಡ್ಡು ಮುಂತಾದ ವಿಶಿಷ್ಟ ನವೀನ ಉತ್ಪನ್ನಗಳ ತಯಾರಿಕೆ, ಮಾರಾಟದಲ್ಲಿ ಯಶಸ್ವಿಯಾಗಿ ಹಲವಾರು ಪ್ರಸಿದ್ಧ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ‘ಮಧುಮಿತ್ರ ರೈತ ಉತ್ಪಾದಕ ಸಂಸ್ಥೆ’ಯ ನಿರ್ದೇಶಕರಾಗಿ, 1,500 ಜೇನು ಪೆಟ್ಟಿಗೆಗಳನ್ನು ನಿರ್ವಹಿಸುತ್ತಾ, ತುಡುವೆ ಜೇನು ಪೆಟ್ಟಿಗೆಗಳ ತಯಾರಿಕೆ ಮತ್ತು ಮಾರಾಟವನ್ನು ಮಾಡುತ್ತಾ ಬಂದಿದ್ದಾರೆ. ತೋಟಗಾರಿಕಾ ಕಾಲೇಜಿನ ವಿದ್ಯಾರ್ಥಿಗಳಿಗೆ, ರೈತ ಗುಂಪುಗಳಿಗೆ ಜೇನಿನ ವಿಜ್ಞಾನ ಭೋಧಿಸುತ್ತಾ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ವ್ಯವಹಾರ ಜ್ಞಾನದ ಪ್ರಕಾರ ಒಂದು ಗ್ರಾಮ್ ‘ಬೀ ವೆನಮ್’ಗೆ (ಜೇನಿನ ವಿಷ) ಎಂಭತ್ತು ಸಾವಿರ ರೂಪಾಯಿವರೆಗೂ, ಕೆ.ಜಿ. ಪರಾಗಕ್ಕೆ ಇಪ್ಪತ್ತು ಸಾವಿರದವರೆಗೂ, 20 ಗ್ರಾಮ್ ರಾಯಲ್ ಜೆಲ್ಲಿಗೆ ನಾಲ್ಕು ಸಾವಿರ ರೂಪಾಯಿವರೆಗೂ ಬೆಲೆಯಿದೆಯಂತೆ.

ಅಭಿವೃದ್ಧಿಯ ಅಡ್ಡ ಪರಿಣಾಮ

ಜೇನು ಸಾಕಣೆ ವ್ಯಾಪಾರೀಕರಣವಾದಂತೆ ಕಲಬೆರಕೆ ಏರುತ್ತಿದೆ. ಕಾಲೊನಿಗಳ ಸಂಖ್ಯೆ ಹೆಚ್ಚಾದಂತೆ ರೋಗಗಳ ಬಾಧೆಯೂ ಜೇನನ್ನು ಪೀಡಿಸುತ್ತಿದೆ. ‘ಥಾಯ್ ಸಾಕ್ ಬ್ರೂಡ್’ನಂತಹ ವೈರಲ್ ರೋಗಗಳು ಜೇನು ಕೃಷಿಕರ ಕಂಗೆಡಿಸುತ್ತಿದೆ. ತೋಟ-ಗದ್ದೆಗಳಿಗೆ ಯಥೇಚ್ಛವಾಗಿ ಬಳಸುತ್ತಿರುವ ಕೀಟನಾಶಕಗಳು ಜೇನು ಸಂಕುಲಕ್ಕೇ ಮಾರಕವಾಗಿವೆ. ಹೀಗೇ ಮುಂದುವರಿದರೆ ಜೇನಿನ ಜೀವನ ಕಷ್ಟ ಎಂಬುದು ಉತ್ತರ ಕನ್ನಡ ಭಾಗದ ಬಹುತೇಕ ರೈತರ ಖಚಿತ ಅಭಿಪ್ರಾಯ.

ಮಲೆನಾಡಿನ ಈ ಮಧುಬಟ್ಟಲಿಗೆ ಹೊಂದಿಕೊಂಡಂತೆಯೇ ಬನವಾಸಿಯಲ್ಲಿ ಮಧುಕೇಶ್ವರ ದೇವಾಲಯವೂ ಇದೆ. ಆ ಮಧುಕೇಶ್ವರನಿಗೂ ಈ ಮಧುವಿನ ಯೋಧರಿಗೂ ಏನಾದರೂ ಸಂಬಂಧವಿದೆಯೇ? ಅಂಟಿದ ನಂಟಿನ ಆ ಕೊನೆ ಬಲ್ಲವರಾರು?

ಮಕರಂದ ಹೀರುವುದರ ಜೊತೆಗೆ ಪರಾಗಸ್ಪರ್ಶಕ್ಕೂ ಕಾರಣವಾಗುವ ಜೇನು ನೊಣಗಳು
–ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಶಾಭಾಷ್ ಮಿಥಾಲಿ..

ಗಿರೀಶ ದೊಡ್ಡಮನಿ

ಬಾಲ್ಯದಲ್ಲಿ ಮಿಥಾಲಿ ರಾಜ್ –ಟ್ವಿಟರ್ ಚಿತ್ರ

> ಭಾರತೀಯ ಮಹಿಳಾ ಕ್ರಿಕೆಟಿಗರು ವಿಶ್ವಮಟ್ಟದಲ್ಲಿಯೂ ಮಿಂಚಬಲ್ಲರು ಎಂದು ತೋರಿಸಿಕೊಟ್ಟ ಮಿಥಾಲಿ ರಾಜ್, ಭಾರತದ ಕ್ರಿಕೆಟ್‌ನಲ್ಲಿ ಒಂದು ಯುಗವನ್ನೇ ಸೃಜಿಸಿದ ದಂತಕಥೆಯಾಗಿದ್ದಾರೆ...

ಎರಡೂವರೆ ದಶಕಗಳ ಹಿಂದೆ ಇನ್ನೂ ಸ್ಮಾರ್ಟ್‌ಫೋನ್‌ಗಳು ಲಗ್ಗೆ ಇಟ್ಟಿರಲಿಲ್ಲ. ಸಾಮಾಜಿಕ ಜಾಲತಾಣಗಳ ಬಗ್ಗೆ ಗೊತ್ತೇ ಇರಲಿಲ್ಲ. ಆ ಹೊತ್ತಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಿದ್ದ ಮಿಥಾಲಿ ರಾಜ್ ಈಚೆಗೆ ನಿವೃತ್ತಿ ಘೋಷಿಸಿದರು. ವಿದಾಯ ಹೇಳಿ ನಾಲ್ಕು ದಿನ ಕಳೆದರೂ ಸಾಮಾಜಿಕ ಮಾಧ್ಯಮಗಳಲ್ಲಿ ಅವರ ಸಾಧನೆಗಳ ಕಥೆಗಳು ಹರಿದಾಡುತ್ತಲೇ ಇವೆ. ಭಾರತದಲ್ಲಿ ಮಹಿಳಾ ಕ್ರಿಕೆಟ್‌ಗೆ ಜನಪ್ರಿಯತೆ, ಗೌರವ ಮತ್ತು ವರ್ಚಸ್ಸು ತಂದುಕೊಟ್ಟ ನಾಯಕತ್ವ ಮಿಥಾಲಿ ಅವರದ್ದು.

ಇವತ್ತು ಸಣ್ಣ, ದೊಡ್ಡ ನಗರಗಳ ಕ್ರಿಕೆಟ್ ಅಕಾಡೆಮಿಗಳಲ್ಲಿ ಹೆಣ್ಣುಮಕ್ಕಳ ದಂಡು ಕಾಣಿಸುತ್ತಿರುವುದರ ಹಿಂದೆ ಮಿಥಾಲಿಯ ಪ್ರಭಾವಳಿ ಇದೆ. ಅವರ ನಾಯಕತ್ವದಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡವು ಏಕದಿನ ವಿಶ್ವಕಪ್‌ನಲ್ಲಿ ಎರಡು ಬಾರಿ ರನ್ನರ್ಸ್ ಅಪ್ ಆಯಿತು. ತಂಡವು 2005ರಲ್ಲಿ ಫೈನಲ್ ತಲುಪಿದಾಗಲೇ ಭಾರತದ ವನಿತೆಯರ ತಾಕತ್ತು ಏನೆಂಬುದು ಜಗತ್ತಿಗೆ ತಿಳಿದಿತ್ತು. ಮಹಿಳಾ ಕ್ರಿಕೆಟ್ ಎಂದರೇ ಮೂಗು ಮುರಿಯುವವರ ಕಣ್ಣುಗಳೂ ಮೆಚ್ಚುಗೆ ಬೀರಲು ಆರಂಭಿಸಿದ ಹೊತ್ತು ಅದು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವ್ಯಾಪ್ತಿಗೆ ಮಹಿಳಾ ಕ್ರಿಕೆಟ್ ಸೇರಲು ಕಾರಣವಾಗಿದ್ದು ಕೂಡ ಈ ಸಾಧನೆ. ಇದರಿಂದಾಗಿ ಹಣ, ಹೆಸರು ಮತ್ತು ಜನಪ್ರಿಯತೆಗಳು ಮಹಿಳಾ ಕ್ರಿಕೆಟ್‌ನತ್ತಲೂ ಮುಖ ಮಾಡಿದವು. ಎಲ್ಲಕ್ಕಿಂತ ಹೆಚ್ಚಾಗಿ ಮಹಿಳೆಯರ ಅಸ್ಮಿತೆಯ ಪ್ರತೀಕವಾಗಿ ಮಿಥಾಲಿ ಗಮನ ಸೆಳೆದರು.

ಹೆಣ್ಣುಮಕ್ಕಳನ್ನು ನೃತ್ಯ, ಸಂಗೀತ, ಅಡುಗೆ, ಹೊಲಿಗೆ ಕೌಶಲಗಳಿಗೆ ಸೀಮಿತಗೊಳಿಸುವ ಕಾಲದಲ್ಲಿಯೇ ಮಗಳನ್ನು ಕ್ರಿಕೆಟ್ ಆಟಗಾರ್ತಿಯನ್ನಾಗಿ ರೂಪಿಸಲು ಪಣತೊಟ್ಟ ಅಪ್ಪ ದೊರೈರಾಜ್ ಅನುಕರಣೀಯರಾಗುತ್ತಾರೆ. ತಮಿಳುನಾಡು ಮೂಲದ ಕುಟುಂಬದಲ್ಲಿ ಜನಿಸಿದ ಮಿಥಾಲಿಗೆ ಸಹಜವಾಗಿಯೇ ನೃತ್ಯದ ಅಭಿರುಚಿ ಇತ್ತು. ಭರತನಾಟ್ಯದ ಕಲಿಕೆಯಲ್ಲಿ ಆಸಕ್ತಿ ಕೂಡ ಇತ್ತು. ಆದರೆ ವಾಯುಸೇನೆ ಅಧಿಕಾರಿಯಾಗಿದ್ದ ದೊರೈರಾಜ್ ತಮ್ಮ ನಿರ್ಧಾರಕ್ಕೆ ಬದ್ಧರಾಗಿದ್ದರು.

ಆದರೆ, ಮಿಥಾಲಿಗೇನೂ ಕ್ರಿಕೆಟ್ ಕ್ರೇಜ್ ಇರಲಿಲ್ಲ. ಅದರಲ್ಲೂ ಬೆಳಗಿನ ಜಾವ ನಿದ್ದೆ ಬಿಟ್ಟೇಳುವುದೆಂದರೆ ಕಡುಕೋಪ.

‘ನಾನು ಬಾಲ್ಯದಲ್ಲಿ ಸ್ವಲ್ಪ ಆಲಸಿಯಾಗಿದ್ದೆ. ಬೆಳಗಿನ ಜಾವ ಏಳುವುದೆಂದರೆ ಆಗುತ್ತಿರಲಿಲ್ಲ. ಆದರೂ ಅಪ್ಪನಿಗೆ ಹೆದರಿ ಕ್ರಿಕೆಟ್ ಕಿಟ್ ಹಿಡಿದು ಅಕಾಡೆಮಿಗೆ ಓಡುತ್ತಿದ್ದೆ. ಆರಂಭದಲ್ಲಿ ಯಾರಿಗಪ್ಪ ಬೇಕು ಕ್ರಿಕೆಟ್ ಎನ್ನುತ್ತಿದ್ದೆ. ಅಪ್ಪನ ಮೇಲೆ ಸಿಟ್ಟು ಬರುತ್ತಿತ್ತು. ದಿನಕಳೆದಂತೆ ಆಟ ಆಸಕ್ತಿ ಮೂಡಿಸಿತು. ಈಗ ಹೆಸರು, ಹಣ, ಅಭಿಮಾನಿಗಳ ಪ್ರೀತಿ ಅನುಭವಿಸುವಾಗ ಅಪ್ಪ ಅವತ್ತು ಬಿಗಿ ನಿಲುವು ತಾಳದಿದ್ದರೆ ನಾನು ಈ ಮಟ್ಟಕ್ಕೇರುತ್ತಿರಲಿಲ್ಲ ಅನಿಸುತ್ತೆ. ಅಪ್ಪನಿಗೆ ಥ್ಯಾಂಕ್ಸ್’ ಎಂದು ಮಿಥಾಲಿ ಟಿ.ವಿ. ಸಂದರ್ಶನವೊಂದರಲ್ಲಿ ಕೆಲವು ವರ್ಷಗಳ ಹಿಂದೆಯೇ ಹೇಳಿದ್ದರು.

ಮಿಥಾಲಿ ಪುಸ್ತಕಪ್ರೀತಿ: ಮಿಥಾಲಿಗೆ ಕ್ರಿಕೆಟ್ ಬಿಟ್ಟರೆ ಅಚ್ಚುಮೆಚ್ಚಿನ ಹವ್ಯಾಸವೆಂದರೆ ಪುಸ್ತಕಗಳನ್ನು ಓದುವುದು. ಅವರು ಕ್ರಿಕೆಟ್ ಸರಣಿ ಆಡಲು ಹೊರಟರೆ ಕ್ರಿಕೆಟ್ ಕಿಟ್, ಬಟ್ಟೆಯ ಸೂಟ್‌ಕೇಸ್ ಜೊತೆಗೆ ಪುಸ್ತಕಗಳ ಒಂದು ಚೀಲವೂ ಇರುತ್ತಿತ್ತು. ಮಿಥಾಲಿ ತಮ್ಮ ತಂಡದ ಆರಂಭಿಕ ಆಟಗಾರ್ತಿಯರು ಬ್ಯಾಟಿಂಗ್ ಮಾಡುವುದನ್ನು ಪೂರ್ತಿಯಾಗಿ ಯಾವಾಗಲೂ ನೋಡಿಯೇ ಇಲ್ಲ. ಅತ್ತ ಮೈದಾನದಲ್ಲಿ ಆಟ ನಡೆಯುತ್ತಿದ್ದರೆ, ತಮ್ಮ ಬ್ಯಾಟಿಂಗ್ ಸರದಿ ಬರುವವರೆಗೂ ಪುಸ್ತಕದಲ್ಲಿ ಮುಳುಗಿರುತ್ತಿದ್ದರು ಮಿಥಾಲಿ. ಅಭ್ಯಾಸದ ನಡುವೆ, ವಿಶ್ರಾಂತಿ ಸಮಯದಲ್ಲಿ ಕೈಯಲ್ಲಿ ಪುಸ್ತಕ ಇರಲೇಬೇಕು.

‘ಹೌದು. ಮಿಥಾಲಿಯವರಿಗೆ ಪುಸ್ತಕ ಓದಿನ ಹವ್ಯಾಸ ಬಹಳಷ್ಟಿತ್ತು. ನಾನು ಕೂಡ ಬಹಳಷ್ಟು ಪುಸ್ತಕ ಓದುವುದರಲ್ಲಿಯೇ ಹೆಚ್ಚು ಸಮಯ ಕಳೆಯುತ್ತಿದ್ದೆ. ನಮಗೆ ಹೊರಗೆ ಸುತ್ತಾಡಲು ಹೋಗುವ, ಗಾಸಿಪ್ ಮಾಡುವಂತಹ ಹವ್ಯಾಸಗಳು ಇರಲಿಲ್ಲ. ಒಳ್ಳೆಯ ಕೃತಿಗಳ ಓದಿನಿಂದ ನಮ್ಮ ಮನೋಬಲ ಗಟ್ಟಿಯಾಗುತ್ತಿತ್ತು. ಅದರಿಂದಾಗಿಯೇ ಮೆಂಟಲ್ ಕೋಚ್ ಇಲ್ಲದ ಕಾಲದಲ್ಲಿಯೂ ಮಿಥಾಲಿ ಎಲ್ಲ ಬಗೆಯ ಒತ್ತಡಗಳನ್ನು ಮೀರಿ ನಾಯಕಿ ಮತ್ತು ಬ್ಯಾಟರ್ ಆಗಿ ಯಶಸ್ವಿಯಾದರು’ ಎಂದು ಅವರೊಂದಿಗೆ ಆಡಿದ್ದ ಕರುಣಾ ಜೈನ್ ನೆನಪಿಸಿಕೊಳ್ಳುತ್ತಾರೆ.

ಪದಾರ್ಪಣೆ ಪಂದ್ಯದಲ್ಲಿಯೇ ಶತಕ, ಏಕದಿನ ಕ್ರಿಕೆಟ್‌ನಲ್ಲಿ ಏಳು ಸಾವಿರ ರನ್ ಗಳಿಸಿದ ಮೊದಲ ಆಟಗಾರ್ತಿ, ಎಲ್ಲ ಮಾದರಿ ಸೇರಿ ಹತ್ತು ಸಾವಿರಕ್ಕೂ ಹೆಚ್ಚು ರನ್‌ಗಳು, ಎರಡು ವಿಶ್ವಕಪ್ ಫೈನಲ್‌ಗಳಲ್ಲಿ ಆಡಿದ ದಾಖಲೆಗಳು ಅವರ ಹೆಸರಿನಲ್ಲಿವೆ. ಮೂರು ಮಾದರಿಗಳಲ್ಲಿಯೂ ಮಿಂಚಿದ ಅವರಿಗೆ ಅವರೇ ಸಾಟಿ.

ಮಿಥಾಲಿ ಆಟದಿಂದ ಪ್ರಭಾವಿತರಾದ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಶಫಾಲಿ ವರ್ಮಾ ಅವರಂತಹ ಪ್ರತಿಭಾನ್ವಿತೆಯರು ಈಗ ಭಾರತ ತಂಡದ ಪ್ರಮುಖ ಆಟಗಾರ್ತಿಯಾಗಿದ್ದಾರೆ. ಪುರುಷರ ವಿಭಾಗದ ತಾರೆಯರಷ್ಟೇ ವರ್ಚಸ್ಸು ಗಳಿಸಿಕೊಂಡಿರುವ ಮಿಥಾಲಿಯ ಬಯೋಪಿಕ್ ‘ಶಾಭಾಷ್ ಮೀತು’ ಇನ್ನೇನು ತೆರೆಕಾಣಲು ಸಿದ್ಧವಾಗಿದೆ.

ಮುನ್ನೋಟ 12-06-2022 ರಿಂದ 18-06-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅಪೇಕ್ಷಿತ ಗುರಿ ತಲುಪಲು ನೇರ ಹಾಗೂ ದಿಟ್ಟನಡವಳಿಕೆಯು ಅತಿ ಅಗತ್ಯವಾಗಿರುತ್ತದೆ. ಆರ್ಥಿಕ ಸಂಕಷ್ಟಗಳು ಸ್ವಲ್ಪಮಟ್ಟಿಗೆ ದೂರವಾಗುತ್ತವೆ. ನಿಂತಿದ್ದ ಕೆಲವು ವ್ಯವಹಾರಗಳು ಪುನಃ ಆರಂಭಗೊಳ್ಳುತ್ತವೆ. ಒಟ್ಟುಗೂಡಿದ ವ್ಯವಹಾರಗಳಲ್ಲಿ ಆದಾಯ ಹೆಚ್ಚು ಬರುತ್ತದೆ. ಬಾಳಸಂಗಾತಿಯ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ದೊಡ್ಡ ದೊಡ್ಡ ಯೋಜನೆಗಳನ್ನು ಆರಂಭಿಸುವ ಮುನ್ನ ಸಾಕಷ್ಟು ವಿಚಾರ ಮಾಡಿರಿ. ಧನಾಗಮನವು ನಿರೀಕ್ಷೆಯಷ್ಟಿರುತ್ತದೆ. ಹಣಕಾಸಿನ ವಿಷಯದಲ್ಲಿ ಹೆಚ್ಚು ಎಚ್ಚರವಹಿಸಿರಿ. ಆರಂಭಿಸಿದ ಕೆಲವೊಂದು ಕೆಲಸಗಳಿಗೆ ಬಂಧುಗಳಿಂದ ವಿಘ್ನಗಳು ಎದುರಾಗಬಹುದು. ಕೆಲವರಿಗೆ ತಾಯಿಯ ಆರೋಗ್ಯಕ್ಕಾಗಿ ಹೆಚ್ಚು ಗಮನ ಕೊಡಲೇಬೇಕಾದ ಅನಿವಾರ್ಯವಿದೆ. ವಿದ್ಯಾರ್ಥಿಗಳಿಗೆ ಬಹಳ ಯಶಸ್ಸು ಸಿಗುವುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಮಾತುಗಳಿಂದ ವೃಥಾ ಆರೋಪ ಎದುರಿಸುವ ಸಾಧ್ಯತೆ ಇದೆ. ಮಾತಿನ ಮೇಲೆ ಸಾಕಷ್ಟು ಹಿಡಿತ ಇರುವುದು ಒಳ್ಳೆಯದು. ಕುಟುಂಬದ ವ್ಯವಹಾರದಲ್ಲಿ ಒಡಹುಟ್ಟಿದವರಿಂದ ಮೋಸ ಹೋಗುವ ಸಾಧ್ಯತೆ ಇದೆ. ಧನಾದಾಯವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಕೆಲವೊಂದು ಆಪಾದನೆಗಳಿಂದ ಮುಕ್ತರಾಗಿ ಸಂತೋಷಪಡುವಿರಿ. ಹೊಟ್ಟೆಗೆ ಸಂಬಂಧಪಟ್ಟ ತೊಂದರೆಗಳು ಬಾಧಿಸಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಗತಿಯನ್ನು ಕಾಣುವ ಕಾಲ. ಅವಿವಾಹಿತರಿಗೆ ಸಂಬಂಧ ಒದಗಿ ಬರುವ ಸಾಧ್ಯತೆ ಇದೆ. ನಿಮ್ಮ ಕಾರ್ಯಸ್ಥಳದಲ್ಲಿ ಸಣ್ಣ ಮಾತುಗಳಿಗೆ ಕಿವಿಗೊಡದೆ ನೀವು ಕಾರ್ಯದಲ್ಲಿ ಮುಂದುವರಿಯುವುದು ಒಳ್ಳೆಯದು. ಮೂಳೆಯ ತೊಂದರೆಗಳು ಬಾಧಿಸಬಹುದು. ಸಂಪನ್ಮೂಲಕ್ಕೆ ಅನುಗುಣವಾಗಿ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಒಳಿತು. ಹಣದ ಒಳಹರಿವು ತೃಪ್ತಿಕರವಾಗಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಧಾರ್ಮಿಕ ನಡೆಯ ಬಗ್ಗೆ ಜನರು ಪ್ರಶ್ನಿಸಬಹುದು. ಆದ್ದರಿಂದ ಎಚ್ಚರಿಕೆಯ ನಡೆ ಇರಲಿ. ಉದ್ಯೋಗ ನಿಮಿತ್ತ ದೂರಪ್ರಯಾಣದ ಸಾಧ್ಯತೆಗಳಿವೆ. ಭೂ ವ್ಯವಹಾರವನ್ನು ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಆದರೆ ಅದಕ್ಕೆ ಸಂಬಂಧಿಸಿದ ಕೆಲವು ಕೆಲಸಗಳು ನಿಧಾನವಾಗಬಹುದು. ಕಾಯಿಲೆಯಿಂದ ಬಳಲುತ್ತಿದ್ದ ಹಿರಿಯ ಮಹಿಳೆಯರ ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಮನೋವೃತ್ತಿಯ ಮೇಲೆ ಹಿಡಿತವನ್ನು ಸಾಧಿಸಿ ನಿತ್ಯದ ಕಾರ್ಯಗಳನ್ನು ಮಾಡುವುದು ಒಳಿತು. ನಿಮ್ಮ ಸಂಗಾತಿಯ ಸಲಹೆಗಳು ನಿಮಗೆ ಸಾಕಷ್ಟು ಒಳಿತನ್ನು ತರುತ್ತವೆ. ಷೇರು ವ್ಯವಹಾರ ಮಾಡುವವರಿಗೆ ಹಿನ್ನಡೆ ಇರುತ್ತದೆ. ಗೃಹ ಅಲಂಕಾರ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಅಭಿವೃದ್ಧಿ ಇರುತ್ತದೆ. ತಂದೆಯ ಸ್ವಂತ ವ್ಯಾಪಾರದಲ್ಲಿ ಪಾಲ್ಗೊಳ್ಳುವ ಅವಕಾಶ ಒದಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕುಟುಂಬ ಸದಸ್ಯರೊಡನೆ ವಾಗ್ವಾದ ಮಾಡಿ ಎಲ್ಲರ ಬೇಸರಕ್ಕೆ ಕಾರಣರಾಗುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಗಾಯಗಳಾಗಬಹುದು ಎಚ್ಚರ ವಹಿಸಿರಿ. ವಿದೇಶಕ್ಕೆ ಔಷಧಿಯನ್ನು ರಫ್ತು ಮಾಡುವವರ ವ್ಯವಹಾರಗಳು ವೃದ್ಧಿಸುತ್ತವೆ. ವ್ಯವಹಾರಗಳಲ್ಲಿ ಅನಿರೀಕ್ಷಿತ ತಿರುವುಗಳು ಬಂದು ಸ್ವಲ್ಪ ಮಟ್ಟಿನ ಹಿನ್ನಡೆಯನ್ನು ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಧಾರ್ಮಿಕ ವಿಚಾರಗಳಲ್ಲಿ ಹೆಚ್ಚು ಆಸಕ್ತಿ ಮೂಡಿ ದೇವರ ಬಗ್ಗೆ ಒಲವು ಹೆಚ್ಚುವುದು. ಕ್ರೀಡಾ ಪಟುಗಳಿಗೆ ಉತ್ತಮ ಭವಿಷ್ಯ ದೊರೆಯುವ ಸಂದರ್ಭವಿದೆ. ಅಪರೂಪದ ಅವಕಾಶಗಳನ್ನು ಅನುಕೂಲಕ್ಕೆ ತಕ್ಕಂತೆ ಹೊಂದಿಸಿಕೊಂಡಲ್ಲಿ ಗೆಲುವು ನಿಮ್ಮದಾಗುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಮುಂದಾಳತ್ವದ ಬಗ್ಗೆ ಎಲ್ಲರಿಂದ ಪ್ರಶಂಸೆಯ ಮಾತುಗಳು ಕೇಳಿಬರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಕಾಣುವ ಸಾಧ್ಯತೆ ಇದೆ. ವಾಹನ ಖರೀದಿಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರುವಿರಿ. ಪ್ರತಿಸ್ಪರ್ಧಿಗಳ ಸವಾಲನ್ನು ಸರಿಯಾಗಿ ಅವಲೋಕಿಸಿ ಎದುರುತ್ತರ ಕೊಡುವುದು ಉತ್ತಮ. ಹಣಕಾಸಿನ ವಿಚಾರದಲ್ಲಿ ಹೆಚ್ಚು ಜಾಗರೂಕತೆಯಿಂದ ಇರುವುದು ಖಂಡಿತ ಉತ್ತಮ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲಸಕಾರ್ಯಗಳಲ್ಲಿ ಹೊಸ ಉತ್ಸಾಹವನ್ನು ಕಾಣಬಹುದು. ರಾಜಕಾರಣಿಗಳು ತಮ್ಮ ಸ್ಥಾನಮಾನಕ್ಕಾಗಿ ಹಿರಿಯ ನಾಯಕರನ್ನು ಓಲೈಸುವರು. ದಿಢೀರ್ ನಿರ್ಧಾರಗಳಿಂದ ಕೆಲವು ಕೆಲಸಗಳು ನಿಧಾನವಾಗಬಹುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಸ್ತ್ರೀಯರು ಹೊಂದಿರುವ ಆಸ್ತಿಗಳ ಮೇಲೆ ತಕರಾರು ಬರಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಕುಟುಂಬದವರೊಡನೆ ಧಾರ್ಮಿಕ ಸ್ಥಳಗಳನ್ನು ನೋಡುವ ಯೋಗವಿದೆ. ದೈನಂದಿನ ವ್ಯವಹಾರಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ನಿಮ್ಮ ವ್ಯವಹಾರಗಳ ಗುಟ್ಟನ್ನು ಯಾರಿಗೂ ಹೇಳದಿರುವುದು ಬಹಳ ಉತ್ತಮ. ಸದ್ಯದಲ್ಲಿ ದೊಡ್ಡಮಟ್ಟದ ಹೂಡಿಕೆಗಳನ್ನು ಮಾಡದಿರುವುದು ಒಳಿತು. ವ್ಯವಹಾರದ ನಿಮಿತ್ತ ದೂರದ ಪ್ರದೇಶಗಳಿಗೆ ಹೋಗಿಬರುವಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸ್ವಯಂ ಉದ್ಯೋಗ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಕೆಲಸ ಕಾರ್ಯಗಳಲ್ಲಿ ಅಸಡ್ಡೆ ತೋರುವ ನೌಕರರು ಮೇಲಧಿಕಾರಿಗಳ ಅವಕೃಪೆಗೆ ಪಾತ್ರರಾಗುವ ಸಾಧ್ಯತೆ ಇದೆ. ಅನ್ಯರ ಅನಪೇಕ್ಷಿತ ಹಸ್ತಕ್ಷೇಪದಿಂದ ನಿಮ್ಮ ವ್ಯವಹಾರಗಳಲ್ಲಿ ವ್ಯತ್ಯಾಸ ಆಗಬಹುದು. ಯಾಂತ್ರಿಕ ತರಬೇತಿಯನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅತ್ಯಂತ ಮಹತ್ವದ ಕಾಲವಾಗಿರುತ್ತದೆ.

ಪದಬಂಧ 2742



ಮೇಲಿನಿಂದ ಕೆಳಕ್ಕೆ

1. ಪಾಯಸದ ಸಿಹಿಗೆ ಸಮನಾದ ಕೌಸಲ್ಯಾತ್ಮಜನ ಹೆಸರು 4
2. ಇವರು ಭಕ್ಷಕರಲ್ಲ ಉಳಿಸುವ ಕೆಲಸ ಮಾಡುವವರು 4
3. ಮೂಡಣ ದಿಕ್ಕಿನಲ್ಲಿ ಹುಟ್ಟಿದ ತಾತ, ಮುತ್ತಾತ ಮತ್ತವರ ತಾತ 3
5. ಏನೋ ಧನ್ಯಳೋ... ವಿರಳವಾದ ವಿಷ್ಣು ಪತ್ನಿ 3
7. ಭೂಮಿಯನ್ನು ಕಕ್ಷೆಯಲ್ಲಿ ನಿಲ್ಲಿಸಿದ ಸೂಕರಾವತಾರ ಆರಂಭ ದೀರ್ಘ 3
9. ಆಕಾಶದ ತಾರೆಗಳು ಸೇರಿದ ಗುಂಪು 5
11. ರಾಜಕೀಯ ಪ್ರಭಾವಲಯದಲ್ಲಿ ಆಗಾಗ್ಗೆ ಆಗುವ ಭೂಮಿಯ ಸ್ವಾಹಾ 5
12. ಸಲದಲ್ಲಿ ಎಲ್ಲವೂ ಸೇರಿದೆ 3
13. ಸರಸದಿಂದ ಆಗುವ ಹುಟ್ಟು 3
17. ಟಾಕೀ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರ ಕೆಳಗಿನಿಂದ ಮೇಲಕ್ಕೆ 3
18. ಸುವ್ವೀ ಸುವ್ವೀ ಹಾಡು ಅಲೆಯಲ್ಲಿ ಅಂತ್ಯ 3
19. ಕಿವಿಗೆ ಮಧುರವೆನಿಸುವ ಹಕ್ಕಿಗಳ ಚಿಲಿಪಿಲಿ 4
20. ಗೋವು ಮತ್ತದರ ಕೂಸು 4
21. ಅಂದವೆನಿಸುವ ಗುಣ ಸ್ವಭಾವ 3

ಎಡದಿಂದ ಬಲಕ್ಕೆ

1. ಹದಿನಾರು ಸೇವೆಗಳಲ್ಲಿ ಅರಸನಿಗೆ ಸೂಕ್ತವಾದದ್ದು 5
3. ಸೂರ್ಯೋದಯದ ದಿಕ್ಕಿನಿಂದ ಬಂದ ಹಿಂದಿನ ಜೀವನಾವಸ್ಥೆ 4
4. ನಿಮಿಷದ ಒಂದು ಭಾಗದ ಸಮಯ 4
6. ಹೆಸರನ್ನು ಸೂಚಿಸುವ ಪದ 5
8. ಬಹುಸಂಖ್ಯೆಯಲ್ಲಿ ಸೇರಿದ ಮಂದಿ 4
10. ಎಲ್ಲರೂ ಮಣ್ಣಾಗುವ ಮೃತ್ಯುಂಜಯನ ನೆಲ 4
12. ಜೊತೆಯಲ್ಲೇ ಹುಟ್ಟಿದ ಕೃತಕವಲ್ಲದ ಸ್ವಾಭಾವಿಕ ಸ್ಥಿತಿ 3
14. ಮೂರು ಕಾಲಕ್ಕೂ ಯಜಮಾನನಾಗಿರುವ ಮೃತ್ಯುಂಜಯ 4
15. ಪ್ರಾಕಾರದ ಮಧ್ಯಭಾಗದಲ್ಲಿರುವ ಸ್ತಂಭ 4
16. ಹಿಂದಿಯವರ ಬೆಳ್ಳುಳ್ಳಿ 3
18. ಸೀತೆಯ ಒಳ್ಳೆಯ ತಂದೆ 4
20. ಅವುಗಳಲ್ಲಿ ಒಂದಷ್ಟು ಇವುಗಳಲ್ಲಿ ಒಂದಿಷ್ಟು 4
22. ಹಣ ಹೊಡೆಯುವುದಕ್ಕೆ ಹೀಗೊಂದು ಮಾತು 5
23. ಯಾವಾಗಲೂ ದುಡ್ಡನ್ನೇ ಎಣಿಸುವ ಆಳು 4
24. ಮಾಡುವುದನ್ನು ತಡೆಯುವುದಕ್ಕೆ ಹಾಕುವ ಅಂಕುಶ 4
25. ವಯಸ್ಸಿನಲ್ಲಿ ಪ್ರಪಿತಾಮಹರಂತೆ ಹಿರಿಯರು 5

ಪದಬಂಧ ಉತ್ತರ -2741

ಮೇಲಿಂದ ಕೆಳಕ್ಕೆ

1.ಅನಂತ 2.ವಸಡು 3.ಹಸನ 4.ತ್ರಿಜಾತಿ 7.ಕಾನಡ 9.ವರ್ಣಸಂಕರ 10.ಕಲಾಪ 11.ಕಪಟಧ್ವನಿ 13.ನಿರ್ವಾಣ 17.ಜೋಗುಳ 18. ಜಟಕ 19.ತವಕ 20.ತಮಸಾ 21.ದಿನಾಂಕ

ಎಡದಿಂದ ಬಲಕ್ಕೆ

1. ಅಸಂಭವ 3.ಹಗಲುರಾತ್ರಿ 5.ಸಮಂಜಸ 6.ತಲಕಾಡು 8.ನವದಂಪತಿ 10.ಕನ್ನಡಕ 12.ಸಂಜೀವಿನಿ 14.ಪಠ್ಯಪುಸ್ತಕ 15.ಪರದಾಟ 16.ರಜೋಗುಣ 18.ಜನಜನಿತ 20.ತಳಹದಿ 22.ವನಸುಮ 23.ಕಪಿನಾಯಕ 24.ಸಾಮುದ್ರಿಕ

ಮಹಿಳಾ ರಾಜಕಾರಣಿ, ಒಗ್ಗರಣೆಯಲ್ಲಿ ಬಳಸಿ ಬಿಸಾಡುವ ಕರಿಬೇವಿನಂತಲ್ಲ

ನಾಡಿನ ಪ್ರಮುಖ ಮಹಿಳಾ ರಾಜಕಾರಣಿಗಳಲ್ಲಿ ಒಬ್ಬರಾದ ಮೋಟಮ್ಮ ಮಹಿಳಾ ಸಬಲೀಕರಣ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಕೊಂಡವರು. ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಶಾಸಕಿಯಾಗಿ, ಸಚಿವೆಯಾಗಿ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕಿಯಾಗಿ, ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷೆಯಾಗಿ ಹಲವು ಜನಪರ ಕಾರ್ಯಗಳಲ್ಲಿ ಗುರುತಿಸಿಕೊಂಡವರು. ಕೂಲಿ ಕಾರ್ಮಿಕರ ಕುಟುಂಬದಲ್ಲಿ ಜನಿಸಿ, ಕಷ್ಟಕಾರ್ಪಣ್ಯಗಳನ್ನು ಮೆಟ್ಟಿ ನಿಂತು, ದಲಿತ ಅಸ್ಮಿತೆಯ ಪ್ರತಿರೂಪವಾಗಿ ಬೆಳೆದುನಿಂತವರು. ನೇರ ಹಾಗೂ ನಿಷ್ಠುರ ನಡೆನುಡಿಗೆ ಹೆಸರಾದ ಅವರ ಆತ್ಮಕಥನ 'ಬಿದಿರು ನೀನ್ಯಾರಿಗಲ್ಲದವಳು' ಶನಿವಾರ ಲೋಕಾರ್ಪಣೆಗೊಂಡಿದೆ. ಈ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ

ನೀಳಾ ಎಂ.ಎಚ್.

ಸಂದರ್ಶನ

● ರಾಜಕಾರಣಿಗಳು ಜನರ ಅನಾದರಕ್ಕೆ ಗುರಿಯಾಗಿರುವ ಈ ಹೊತ್ತಿನಲ್ಲಿ, ನಿಮ್ಮ ಪುಸ್ತಕ ನೀಡುವ ಪ್ರಮುಖ ಸಂದೇಶ ಏನು?

ರಾಜಕಾರಣಿಯಾಗಿ ನನ್ನದು ಸಿಹಿಕಹಿಯ ಮಿಶ್ರ ಅನುಭವ. ರಾಜಕೀಯದ ಗಂಧಗಾಳಿಯೇ ಇರದಿದ್ದ ನನ್ನನ್ನು ಸಬ್ ರಿಜಿಸ್ಟ್ರಾರ್ ಕೆಲಸದಿಂದ ಬಿಡಿಸಿ ಒತ್ತಾಯಪೂರ್ವಕವಾಗಿ ರಾಜಕೀಯಕ್ಕೆ ಕರೆತಂದವರು ಡಿ.ಬಿ.ಚಂದ್ರೇಗೌಡರು. ಅದಾದ ಕೆಲವೇ ವರ್ಷಗಳಲ್ಲಿ ಅವರು ದೇವರಾಜ ಅರಸು ಅವರೊಂದಿಗೆ ಗುರುತಿಸಿಕೊಂಡು ಕಾಂಗ್ರೆಸ್ (ಐ) ಪಕ್ಷವನ್ನೇ ತೊರೆದರು. ನಾನು ಇಂದಿರಾ ಕಾಂಗ್ರೆಸ್‌ನಲ್ಲಿಯೇ ಉಳಿದೆ. ಹೀಗಾಗಿ ರಾಜಕೀಯ ಮಾರ್ಗದರ್ಶಕರೇ ಇಲ್ಲದೆ 'ನಾಯಿ ಹಡೆದು ನಾಡ ಮೇಲೆ ಬಿಸಾಡಿದಂತೆ' ದಿಕ್ಕೇ ತೋಚದಂತಾಯಿತು ನನ್ನ ಸ್ಥಿತಿ. ಆದರೂ ಎದೆಗುಂದದೆ ಜನಪರ ಕಾರ್ಯಗಳನ್ನೇ ನೆಚ್ಚಿ ರಾಜಕೀಯ ಗರಡಿಯಲ್ಲಿ ಸೆಣಸಿದೆ. ಅಂತಹ ಅನುಭವಗಳ ಮೂಸೆಯಿಂದ ಬಂದಿರುವ ನನ್ನ ಆತ್ಮಕಥನ ಮುಂದಿನ ಪೀಳಿಗೆಯ ರಾಜಕಾರಣಿಗಳಿಗೆ, ಅದರಲ್ಲೂ ಮಹಿಳಾ ರಾಜಕಾರಣಿಯರಿಗೆ ಒಂದು ಗೈಡ್ ಆಗಬೇಕು. ಅದನ್ನು ಓದಿದ ಮತದಾರರಿಗೂ ರಾಜಕಾರಣದ ವಸ್ತುಸ್ಥಿತಿ ಮನವರಿಕೆ ಆಗಬೇಕು.

ಇಲ್ಲಿ ನಾನು ಯಾವುದನ್ನೂ ಮುಚ್ಚಿಟ್ಟಿಲ್ಲ. ನಾನು ಮನೆ ಕಟ್ಟಿದ್ದು ಎಸ್.ಎಂ.ಕೃಷ್ಣ ಅವರ ಸಹಾಯದಿಂದ ಎಂಬುದನ್ನೂ ನೇರವಾಗಿ ಹೇಳಿದ್ದೇನೆ. ಆಗಿನ ರಾಜಕೀಯಕ್ಕೂ ಈಗಿನ ರಾಜಕೀಯಕ್ಕೂ ಅಜಗಜಾಂತರ ಇದೆ ಎನ್ನುವುದು ಸಹ ಎಲ್ಲರಿಗೂ ತಿಳಿಯಬೇಕು. ನನ್ನ ಹೋರಾಟದ ಬದುಕನ್ನು ಹತ್ತಿರದಿಂದ ಕಂಡ ಹಿ.ಶಿ.ರಾಮಚಂದ್ರೇಗೌಡ ಅವರಂತಹ ಹಿತೈಷಿಗಳು ಈ ಬರವಣಿಗೆಗೆ ಒತ್ತಾಸೆಯಾಗಿ ನಿಂತರು.

● ಪಕ್ಷದೊಳಗಿನ ಭಿನ್ನಮತ ಶಮನಕ್ಕೆ ಮುಖಂಡರ ನಡುವೆ ಸಂವಾದ ಏರ್ಪಡಿಸುವಂತೆ 2002ರಲ್ಲಿ ಎಐಸಿಸಿ ಸದಸ್ಯೆಯಾಗಿದ್ದಾಗಲೇ ಸೋನಿಯಾ ಗಾಂಧಿ ಅವರಿಗೆ ಸಲಹೆ ಕೊಟ್ಟಿದ್ದಾಗಿ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದೀರಿ. ಆದರೆ ಈಚೆಗೆ ಅಂಥದ್ದೊಂದು ಪ್ರಯತ್ನ ನಡೆದಂತಿಲ್ಲ?

ಪರಸ್ಪರ ಕಾಲೆಳೆಯುವ ಗುಣ ನಮ್ಮಲ್ಲಿ ಮೊದಲಿನಿಂದಲೂ ಇದ್ದದ್ದೇ. ಪುಸ್ತಕ ಬಿಡುಗಡೆ ಆಹ್ವಾನಪತ್ರಿಕೆ ಕೊಡಲು ಮೊನ್ನೆ ಪರಿಚಿತರೊಬ್ಬರ ಮನೆಗೆ ಹೋಗಿದ್ದೆ. 'ಮೋಟಮ್ಮನವರೇ ಎಲ್ಲ ಸರಿ ಕಣ್ರಿ, ಕಾಂಗ್ರೆಸ್‌ನಲ್ಲೇ ಎಲ್ಲಾ ಸರಿ ಇಲ್ಲವಲ್ಲ' ಎಂದರು. ಈಗಿನ ಮುಖಂಡರು ಹುಚ್ಚುಚ್ಚಾಗಿ ಹೇಳಿಕೆ ಕೊಡುತ್ತಿರುವುದರಲ್ಲಿ ಏನಾದರೂ ಅರ್ಥವಿದೆಯೇ? ಹಿಂದೆಯೂ ಗುಂಪುಗಾರಿಕೆ ಇತ್ತು. ದೇವರಾಜ ಅರಸು ಮತ್ತು ಕೆಲವರು ಒಂದು ಗುಂಪಾದರೆ, ಅಜೀಜ್ ಸೇಠ್, ಕೆ.ಎಚ್.ಪಾಟೀಲ, ಬಸವಲಿಂಗಪ್ಪ ಅವರದ್ದು ಇನ್ನೊಂದು ಗುಂಪಾಗಿತ್ತು. ಆದರೆ ಅದೆಲ್ಲಾ ಹೊರಗಿನವರಿಗೆ ಗೊತ್ತೇ ಆಗುತ್ತಿರಲಿಲ್ಲ. ಈಗ ಬಹಿರಂಗವಾಗಿಯೇ ಕಾಣಿಸಿಕೊಳ್ಳುತ್ತಿದೆ. ಇಂಥ ಸ್ಥಿತಿ ಬಿಜೆಪಿಯಲ್ಲೂ ಇದೆ. ಮೊನ್ನೆ ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಶಿಬಿರದಲ್ಲಿ ಎಲ್ಲರೂ ಒಟ್ಟಾಗಿ, ಸಾಮೂಹಿಕ ನಾಯಕತ್ವದಡಿ ಚುನಾವಣೆ ಎದುರಿಸುವ ತೀರ್ಮಾನ ಮಾಡಿರುವುದು ಒಳ್ಳೆಯ ಬೆಳವಣಿಗೆ.

● ಇಂದಿರಾ ಗಾಂಧಿ ನಿಮ್ಮ ಮದುವೆಯಲ್ಲಿ ಪಾಲ್ಗೊಂಡಿದ್ದ ವಿಷಯಕ್ಕೆ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದ್ದೀರಿ...

ಹೌದು, ಅದೊಂದು ದಾಖಲೆ ಸಹ. ಬೆಂಗಳೂರಿಗೆ ಬಂದಿದ್ದ ಇಂದಿರಾ ಅವರನ್ನು ಖುದ್ದಾಗಿ ಮದುವೆಗೆ ಆಮಂತ್ರಿಸಿದೆ. 'ಲೆಟ್ ಮಿ ಸೀ ಮೋಟಮ್ಮಾಜಿ, ಐ ಹ್ಯಾವ್ ಲಾಟ್ ಆಫ್ ವರ್ಕ್ ಇನ್ ಡೆಲ್ಲಿ' ಅಂದರು. 'ಓನ್ಲಿ ಪೂರ್ ಪೀಪಲ್ ವಿಲ್ ಕಮ್ ಟು ಮೈ ಮ್ಯಾರೇಜ್. ನೊ ಕಾರ್ ಓನಿಂಗ್ ಪೀಪಲ್ ವಿಲ್ ಕಮ್. ದೆ ಆಲ್ ಆರ್ ಯುವರ್ ಆರ್ಡೆಂಟ್ ಫ್ಯಾನ್ಸ್. ಆಲ್ ಆಫ್ ದೆಮ್ ವಿಲ್ ಗೆಟ್ ಎ ಚಾನ್ಸ್ ಟು ಸೀ ಯು ಮೇಡಂ' ಅಂದೆ. 'ಓಕೆ ಐ ವಿಲ್ ಟ್ರೈ' ಅಂದು ಮುಗುಳ್ನಕ್ಕರು. ಅವರು ಮದುವೆಗೆ ಬರುತ್ತಿದ್ದಾರೆ ಎಂಬುದನ್ನು ಗುಂಡೂರಾಯರು ಖಚಿತಪಡಿಸಿದಾಗ ನನ್ನಲ್ಲಿ ಖುಷಿಗಿಂತ ಅವರನ್ನು ಯಾರು, ಹೇಗೆ ನೋಡಿಕೊಳ್ಳುವುದು ಎಂಬ ಆತಂಕವೇ ಹೆಚ್ಚಾಗಿತ್ತು. ಆದರೆ ಗುಂಡೂರಾಯರು 'ನಾವೆಲ್ಲ ಇದ್ದೇವೆ' ಎಂದು ಅಭಯ ನೀಡಿದರು. ಕೊನೆಗೂ ಮೇಡಂ ಮದುವೆಗೆ ಬಂದೇ ಬಂದರು. ಕಾಟನ್ ಖಾದಿ ಸೀರೆಯುಟ್ಟು ಎಷ್ಟೊಂದು ಸರಳವಾಗಿ ಬಂದಿದ್ದರು. ಬೆಳಿಗ್ಗೆ 11ರಿಂದ ಸಂಜೆ 4 ಗಂಟೆಯವರೆಗೂ ಮದುವೆ ಮಂಟಪದಲ್ಲೇ ಇದ್ದರು. ಎಲ್ಲರ ಜೊತೆ ಮರದ ಬೆಂಚಿನ ಮೇಲೆ ಕೂತು ಬಾಳೆಲೆಯಲ್ಲೇ ಉಂಡರು. ಮದುವೆ ಮುಗಿದು ನಾವೆಲ್ಲ ಗಂಡಿನ ಮನೆಗೆ ಹೊರಟು ನಿಂತಾಗ, ಮುಖ್ಯಮಂತ್ರಿ ದೇವರಾಜ ಅರಸು ಅವರು ಮದುವೆಗೆ ಬರುತ್ತಿದ್ದಾರೆ ಎಂಬ ಸುದ್ದಿ ಬಂತು. ಆಗ ದಿಢೀರೆಂದು ಗಡಬಡಿಸಿ ನಮ್ಮ ಆರತಕ್ಷತೆಗೆ ಸಿದ್ಧತೆ ನಡೆಸಲಾಯಿತು. ಆವರೆಗೂ ಈ ಇಬ್ಬರು ನಾಯಕರ ನಡುವೆ ಇದ್ದ ಮುಸುಕಿನ ಗುದ್ದಾಟ ನನ್ನ ಮದುವೆಯ ದಿನವಾದ 1979ರ ಜೂನ್ 4ರಂದು ಬಹಿರಂಗಗೊಂಡಿತೆಂದು ರಾಜಕೀಯವಾಗಿ ಉಲ್ಲೇಖಿಸಲಾಗುತ್ತದೆ.

● ಒಬ್ಬ ದಲಿತ ನಾಯಕಿಯಾಗಿ ಸಮಾಜ ನಿಮ್ಮನ್ನು ಸ್ವೀಕರಿಸಿದ ಬಗೆ ಹೇಗೆ?

ದಲಿತರ ಮೇಲಿನ ದೌರ್ಜನ್ಯಕ್ಕೆ ಕೊನೆಯೇ ಇಲ್ಲದಂತಾಗಿದೆ. ಹುತ್ತದಿಂದ ಹಾವನ್ನು ಹೊರಗೆಳೆಯಬೇಕಾದರೆ ಹೊಗೆ ಅಥವಾ ನೀರು ಹಾಕಬೇಕು, ಆಗ ಉಸಿರುಗಟ್ಟಿದಂತಾಗಿ ಅದು ಹೊರಬರುತ್ತದೆ. ಅಂತಹ ಕಠಿಣ ಕಾಯ್ದೆಯನ್ನು ನಾವೆಲ್ಲಿ ತಂದಿದ್ದೇವೆ? ಕೆಲವು ಕಾಯ್ದೆಗಳು ಇವೆಯಾದರೂ ದೌರ್ಜನ್ಯ ಎಸಗಿದ ಎಷ್ಟು ಮಂದಿ ಶಿಕ್ಷೆಗೆ ಒಳಗಾಗಿದ್ದಾರೆ? ವೈಯಕ್ತಿಕವಾಗಿ ನನಗೆ ದೌರ್ಜನ್ಯದ ಅನುಭವ ಆಗಿಲ್ಲ. ನನ್ನ ಬೆಳವಣಿಗೆಯಲ್ಲಿ ಹೆಚ್ಚು ಒತ್ತಾಸೆಯಾಗಿ ನಿಂತವರು ಸವರ್ಣೀಯರು. ಅದರ ನಡುವೆ ಅಸ್ಪೃಶ್ಯತೆಯನ್ನೂ ಅನುಭವಿಸಿದ್ದೇನೆ. ರಾಜಕೀಯ ಪ್ರವೇಶಕ್ಕೆ ಮುನ್ನ ಬಿಡದಿ ಸಮೀಪದ ಶಾಲೆಯೊಂದಕ್ಕೆ ಶಿಕ್ಷಕಿಯಾಗಿ ಸೇರಿದಾಗ, ಬಾಡಿಗೆಗೆ ಮನೆ ಕೊಡಲು ಒಪ್ಪಿದ್ದವರು ನಾನು ದಲಿತೆ ಎಂದು ತಿಳಿದು ಕೊನೇ ಕ್ಷಣದಲ್ಲಿ ಕೊಡಲು ನಿರಾಕರಿಸಿದರು. ಆದರೆ ಇಷ್ಟು ವರ್ಷಗಳಾದರೂ ಪರಿಸ್ಥಿತಿ ಸುಧಾರಿಸಿಲ್ಲ ಎಂಬುದು ಇನ್ನಷ್ಟು ನೋವು ಕೊಡುವ ಸಂಗತಿ. ನನ್ನ ಮಗಳು ನಯನಾ ಇತ್ತೀಚೆಗೆ ಮೂಡಿಗೆರೆಯಲ್ಲಿ ಬಾಡಿಗೆ ಮನೆ ಮಾಡಲು ಮುಂದಾದಾಗ, ಆಮೇಲೆ ತಿಳಿಸುತ್ತೇವೆ ಅಂದವರು ಏನೇನೋ ಸಬೂಬು ಹೇಳಿ ಕೊನೆಗೂ ಕೊಡಲೇ ಇಲ್ಲ. ಅದಕ್ಕಾಗಿ ಹೋದ ವರ್ಷ ಅಲ್ಲಿ ಹೊಸ ಮನೆಯನ್ನೇ ಕಟ್ಟಬೇಕಾಯಿತು.

● ರಾಜಕಾರಣವೆಂದರೆ ಹೂವಿನ ಹಾಸಿಗೆಯಲ್ಲ, ಅದರಲ್ಲೂ ಮಹಿಳಾ ರಾಜಕಾರಣಿಗೆ ಹೆಚ್ಚು ಕಷ್ಟ ಎಂದಿದ್ದೀರಿ. ಎಷ್ಟೆಲ್ಲ ಒಳ್ಳೆಯ ಸ್ಥಾನಮಾನಗಳನ್ನು ನಿರ್ವಹಿಸಿದ ಮೇಲೂ ಹೀಗೆ ಅನಿಸಿದ್ದೇಕೆ?

ಮಹಿಳೆಯರಿಗೆ ಎಂಥದ್ದೇ ಸ್ಥಾನಮಾನ ಸಿಕ್ಕಿದರೂ ಆಕೆಯನ್ನು ಎರಡನೇ ದರ್ಜೆಯವಳನ್ನಾಗಿಯೇ ನಮ್ಮ ಪುರುಷ ನಾಯಕರು ಕಾಣುತ್ತಾರೆ. ಎಲ್ಲೋ ಇಂದಿರಾ ಗಾಂಧಿ, ಸೋನಿಯಾ ಗಾಂಧಿ ಅಂಥವರ ನಾಯಕತ್ವವಷ್ಟೇ ಫಸ್ಟ್ ಕ್ಯಾಟಗರಿಯಲ್ಲಿ ಬರುತ್ತದೆ. ಅದೇ ನಮ್ಮಂಥವರಿಗೆ ಲೀಡರ್‌ಶಿಪ್ ಕೊಟ್ಟು ಪಕ್ಷ ನಡೆಸು ಎಂದು ಹೇಳುವಂಥ ಮಹನೀಯರು ಯಾರೂ ಇರುವುದಿಲ್ಲ. ರಾಜಕಾರಣದ ಇಚ್ಛಾಶಕ್ತಿ ಇದ್ದರೂ ನಮಗೆ ನಮ್ಮದೇ ಆದ ಆರ್ಥಿಕ ಮೂಲ ಇರುವುದಿಲ್ಲ. ಗಂಡ ಅಥವಾ ಯಾರೋ ಹಿತೈಷಿಗಳನ್ನೇ ಅವಲಂಬಿಸಬೇಕು. ಯಾವ ಗಂಡ ತಾನೇ ಹೆಂಡತಿಗಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಾನೆ?

ಪಕ್ಷದ ಸಂಘಟನೆಯಲ್ಲೂ ಹೆಣ್ಣುಮಕ್ಕಳಿಗೆ ತುಂಬಾ ಕಷ್ಟವೆನಿಸುವ ವಾತಾವರಣವೇ ಇದೆ. ಕಾರ್ಯಕರ್ತನೊಬ್ಬ ಅಸಮಾಧಾನಗೊಂಡಿದ್ದರೆ ಪುರುಷ ರಾಜಕಾರಣಿ 'ಏನಣ್ಣ' ಎಂದು ಅವನ ಹೆಗಲ ಮೇಲೆ ಕೈ ಹಾಕಿ ಸಮಾಧಾನಪಡಿಸಿ, ಅವನಿಗೆ ಪೆಗ್ ಹಾಕಿಸಿ, ಊಟ ಕೊಡಿಸಿ ಕಳಿಸುತ್ತಾರೆ. ನಾವು ಹೀಗೆ ಯಾವುದರಲ್ಲಿ ಕಾಂಪ್ರಮೈಸ್ ಮಾಡಬೇಕು? ನಾವೇನಿದ್ದರೂ ನಮ್ಮ ಕಷ್ಟ ಸುಖಗಳನ್ನು ಹಾಸಿಗೆ, ದಿಂಬಿಗೇ ಹೇಳಿಕೊಳ್ಳಬೇಕಷ್ಟೆ. ದಿನವಿಡೀ ನಾವು ಜನರ ನಡುವೆ ಇರಬೇಕಾದವರು. ಎಷ್ಟೋ ಬಾರಿ ಗಂಡ, ಮಕ್ಕಳ ಬಗ್ಗೆ ಗಮನಹರಿಸಲು ಆಗುವುದಿಲ್ಲ. ಅದು ಒಳಗೊಳಗೇ ನಮ್ಮನ್ನು ಚುಚ್ಚುತ್ತಿರುತ್ತದೆ. ಅದೇ ಒಬ್ಬ ಪುರುಷ ರಾಜಕಾರಣಿಗೆ ಇಂತಹ ಚಿಂತೆಗಳೆಲ್ಲಾ ಇರುವುದಿಲ್ಲ. ವಿಧಾನಸಭೆ, ಲೋಕಸಭೆ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿ ಕಡ್ಡಾಯವಾಗಿ ಬರದಿದ್ದರೆ ನಾವು 'ಒಗ್ಗರಣೆಗೆ ಬಳಸಿ ಬಿಸಾಡುವ ಕರಿಬೇವಿನ ಸೊಪ್ಪಿನಂತೆ' ಆಗುತ್ತೇವೆ ಅಷ್ಟೆ. ನಮ್ಮ 28 ಜನ ಸಂಸದರಲ್ಲಿ ಈಗ ಶೋಭಾ ಬಿಟ್ಟರೆ ಬೇರೆ ಮಹಿಳೆ ಯಾರಿದ್ದಾರೆ? ಹಿಂದೆಯೂ ಚಂದ್ರಪ್ರಭಾ ಅರಸು, ತಾರಾದೇವಿ ಸೇರಿದಂತೆ ಆಗೊಬ್ಬರು ಈಗೊಬ್ಬರು ಇರುತ್ತಿದ್ದರು ಅಷ್ಟೆ.

● ಮತದಾರರ ಬಗ್ಗೆ ನೀವು ತೀವ್ರ ಹತಾಶೆಗೊಂಡಿರುವುದು ಬಹಳಷ್ಟು ಕಡೆ ವ್ಯಕ್ತವಾಗಿದೆ...

ಹಿಂದೆಲ್ಲ ಚುನಾವಣಾ ಪ್ರಚಾರಕ್ಕೆ ತೆರಳಿದಾಗ ಜನ ಸಾಮೂಹಿಕ ಬಳಕೆಯ ಸೌಲಭ್ಯಗಳಿಗೆ ಬೇಡಿಕೆ ಇಡುತ್ತಿದ್ದರು. ಈಗ ವೈಯಕ್ತಿಕ ಬೇಡಿಕೆಗಳಿಗೇ ಆದ್ಯತೆ. ಬಿಜೆಪಿಯವರು ಅಷ್ಟು ಕೊಟ್ರು, ಜೆಡಿಎಸ್‌ನವರು ಇಷ್ಟು ಕೊಟ್ರು, ನೀವೆಷ್ಟು ಕೊಡುತ್ತೀರಿ ಎಂದೆಲ್ಲ ನೇರವಾಗಿಯೇ ಕೇಳುತ್ತಾರೆ. ಹೀಗೆ ನಮ್ಮನ್ನು ಹರಾಜಿಗೆ ಇಟ್ಟಂತೆ ಕೇಳುವುದು ಯಾವ ಧರ್ಮ? ಮತದಾರರು ಮೊದಲು ಸರಿ ಹೋಗಬೇಕು. ದುಡ್ಡು ಕೊಟ್ಟಿದ್ದೀನಿ, ನೀವು ವೋಟು ಹಾಕಿದ್ದೀರಿ ಎಂಬ ಮನೋಭಾವ ಸಹಜವಾಗಿಯೇ ರಾಜಕಾರಣಿಗಳಲ್ಲಿ ಬರುತ್ತದೆ. ಚುನಾವಣಾ ಪ್ರಚಾರಕ್ಕೆ ಹೋದಾಗ ಕಾಸು ಕೊಡುತ್ತಾರೇನೋ ಎಂದು ಜನ ನಮ್ಮ ಕೈ ನೋಡುವುದು ಬಹಳ ಹಿಂಸೆ ಅನಿಸುತ್ತದೆ. ಹೀಗಾಗಿ ಎಷ್ಟೋ ಬಾರಿ ಚುನಾವಣಾ ರಾಜಕೀಯವೇ ಬೇಡ ಅನಿಸಿದ್ದಿದೆ. ಇಂಥ ಪರಿಸ್ಥಿತಿ ಸುಧಾರಿಸಬೇಕಾದರೆ ಚುನಾವಣೆಯನ್ನು ಸರ್ಕಾರವೇ ನಡೆಸಬೇಕು.

● ಪುತ್ರಿಯನ್ನು ರಾಜಕಾರಣಕ್ಕೆ ತರಲು ಪ್ರಯತ್ನಿಸುತ್ತಿದ್ದೀರಿ. ಕುಟುಂಬ ರಾಜಕಾರಣಕ್ಕೆ ಒತ್ತು ಕೊಟ್ಟಂತೆ ಆಗಲಿಲ್ಲವೇ?

ಕುಟುಂಬ ರಾಜಕಾರಣ ಎಲ್ಲಿ ಇಲ್ಲ? ದೇವೇಗೌಡರ ಕುಟುಂಬದಲ್ಲಿ ಇಲ್ಲವೇ? ಜಗದೀಶ ಶೆಟ್ಟರ್, ಯಡಿಯೂರಪ್ಪ ಅವರ ಮಕ್ಕಳೆಲ್ಲ ಬಂದಿದ್ದಾರೆ. ಮೋದಿ ಅವರಿಗೆ ಕುಟುಂಬ ಇದ್ದಿದ್ದರೆ ಅವರ ಮಗನೋ ಮಗಳೋ ಬರುತ್ತಿರಲಿಲ್ಲವೇ? ಅಮಿತ್ ಶಾ ಅವರ ಮಗ ರಾಜಕಾರಣ ಮಾಡುತ್ತಿಲ್ಲವೇ? ನನ್ನ ಮೂವರು ಮಕ್ಕಳಲ್ಲಿ ಗಂಡು ಮಕ್ಕಳಿಗೆ ರಾಜಕಾರಣದಲ್ಲಿ ಹೆಚ್ಚು ಆಸಕ್ತಿ ಇಲ್ಲ. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕಾನೂನು ಪದವಿ ಪಡೆದಿರುವ ಮಗಳಿಗೆ ಆಸಕ್ತಿ ಇದೆ. ಮಹಿಳಾ ಕಾಂಗ್ರೆಸ್ ಸೆಕ್ರೆಟರಿಯಾಗಿ ಬದ್ಧತೆಯಿಂದ ರಾಜಕಾರಣದಲ್ಲಿ ತೊಡಗಿಕೊಂಡಿದ್ದಾಳೆ. ನಾವು ರಾಜಕಾರಣದಲ್ಲಿ ಸಕ್ರಿಯರಾಗುವಲ್ಲಿ ಮನೆಯವರ ತ್ಯಾಗವೂ ಇರುತ್ತದಲ್ಲವೇ? ಹಾಗಿದ್ದಮೇಲೆ ಅವರು ಯಾಕೆ ರಾಜಕಾರಣಕ್ಕೆ ಬರಬಾರದು?

(ಬಿದಿರು ನೀನ್ಯಾರಿಗಲ್ಲದವಳು ಕೃತಿಯನ್ನು ವಿಕಾಸ ಪ್ರಕಾಶನ ಪ್ರಕಟಿಸಿದೆ. ಸಂಪರ್ಕ: 9900095204)

ನಡುವಯದ ನೆರಳಲ್ಲಿ ಅರಳಿದ ಲಿಲ್ಲಿ ಹೂಗಳು

ಪದ್ಮನಾಭ ಭಟ್

ವಿಮರ್ಶೆ



ಪು: 84 ₹135

ಲಾರ್ಡ್ ಕಾರ್ನ್‌ವಾಲೀಸ್ ಮತ್ತು ಕ್ವೀನ್ ಎಲಿಜಬೆತ್
ಲೇ: ಅಬ್ದುಲ್ ರಶೀದ್
ಪ್ರ: ಬಹುವಚನ
ದೂ: 6362588659

ಬಿಳಿಯ ಹತ್ತಿಯಂಥ ಮೋಡಗಳನ್ನು ಹಿಂಜಿದ ಜಾಗದಲ್ಲಷ್ಟೇ ಕಾಣುವ ಆಕಾಶದ ನೀಲಿ ಬಣ್ಣ, ದೂರದಿಗಂತದ ವಿಷಾದವೆಲ್ಲ ಇಷ್ಟಿಷ್ಟೇ ಉಮ್ಮಳಿಸಿದಂತೆ ಒಂದರ ಹಿಂದೆ ಇನ್ನೊಂದರಂತೆ ಎದ್ದೆದ್ದು ಬರುತ್ತಿರುವ ಬೆಳ್ನೊರೆಯ ಕಿರುತೆರೆಗಳು, ಆ ಆಕಾಶ ಮತ್ತು ಸಮುದ್ರದ ಅಗಾಧತೆಯನ್ನು ಅಣಕಿಸುವ ಹಾಗೆ ಧೀಮಂತ ಮುದ್ರೆಹೊತ್ತು ನಿಂತಿರುವ ಹಾಳು ಹಡಗು ಮತ್ತದರ ಮೇಲೆ ಬರೆದಿರುವ ಅಸ್ಪಷ್ಟ ಅಕ್ಷರಗಳು, ವಾಸ್ತವದಿಂದ ಎರಡೇ ಇಂಚು ಆಚೆಗೆ ಚಾಚಿಕೊಂಡಿರುವ ಆ ಪರಿಸರದಲ್ಲಿ, ದಿಗ್ಭ್ರಾಂತನಾಗಿ ನಿಂತಂತಿರುವ ಲೇಖಕರ ಚಿತ್ರ, ಅವರು ಏನನ್ನು ದಿಟ್ಟಿಸಿ ನೋಡುತ್ತಿರಬಹುದು? ಆ ತನ್ಮಯ ನೋಟದ ತುದಿಯಲ್ಲಿ ಅವರದ್ದೇ ಬಾಲ್ಯ, ಯೌವನದ ದಿನಗಳು ಬಗೆಬಗೆ ವೇಷ ತೊಟ್ಟು ಪಕಳೆ ಒಡೆಯುತ್ತಿರಬಹುದೇ? – ಅಬ್ದುಲ್ ರಶೀದ್ ಅವರ 'ಲಾರ್ಡ್ ಕಾರ್ನ್‌ವಾಲೀಸ್ ಮತ್ತು ಕ್ವೀನ್' ಕಥಾಸಂಕಲನದ ಮುಖಪುಟವು ಒಳಪುಟಗಳಲ್ಲಿ ತೆರೆದುಕೊಳ್ಳುವ ಕಥಾಜಗತ್ತಿನ ವಿಸ್ತರಣೆಯಾಗಿಯೇ ಕಾಣಿಸುತ್ತದೆ. ಹಡಗಿನ ಒಡಲಿಗೆ ತುಕ್ಕು ಹಿಡಿಸಿ ಪುಡಿಗಟ್ಟಿಸುವ ಉಪ್ಪುನೀರೇ ಅದರ ಗಾಯವನ್ನು ನೇವರಿಸುವ ಆಪ್ತಸಂಗಾತವೂ ಆಗಿದೆ. ಬದುಕಿನ ಈ ವಿಚಿತ್ರವನ್ನೂ, ವೈರುಧ್ಯವನ್ನೂ, ವಿಷಾದವನ್ನೂ, ಆನಂದವನ್ನೂ ರಶೀದರ ಕಥೆಗಳು ಹೂ ಅರಳಿದಷ್ಟು ಸಹಜವಾಗಿ ಹಿಡಿದಿಡುತ್ತವೆ.

ಬದುಕಿನ ಬರ್ಬರತೆಯನ್ನು ಹಾಗ್ಹಾಗೇ ಕಾಣಿಸುವುದು ಒಂದು ದಾರಿ. ಅದನ್ನು ಅದರ ಪಾಡಿಗೆ ಬಿಟ್ಟು, ಅದೇ ಬದುಕಿನ ಇನ್ನೊಂದು ಮಗ್ಗುಲಿನ ಸೌಂದರ್ಯವನ್ನೂ, ಆಳದಲ್ಲಿನ ವಿಷಾದವನ್ನೂ ಕಾಣಿಸುತ್ತ ನಮ್ಮನ್ನು ಮೆತ್ತಗಾಗಿಸುವುದು, ಸಡಿಲಗೊಳಿಸುವುದು ಮತ್ತೊಂದು ಬಗೆ. ರಶೀದರ ಕಥೆಗಳದ್ದು ಎರಡನೇ ದಾರಿ.

ಸಾಹಿತ್ಯದಿಂದ ಇಂಥದ್ದೇ ಬೇಕು ಎಂಬ ಅಪೇಕ್ಷೆಯನ್ನು ಹೊತ್ತು ಹೊರಟರೆ ಅವರ ಕಥೆಗಳು ನಮ್ಮನ್ನು 'ಕುರೆ' (ಮಂಗ) ಮಾಡಿ ವಾಪಸ್ಸು ಕಳಿಸುತ್ತವೆ. ಏನಿದೆಯೋ ನೋಡೋಣ ಎಂಬ ಕುತೂಹಲವನ್ನಷ್ಟೇ ಇಟ್ಟುಕೊಂಡು ಹೋದರೆ ಬೆಟ್ಟದ ಬುಡದ ನೆರಳಲ್ಲಿ ತನ್ನಷ್ಟಕ್ಕೆ ತಾನು ಅರಳಿ, ಬೆಳಗಿ, ಬಾಡಿ, ಅಳಿದು ಹೋಗುವ ಹೂವಿನ ಬದುಕನ್ನು ವಿಸ್ಮಯ–ವಿಷಾದ ಭಾವದಲ್ಲಿ ಕಾಣಿಸುತ್ತದೆ. 'ಅರೆ, ಇದು ನಾವೂ ಒಳಗೊಳಗೆ ಬಯಸುತ್ತಿರುವ ಬದುಕೇ ಅಲ್ಲವೇ? ಎಲ್ಲ ಇಷ್ಟು ಸರಳವಿರುವಾಗ ನಾವೇಕೆ ಇಷ್ಟೊಂದು ಸರಪಳಿಗಳನ್ನು ಬಿಗಿದುಕೊಂಡು ಬಿಡಿಸಿಕೊಳ್ಳಲು ಹೆಣಗುತ್ತಿದ್ದೇವೆ?' ಎಂಬ ಅಚ್ಚರಿಗೆ ನೂಕುತ್ತದೆ.

ಸಂಕಲನದ ಐದೂ ಕಥೆಗಳಲ್ಲಿ, ನಿರೂಪಕ ನಡುವಯಸ್ಸಿನವನು. ಅವನ ನೋಟ ಮಾತ್ರ ಬಾಲ್ಯ, ಯೌವನದ ದಿನಗಳ ಕಡೆಗೆ ಹೊರಳಿಕೊಂಡಿದೆ. ಅವನನ್ನು ಇಲ್ಲಿಂದಲ್ಲಿಗೆ, ಅಲ್ಲಿಂದಿಲ್ಲಿಗೆ ಹೂವಿನೋಪಾದಿಯಲ್ಲಿ ಸುಗಮ ಸಂಚಾರ ಮಾಡಿಸಲು ಅವನದೇ ವಯಸ್ಸಿನ, ಪ್ರೇಯಸಿಯರಿದ್ದಾರೆ. ನಡುವಯಸ್ಸಿನವನೊಬ್ಬ, ತನ್ನನ್ನು ಬೇಟೆಯಾಡುತ್ತಿರುವ ಒಂಟಿತನದಿಂದ ಬಚಾವಾಗಲು ಹದಿವಯದ ಪೊದೆ ಹೊಕ್ಕಾಗ ಈ ಕಥೆಗಳು ಹುಟ್ಟಿಕೊಂಡಿವೆ! ಅಲ್ಲಿನ ಏದುಸಿರು, ಭಯ, ರೋಮಾಂಚನ, ಒಳಗೊಳಗೇ ಊಟೆಯೊಡೆಯುತ್ತಿರುವ ಖುಷಿ ಎಲ್ಲವೂ ಈ ಕಥೆಗಳಲ್ಲಿವೆ. ಮತ್ತದು ಎಷ್ಟು ಸಹಜವಾಗಿ ಮೈದಳೆದಿವೆಯೆಂದರೆ ಇಲ್ಲಿನ ಒಂದು ಕಥೆಯಲ್ಲಿಯೇ ಉಲ್ಲೇಖಿತವಾಗುವ ಲಿಲ್ಲಿ ಹೂಗಳನ್ನು ಮತ್ತೆ ಮತ್ತೆ ನೆನಪಿಸುವಷ್ಟು!

ಸಮಾಜ ಹೇರುವ ವ್ಯವಸ್ಥೆಯ ಚೌಕಟ್ಟಿಗೂ, ಮಾಪನಸಲಕರಣೆಗಳಿಗೂ ಸಿಗದ ಹಾಗೆ ಬೆಳೆಯುವ ಮನುಷ್ಯ ಸಂಬಂಧಗಳನ್ನು ಇಲ್ಲಿನ ಕಥೆಗಳು ತುಂಬ ಸಹಜವಾಗಿ ಚಿತ್ರಿಸುತ್ತವೆ; ಅಷ್ಟೇ ಸಹಜವಾಗಿ ಕಥೆ ಕಟ್ಟುವಿಕೆಯ ರೂಢಿಗತ ಮಾದರಿಗಳನ್ನೂ ಮುರಿಯುತ್ತವೆ.

ಇಲ್ಲಿನ ಬಹುತೇಕ ಕಥೆಗಳು ಘಟಿಸುವುದು ಭೂತಕಾಲದಲ್ಲಿ. ಹಾಗೆ ನೋಡಿದರೆ ಅವರ ಕಥೆಗಳಲ್ಲಿ ಹೆಚ್ಚಿಗೆ ಏನೂ ಘಟಿಸುವುದಿಲ್ಲ. 'ಲಾರ್ಡ್ ಕಾರ್ನ್‌ವಾಲೀಸ್...' ಕಥೆಯಲ್ಲಿ ಹೇಳಲು ಹೊರಟಿರುವುದು ಗಂಡೂ ಅಲ್ಲ, ಹೆಣ್ಣೂ ಅಲ್ಲದ ನಿರೂಪಕನ ಬದುಕಿನ ಬಗ್ಗೆಯಾ? ಅಥವಾ ಹೂವಯ್ಯ ಮತ್ತು ಎಲಿಜಬೆತ್ ಟೀಚರ್ ಪ್ರೇಮಕಥೆಯ ಬಗ್ಗೆಯಾ ಎನ್ನುವುದೂ ಸ್ಪಷ್ಟವಾಗುವುದಿಲ್ಲ. 'ಜಲಪುಷ್ಪ' ಕಥೆಯಲ್ಲಿ ದಶಕಗಳಿಂದ ಅವಳು ಮೀನು ತಿನ್ನಲೊಪ್ಪದೆ, ಇವನು ಮೀನು ತಿನ್ನುವುದನ್ನು ಬಿಡಲೊಪ್ಪದೆ ಪ್ರೇಮಿಸಿಕೊಂಡಿರುವುದಕ್ಕೆ ಹೇಳುವಂಥ ಯಾವ ಮಹತ್ವದ ಉದ್ದೇಶವೂ ಇದ್ದಂತಿಲ್ಲ. 'ಕಲಗಚ್ಚು'ವಿನಲ್ಲಿ ಏನೋ ಘಟಿಸಲಿಕ್ಕಿದೆ ಎಂಬ ಕುತೂಹಲವಿದ್ದರೂ ಕೊನೆಯಲ್ಲಿ ಬಿಟ್ಟುಕೊಡುವ ಗುಟ್ಟು ಸ್ಫೋಟಕವೇನೂ ಅಲ್ಲ.

'ಮೋಹಕ ದ್ವೀಪದ ಮೂಗಿನ ತುದಿಯಲ್ಲಿ' ಕೊನೆಯಾಗಲು ಬಂದಿರುವ ನಿರೂಪಕ ಜುಬೇದಾಳ ಸಂಗದಲ್ಲಿ ಪಡೆದುಕೊಂಡಿದ್ದೇನು ಎಂದು ಕೇಳಿದರೆ ಹೇಳಲಿಕ್ಕೆ ಏನೂ ಇರುವುದಿಲ್ಲ. ಇದೇ ಕಥೆಯ ಕೊನೆಗೆ ಬರುವ ಕೆಲವು ಸಾಲುಗಳು ರಶೀದರ ಇಲ್ಲಿನ ಬಹುತೇಕ ಎಲ್ಲ ಕಥೆಗಳ ಹಿಂದಿನ ಭೂಮಿಕೆಯನ್ನೂ ಹೇಳುವಂತಿದೆ. ಆ ಮಾತುಗಳು ಹೀಗಿವೆ: ಬಡಿಯುತ್ತಿದ್ದ ಹಾಗೆ ಆ ಬೆಳಕಿನಲ್ಲಿ ಆಕ್ಟೋಪಸ್ಸಿನ ತೀರಿ ಹೋದ ಮೈಯಲ್ಲಿ ಒಂದರ ನಂತರ ಒಂದು ಬಣ್ಣಗಳು ಬದಲಾಗುತ್ತಿದ್ದವು. ಕನಸಿನಲ್ಲಿ ಬದಲಾಗುವ ಬಣ್ಣಗಳು ಭೇಟಿಯಾಡುವ ಹೊತ್ತಲ್ಲೂ, ಮಿಕವಾಗುವುದರಿಂದ ಬಚಾವಾಗುವ ಹೊತ್ತಲ್ಲೂ, ಬಂದು ಹೋಗುತ್ತಿದ್ದವು. ಇದು ಯಾವುದನ್ನೂ ಗಮನಿಸುವ ಅಗತ್ಯವೂ ಇಲ್ಲ, ವ್ಯವಧಾನವೂ ಇಲ್ಲ, ಈ ಯಾವುದರ ಒಳಾರ್ಥಗಳನ್ನು ಅರಿಯುವುದರಿಂದ ನಯಾ ಪೈಸೆಯ ಉಪಯೋಗವೂ ಇಲ್ಲ. ಸತ್ತು ಹೋಗಿರುವ ಆಕ್ಟೋಪಸ್ಸಿನ ಜೀವನದಲ್ಲಿ ಈ ಯಾವುದಕ್ಕೂ ಯಾವ ಅರ್ಥವೂ ಇಲ್ಲ ಮತ್ತು ಇದು ಯಾವುದೂ ಅದನ್ನು ತನ್ನ ಈಟಿಯಿಂದ ರಕ್ಷಿಸಲೂ ಇಲ್ಲ ಎಂಬ ಭಾವದಲ್ಲಿ ಜುಬೇದಾ ಅದನ್ನು ಬಡಿಯುತ್ತಾ ಹದಗೊಳಿಸುತ್ತಿದ್ದಳು.

'ರಕ್ತಚಂದನ' ಈ ಸಂಕಲನದ ಉಳಿದ ಎಲ್ಲ ಕಥೆಗಳಿಗಿಂತ ಭಿನ್ನವೂ, ಹೆಚ್ಚು ಸ್ಪಷ್ಟವಾದ ಕಥನಚೌಕಟ್ಟನ್ನೂ ಹೊಂದಿರುವ ಕಥೆ. ಉಳಿದ ಎಲ್ಲ ಕಥೆಗಳಲ್ಲಿ ಇರುವ ಗಾಢವಾದ ವಿಷಾದದ ಜಾಗವನ್ನು ಇಲ್ಲಿ ಸ್ವಾರ್ಥ, ಸಣ್ಣತನ, ಆಮಿಷ, ಆಷಾಢಭೂತಿತನ, ನಯವಾದ ಸಂಚುಗಳು ತುಂಬಿಕೊಂಡಿವೆ. ಹಿರಿಯ ಸಾಹಿತಿಯೊಬ್ಬರ ಸಾವಿನ ಸುತ್ತ ಬೆಳೆಯುತ್ತ ಹೋಗುವ ಕಥೆ, ಕಥನ ಕಟ್ಟುವಿಕೆಯ ಪ್ರಕ್ರಿಯೆಯ ಕುರಿತೂ ಮಾತಾಡುತ್ತದೆ. ರಶೀದರ ಎಲ್ಲ ಕಥೆಗಳೂ ಕಥೆ ಹೇಳುತ್ತಲೇ ಕಥನಕ್ರಿಯೆಯ ಬಗ್ಗೆಯೂ ಕಮೆಂಟ್ ಮಾಡುತ್ತಿರುತ್ತವೆ.

ಈ ಕಥೆಗಳ ಶಕ್ತಿ ಇರುವುದು ವಿವರಗಳಲ್ಲಿ; ವಿವರಗಳನ್ನು ಜೀವಂತಗೊಳಿಸಿ, ಅದರ ಪುಳಕವನ್ನೂ, ವಿಷಾದವನ್ನೂ ನಮ್ಮ ಬೆರಳ ತುದಿಗೂ ತಾಕುವಂತೆ ಮಾಡುವ ರಶೀದರ ಸತ್ವಶಾಲಿ ಭಾಷೆಯಲ್ಲಿ. ಹಾಗಾಗಿಯೇ ಈ ಕಥೆಗಳನ್ನು, ಅದು ಕೊಡುವ ಅನುಭವವನ್ನು ನೀವು ಅನ್ಯರಿಗೆ ಹೇಳಲು ಸಾಧ್ಯವಿಲ್ಲ. ಅಷ್ಟೇ ಏಕೆ, ಇವು ನಿಮ್ಮ ನೆನಪುಗಳಲ್ಲಿಯೂ ಒಂದು ಸ್ಪಷ್ಟಚಿತ್ರದ ಕಥೆಯಾಗಿ ಉಳಿಯದೇ ಹೋಗಬಹುದು. ಆದರೆ ಆ ಕಥೆ ನಮ್ಮೊಳಗೆ ಮೀಟಿ ಎಬ್ಬಿಸುವ ಭಾವತೀವ್ರತೆ ಮಾತ್ರ ಬಹುಕಾಲದವರೆಗೆ ಉಳಿದಿರುತ್ತದೆ.

ಮೊದಲ ಓದು

ಜಮ್ಲೋ ಹಾಕಿದ ಹೆಜ್ಜೆ ಗುರುತುಗಳು

ಜಮ್ಲೋ ಹೆಜ್ಜೆ ಹಾಕುತ್ತಾಳೆ
ಲೇ: ಸಮೀನಾ ಮಿಶ್ರಾ
ಕನ್ನಡಕ್ಕೆ: ಬೇದ್ರೆ ಮಂಜುನಾಥ
ಪ್ರ: ನವಕರ್ನಾಟಕ ಪ್ರಕಾಶನ
ಚಿತ್ರಗಳು: ತಾರೀಖ್ ಅಜೀಜ್
ಸಂ: 080 22161900

ಪು: 36 ₹90



ಮನೆಯ ಮಕ್ಕಳೆಲ್ಲ ಮನೆಯೊಳಗೇ ಬೋರು ಎಂದು ಅಳುತ್ತಿರುವಾಗ, ಆನ್‌ಲೈನ್ ಕ್ಲಾಸಿನಲ್ಲಿ ಮುಖ ಹುದುಗಿಸಿ ಕೂತಿರುವಾಗ, ಹೊರಗೆ ರಣಬಿಸಿಲಲ್ಲಿ, ಧಗೆಯೇರುವ ಡಾಂಬರು ರಸ್ತೆಯಲ್ಲಿ ಬರಿಗಾಲಲ್ಲಿ ಊರಿಗೆ ಹೊರಟವರ ಸರದಿಯನ್ನು ಪ್ರತ್ಯಕ್ಷವಾಗಿಯೋ, ಟಿವಿಯ ಪರದೆಯಲ್ಲಿಯೋ ನಾವೆಲ್ಲ ನೋಡಿಯೇ ಇರುತ್ತೇವೆ. ಹಾಗೆ ಹೊರಟವರ ಗುಂಪಿನಿಂದ, ಒಣಗಿದ ಗಂಟಲಿನ, ಆರಿದ ಕಂಗಳಿನ, ದಣಿದ ಹುಡುಗಿಯೊಬ್ಬಳು ತನ್ನ ಕಥೆಯನ್ನು ಹೇಳಿಕೊಂಡರೆ ಹೇಗಿರುತ್ತದೆ? ತನ್ನದೇ ವಯಸ್ಸಿನ ಹುಡುಗಿಯ ಆ ಪಾಡನ್ನು ಮನೆಯೊಳಗಿನ ಮಕ್ಕಳು ಕೇಳಿಸಿಕೊಂಡರೆ ಅವರಿಗೆ ಏನನಿಸಬಹುದು? ಈ ಪ್ರಶ್ನೆಗಳಿಗೆ ಉತ್ತರದಂತಿದೆ 'ಜಮ್ಲೋ ಹೆಜ್ಜೆ ಹಾಕುತ್ತಾಳೆ'.

ಇದು 36 ಪುಟದ ಸಚಿತ್ರ ಮಕ್ಕಳ ಪುಸ್ತಕ. ಸಮೀನಾ ಮಿಶ್ರಾ ಇಂಗ್ಲಿಷಿನಲ್ಲಿ ಬರೆದಿರುವ ಈ ಕೃತಿಯನ್ನು ಬೇದ್ರೆ ಮಂಜುನಾಥ ಅವರು ಕನ್ನಡಕ್ಕೆ ತಂದಿದ್ದಾರೆ. ನವಕರ್ನಾಟಕ ಪ್ರಕಾಶನ ಇದನ್ನು ಪ್ರಕಟಿಸಿದೆ. ಇದನ್ನು ಮಕ್ಕಳ ಪುಸ್ತಕ ಎಂದು ಸುಮ್ಮನಾದರೆ ಅದು ನಮ್ಮೊಳಗೆ ಎಬ್ಬಿಸುವ ತಲ್ಲಣಗಳಿಗೆ ವಂಚನೆ ಮಾಡಿದಂತಾಗುತ್ತದೆ. ಹಾಗೆ ನೋಡಿದರೆ ಇದು ದೊಡ್ಡವರೇ ಓದಬೇಕಾದ ಪುಸ್ತಕ. ಕಂದಮ್ಮಗಳನ್ನು ಕಾಪಾಡಿಕೊಳ್ಳಲಾಗದ ಇಂಥದ್ದೊಂದು ಸಮಾಜವನ್ನು ಕಟ್ಟಿರುವುದಕ್ಕೆ ನಾಚಿಕೊಳ್ಳುವಂತೆ ಮಾಡುವ ಪುಸ್ತಕ. ಈ ಕ್ರೂರ ವ್ಯವಸ್ಥೆಯ ಭಾಗವಾಗಿರುವುದಕ್ಕೆ ವಿಷಾದ ಹುಟ್ಟಿಸುವ ಪುಸ್ತಕ.

ತಾರೀಖ್ ಅಜೀಜ್ ಅವರು ಅದ್ಭುತ ಚಿತ್ರಗಳು ಈ ಪುಸ್ತಕದ ಜಗತ್ತನ್ನು ಕಟ್ಟಿಕೊಟ್ಟಿವೆ. ಆದರೆ ಈ ಅದ್ಭುತ ಚಿತ್ರಗಳು ಮಕ್ಕಳನ್ನು ರಂಜಿಸುತ್ತವೆ ಎಂದು ಹೇಳುವುದೂ ತಪ್ಪೇನೋ ಎಂಬ ಭಾವವನ್ನು ಇದರ ಕಥೆ ಹುಟ್ಟಿಸುತ್ತದೆ. ಹನ್ನೆರಡು ವರ್ಷದ ಬಾಲಕಿ ಜಮ್ಲೋ ಮುಕ್ದಂ, ಲಾಕ್‌ಡೌನ್ ಕಾರಣದಿಂದ ಇನ್ನೂರು ಕಿಲೋಮೀಟರ್ ದೂರದ ತನ್ನೂರಿಗೆ ನಡೆಯುತ್ತ ಹೋಗಿ, ಊರಿಗೆ ತಲುಪಲು ಇನ್ನೊಂದು ಐವತ್ತು–ಅರವತ್ತು ಕಿಲೋಮೀಟರ್ ಇರುವಾಗ ಕುಸಿದು ಬೀಳುತ್ತಾಳೆ. ಪುಟವಿಡೀ ಹರಡಿಕೊಂಡಿರುವ ಚಿತ್ರ, ನಡುವೆ ಆ ಚಿತ್ರದ ಭಾಗಗಳಂತೆಯೇ ಅಚ್ಚಾಗಿರುವ ಅಕ್ಷರಗಳು ಈ ಪುಸ್ತಕಕ್ಕೆ ನೋಡಿಸಿಕೊಂಡು ಹೋಗುವ ಗುಣವನ್ನು ನೀಡಿವೆ. ಆದರೆ ಅನುವಾದದ ಪ್ರಕ್ರಿಯೆಯಲ್ಲಿ ಇನ್ನಷ್ಟು ಶ್ರಮವಹಿಸಿ, ಕನ್ನಡದ ಜಾಯಮಾನಕ್ಕೆ ಒಗ್ಗಿಸಿದ್ದರೆ, ಕನ್ನಡದ ಪುಟಾಣಿಗಳಿಗೆ ಇನ್ನಷ್ಟು ಹತ್ತಿರವಾಗಬಹುದಿತ್ತು.

ಕಥೆ

ಮಂಜಯ್ಯ ದೇವರಮನಿ

ಅವರ

ನಾಯಿಬುಡ್ಡನ ಪವಾಡ

ಎಲ್ಲಾ ಮನೆಗಳಿಗೂ ಗಂಗೆ ಬಂದಿದ್ದಳು. ಮನೆಗಳು ಕಕ್ಕಸ್ಸು ಗುಂಡಿ ಕಂಡಿದ್ದವು. ಪಂಚಾಯಿತಿ ಸುಣ್ಣ ಬಣ್ಣ ಬಳಿಸಿಕೊಂಡು ಗ್ರಾಮಸಭೆಗೆ ಸಜ್ಜಾಗಿತ್ತು. ಒಟ್ಟಿನಲ್ಲಿ ಉಕ್ಕಡದ ಚಿತ್ರಣ ನಾಯಿಬುಡ್ಡನಿಂದ ಸಂಪೂರ್ಣವಾಗಿ ಬದಲಾಗಿತ್ತು. ಇದೆಲ್ಲಾ ಹೇಗೆ ಸಾಧ್ಯವಾಯಿತು ಎಂಬುದನ್ನು ಹೇಳದಿದ್ದರೆ ನಾಯಿಬುಡ್ಡನ ಹೋರಾಟ ಗೊತ್ತಾಗುವುದಾದರು ಹೇಗೆ?

ಪೂರ್ಣ ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಖಲೀಲ್ ಗಿಬ್ರಾನ್

ಅವರ

ಮದುವೆಯೆಂದರೆ...

(ಕನ್ನಡಕ್ಕೆ - ಡಾ. ಸುದರ್ಶನ್ ಸಿ. ವೈ)

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಂಶೋಧನೆಯ ಸ್ಥೂಲ ನೋಟ



ಪು: 340 ₹250

ಸಮೂಹ ಮಾಧ್ಯಮ ಸಂಶೋಧನೆ
ಲೇ: ಡಾ.ಸತೀಶ್ ಕುಮಾರ್ ಅಂಡಿಂಜೆ
ಪ್ರ: ಸ್ನೇಹಾ ಎಂಟರ್‌ಪ್ರೈಸಸ್, ಬೆಂಗಳೂರು
ಸಂ: 94488 70461

ಮಾಧ್ಯಮ ಸಂಶೋಧನೆಗೆ ಸಂಬಂಧಿಸಿ ಪ್ರಸ್ತುತ ಕೃತಿಯಲ್ಲಿ ಸ್ಥೂಲ ನೋಟವನ್ನು ನೀಡಲು ಲೇಖಕರು ಪ್ರಯತ್ನಿಸಿದ್ದಾರೆ. ಸಂಶೋಧನಾ ವಿದ್ಯಾರ್ಥಿಗಳೇ ಈ ಕೃತಿಯ ಗುರಿ. ಆದರೆ, 24/7 ಪ್ರಸಾರ ಮಾಧ್ಯಮಗಳು ಸ್ಥಳೀಯಮಟ್ಟದಲ್ಲಿ (ಕನ್ನಡದ) ಪ್ರೇಕ್ಷಕನ ನಾಡಿಮಿಡಿತ ಅರಿಯಬೇಕಾದ ಮಹತ್ವವನ್ನು ಆರಂಭದಲ್ಲೇ ಹೇಳಿದ್ದಾರೆ. ಪ್ರೇಕ್ಷಕನಿಗೇನು ಬೇಕು, ಎಷ್ಟು ಬೇಕು ಎಂಬುದನ್ನು ಮಾಧ್ಯಮಗಳಲ್ಲಿ ವಿಷಯ ರೂಪಿಸುವವರು (ಕಂಟೆಂಟ್ ಕ್ರಿಯೇಟರ್ಸ್) ವೈಜ್ಞಾನಿಕವಾಗಿ ಅರಿತುಕೊಂಡರೆ ಮಾತ್ರ ಆಯಾ ಕಾರ್ಯಕ್ರಮದ ಉದ್ದೇಶ ಗುರಿ ಮುಟ್ಟುತ್ತದೆ ಎಂಬುದನ್ನು ಬಲವಾಗಿ ಪ್ರತಿಪಾದಿಸಿದ್ದಾರೆ.

ಸಂಶೋಧನೆಗೆ ಸಂಬಂಧಿಸಿ ಇಲ್ಲಿ ಕೊಟ್ಟಿರುವ ಸೈದ್ಧಾಂತಿಕ ವಿವರಗಳು ಮತ್ತು ವಿಧಾನಗಳು ಎಲ್ಲ ವಿಷಯಗಳಿಗೂ ಸಂಬಂಧಿಸಿ ಸಾಮಾನ್ಯೀಕರಿಸಿದವೇ ಆಗಿವೆ. ಸಮೂಹ ಮಾಧ್ಯಮ ಸಂಶೋಧನೆ ಬೆಳವಣಿಗೆ ಕುರಿತ ವಿವರಣೆಯಲ್ಲಿ ಪ್ರತಿಯೊಬ್ಬ ಸಂಶೋಧಕ ತನ್ನ ಅಧ್ಯಯನದಲ್ಲಿ ಗಮನಿಸಲೇಬೇಕಾದ ಸೂಕ್ಷ್ಮ ವಿಷಯಗಳತ್ತ ವಿವರವಾಗಿ ಬೆಳಕು ಚೆಲ್ಲಲಾಗಿದೆ. ಜೊತೆಗೆ ಮುದ್ರಣ, ಪ್ರಸಾರ ಮಾಧ್ಯಮಗಳ ವಿವಿಧ ವಿಭಾಗಗಳ ಮೇಲೂ ನಡೆಸುವ ಸಂಶೋಧನೆಗಳ ಬಗ್ಗೆ ವಿವರಗಳಿವೆ. ದತ್ತಾಂಶಗಳ ವಿಶ್ಲೇಷಣೆ, ಗಣಿತ ಸೂತ್ರಗಳ ಬಳಕೆಯನ್ನು ಉದಾಹರಣೆಗಳ ಸಹಿತ ಕೊಟ್ಟಿದ್ದಾರೆ. ಸಮೂಹ ಮಾಧ್ಯಮ ಸಂಶೋಧನೆ ಸಂಬಂಧಿಸಿ ಇಂಗ್ಲಿಷ್ ಕೃತಿಗಳಲ್ಲಿ ಕ್ಲಿಷ್ಟವೆನಿಸಬಹುದಾದ ವಿಷಯಗಳನ್ನು ಸರಳ ಕನ್ನಡದಲ್ಲಿ ನಿರೂಪಿಸಿದ್ದಾರೆ.

ಮಾಧ್ಯಮ ವಿದ್ಯಾರ್ಥಿಗಳಿಗೆ ಇದು ಉಪಯುಕ್ತ ಕೃತಿ.

ಬಿ.ಪಿ.ಆರ್. ಬದುಕಿನ ಮೆಲುಕು



ಪು: 204 ₹220

ಭೂಜಲಭಗೀರಥ ಬಿ.ಪಿ.ರಾಧಾಕೃಷ್ಣ
ಲೇ: ಟಿ.ಎಂ. ಶಿವಶಂಕರ್
ಪ್ರ: ವಿಕಸನ, ವಿಜ್ಞಾತಂ ಭವನ
ಸಂ: 9481908555

ಬಿ.ಪಿ.ಆರ್. ಎಂದೇ ಪ್ರಸಿದ್ಧರಾಗಿದ್ದ, ಪದ್ಮಶ್ರೀ ಪುರಸ್ಕೃತ ಭೂವಿಜ್ಞಾನಿ ದಿವಂಗತ ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ ಅವರ ಜೀವನ ಕಥನ ಈ ಕೃತಿ. ಆದಿಚುಂಚನಗಿರಿ ಮಹಾಸಂಸ್ಥಾನ ಮಠವು 'ಒಕ್ಕಲಿಗ ಸಾಧಕರು' ಎಂಬ ಶೀರ್ಷಿಕೆಯಡಿ 'ವಿಕಸನ' ಸಂಸ್ಥೆಯ ಮೂಲಕ ಆರಂಭಿಸಿದ ಗ್ರಂಥಮಾಲೆಯ ಭಾಗವಾಗಿ 'ಭೂಜಲಭಗೀರಥ ಬಿ.ಪಿ.ರಾಧಾಕೃಷ್ಣ' ಶೀರ್ಷಿಕೆಯಡಿ ಈ ಕೃತಿ ಮೂಡಿಬಂದಿದೆ.

ಒಟ್ಟು 19 ಅಧ್ಯಾಯಗಳಲ್ಲಿ ಬಿ.ಪಿ.ಆರ್. ಅವರ ಜೀವನವನ್ನು ಲೇಖಕರು ಇಲ್ಲಿ ತೆರೆದಿಟ್ಟಿದ್ದಾರೆ. ಬಿ.ಪಿ.ಆರ್. ಅವರ ಆತ್ಮಚರಿತ್ರೆ ಬರೆಯಲೆಂದು ದಶಕಗಳ ಹಿಂದೆ ನಡೆಸಿದ ಸಂದರ್ಶನವನ್ನೇ ಲೇಖಕರಾದ ಟಿ.ಎಂ. ಶಿವಶಂಕರ್ ಈ ಕೃತಿಗೆ ಮಾರ್ಗಸೂಚಿಯಾಗಿ ಬಳಸಿಕೊಂಡಿದ್ದಾರೆ. ಬಿ.ಪಿ.ಆರ್. ಅವರು ಹಂಚಿಕೊಂಡ ಘಟನೆಗಳು, ಮಾಹಿತಿಗಳ ಜೊತೆಗೆ ಅವರ ಸ್ನೇಹಿತರು, ನಿಕಟವರ್ತಿಗಳ ಜೊತೆಗಿನ ಮಾತುಕತೆ, ಭೂವಿಜ್ಞಾನ ಕ್ಷೇತ್ರದಲ್ಲಿನ ಕಾರ್ಯವೈಖರಿಯನ್ನು ಒಗ್ಗೂಡಿಸಿ ಬಿ.ಪಿ.ಆರ್. ಜೀವನವನ್ನು ಅಕ್ಷರಕ್ಕಿಳಿಸಿದ್ದಾರೆ ಲೇಖಕರು. 'ಭೂಜಲ ಭಗೀರಥ' ಎಂಬ ಬಿರುದನ್ನೇಕೆ ನೀಡಿದೆ ಎನ್ನುವುದನ್ನು ವಿವರಿಸುತ್ತಾ, ಬಿ.ಪಿ.ಆರ್ ಅವರ ಸಾವಿನತನಕದವರೆಗಿನ ಪಯಣವನ್ನು ಲೇಖಕರು ಮೆಲುಕುಹಾಕಿದ್ದಾರೆ. 'ಶಿಸ್ತು, ಸಮಯಪ್ರಜ್ಞೆಗೆ ಹೆಸರಾಗಿದ್ದ ಅವರು ಅಂದಿನ ಕೈಗಾರಿಕಾ ಸಚಿವರಾಗಿದ್ದ ಎಸ್.ಎಂ. ಕೃಷ್ಣ ಅವರನ್ನು ಮಾತಿನಲ್ಲೇ ತಿವಿದ ಸನ್ನಿವೇಶ ಎಂಥದ್ದು, ಭೂವಿಜ್ಞಾನ ಇಲಾಖೆಯ ನಿರ್ದೇಶಕರಾಗಿ ಅವರ ಕಾರ್ಯವೈಖರಿ ಹೇಗಿತ್ತು, ಅವರ ಬಾಳಿನ ಮುಸ್ಸಂಜೆ ಹೇಗಿತ್ತು ಎನ್ನುವುದನ್ನು ವಿವರಿಸಿದ್ದಾರೆ.

ಕರಿಯಪ್ಪ ಹಂಚಿನಮನಿಯವರ ಅಕ್ರಿಲಿಕ್‌ನಲ್ಲಿ ರಚಿಸಿದ ಬೃಹತ್ ಕೃತಿ

ದೃಶ್ಯಮೇಳದ ವಿಸ್ಮಯಲೋಕ...

ಡಿ.ಎಸ್.ಚೌಗಲೆ

ಕಲಾವಿಮರ್ಶಕ ಹಾಗೂ ಕಲಾವಿದ ಚಿ.ಸು.ಕೃಷ್ಣಸೆಟ್ಟಿ ಅವರ 'ಕೃಷ್ಣಸೆಟ್ಟಿ ಫೌಂಡೇಷನ್' ಆಯೋಜಿಸಿರುವ 'ರಿಸೀಲಿಯನ್ಸ್' (ಸ್ಥಿತಿಸ್ಥಾಪಕತ್ವ) ಶೀರ್ಷಿಕೆಯಡಿಯಲ್ಲಿ ಐವತ್ತೇಳು ಕಲಾವಿದರ ಚಿತ್ರಕಲಾ ಪ್ರದರ್ಶನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಏಳು ಗ್ಯಾಲರಿಗಳಲ್ಲಿ ಜೂನ್ 4 ರಿಂದ 12ರವರೆಗೆ ನಡೆಯುತ್ತಿದೆ.

ಹಲವು ಹಿರಿಕಿರಿ ಕಲಾವಿದರ ಕೃತಿಗಳು ಇಲ್ಲಿವೆ. ಕೋವಿಡ್ ನಂತರ ಬಹುದೊಡ್ಡ ಪ್ರಮಾಣದ ಕಲಾಪ್ರದರ್ಶನವಿದು. ಈ ಕಲಾವಿದರು ತಮ್ಮ ಅಸ್ತಿತ್ವವನ್ನು ಪುನಃ ಪ್ರತಿಷ್ಠಾಪನಗೊಳಿಸಲೆಂದೇ ಹುರಿಗೊಂಡು ಸಿದ್ಧರಾಗಿರುವರು. ಹಾಗೇ ಕಲಾಸಕ್ತರಿಗೆ ಕಲೆಯ ರಸಾನುಭವ ಪಡೆಯಲು ಅಭಿವ್ಯಕ್ತಿಯ ಬಹುರೂಪಗಳನ್ನು ಇಲ್ಲಿ ತೂಗು ಹಾಕಲಾಗಿದೆ. ಈ ಪ್ರದರ್ಶನಕ್ಕೆಂದೇ ರಚಿಸಿದ ಹೊಸಕೃತಿಗಳು ಒಂದು ವಿಸ್ಮಯ ಲೋಕವನ್ನೇ ತೆರೆದಿಟ್ಟಿವೆ.

ಸಂಕೀರ್ಣ ಬದುಕಿನ ಜೀವ ಪ್ರಪಂಚದ ಬಗೆಬಗೆಯ ಹೊರಳು ನೋಟಗಳ ರೂಪಗಳು ಬಸವರಾಜಾಚಾರ್ ಕೆ.ಆರ್. ಅವರ ಉಡ್ ಕಟ್‌ನ 'ಜರ್ನಿ-3' ಕೃತಿಯಲ್ಲಿವೆ. ಮನುಷ್ಯ ಸಂಬಂಧ ಬಹು ಸಂಕೀರ್ಣ. ಬಸವರಾಜಾಚಾರ್ ಅದನ್ನು ಜಾನಪದೀಯ ಕಲಾ ಸಂಕೇತಗಳ ರೂಪಕಗಳ ಮೂಲಕ ಹೇಳುವ ಯತ್ನವನ್ನು ಕೃತಿಯಲ್ಲಿ ಮಾಡಿರುವರು. ಅತ್ರಿ ಚೇತನ್ ಅವರ ಉಡ್ ಕಟ್‌ನ 'ಲೇಯಿಂಗ್ ಟುಗೆದರ್-2'ನಲ್ಲಿ ಕತ್ತಲಿನ ಹಿನ್ನೆಲೆಯ ಬೆಳಕಲ್ಲಿ ಕಾಣುತ್ತವೆ ಸೈಕಲ್ ಗಾಲಿಗಳು. ಅದರ ಹಿಂಬದಿ ರೂಪವು ಚೆಲುವು ಪಡೆದಿದೆ. ಒಂದು ಕಾಲದಲ್ಲಿ ಸೈಕಲ್‌ಗಳು ಬದುಕಿನ ಭಾಗವಾಗಿದ್ದವು. ನಾಸ್ಟಾಲ್ಜಿಕ್ ಸ್ಮೃತಿಯ ಛಾಯೆಯಲ್ಲಿರುವ ಒಂದಕ್ಕೊಂದು ಒರಗಿದ ಸೈಕಲ್‌ನ ಚಕ್ರಗಳು ಸ್ಥಾವರಗೊಂಡಿದ್ದರೂ ಒಂದು ಚಲನಶೀಲ ಬದುಕನ್ನು ಅವು ಕಟ್ಟಿಕೊಡುತ್ತವೆ.

ಎಸ್.ಎ.ವಿಮಲನಾಥನ್ ಅವರು ಅಕ್ರಿಲಿಕ್‌ನಲ್ಲಿ ರಚಿಸಿದ ಕೃತಿ 'ಸಿಟಿ' ಗಮನ ಸೆಳೆಯುತ್ತದೆ. ಶಹರ ಬದುಕಿನ ಸಂಕೀರ್ಣತೆಗಳು ಮೇಲ್ನೋಟದಲ್ಲಿ ಸೆಳೆದರೂ ಅದರಾಳದಲ್ಲಿ ಹುದುಗಿದ ಅಂತರಾಳವು ಗಾಢವರ್ಣಗಳಲ್ಲಿಯ ಥಳುಕು ಬಳುಕನ್ನು ಹೇಳುತ್ತದೆ.

ಕರಿಯಪ್ಪ ಹಂಚಿನಮನಿಯವರ ಅಕ್ರಿಲಿಕ್‌ನಲ್ಲಿ ರಚಿಸಿದ ಬೃಹತ್ ಕೃತಿ-ಅದರ ಬಣ್ಣಗಳ ಹೊಯ್ದಾಟದಲ್ಲಿ ವ್ಯಕ್ತಗೊಳ್ಳುವ ಚಿತ್ರವಿನ್ಯಾಸಗಳ ರೂಪ ಮೈವಳಿಕೆಯಲ್ಲಿ ತೋರುವ ತೆಳು ಮತ್ತು ದಟ್ಟಬಣ್ಣಗಳ ತೀವ್ರ ಕುಂಚದ ಬಳಕೆ ಕಲಾಕೃತಿಯನ್ನು ಒಂದು ಶ್ರೇಷ್ಠತ್ವದ ಹಂತಕ್ಕೆ ಕೊಂಡೊಯ್ಯುತ್ತದೆ. ಗೆರೆಗಳಲ್ಲಿ ಮೂಡಿದ ನಗ್ನ ಅಮೂರ್ತ ಚಿತ್ರಗಳು ಕಾಮದ ಹಸಿವು ನೀಗಿದ ಬಳಿಕದ ದಣಿವನ್ನು ಹೇಳುವುದಷ್ಟೇ ಅಲ್ಲ, ಒರಗುವಿಕೆಯಲ್ಲಿ ತನುಮನಗಳ ಆಹ್ಲಾದದಾಯಕ ಅನುಭೂತಿಯನ್ನು ದಕ್ಕಿಸುವಂತೆ ಮಾಡುತ್ತವೆ.

ಎಂ.ನಾರಾಯಣ್ ಅವರ 'ಪೋಲೊ' ಬೃಹತ್ ಕಲಾಕೃತಿ. ಮುಖ್ಯವಾಗಿ ಕ್ಯಾನ್‌ವಾಸ್ ಮೇಲೆ ಕಲಾವಿದನ ಕುಂಚದ ಗತಿಯ ಜೋರು ಹೊಡೆತಗಳು ಅಭಿವ್ಯಕ್ತಿಯ ಮೌಲ್ಯವನ್ನು ವೃದ್ಧಿಸಿವೆ. ಹತ್ತಿರದಲ್ಲಿ ನೋಡಿದಾಗಿನ ಒಂದು ಫಾರ್ಮ್‌ನ ತಂತ್ರ ದೂರದಿಂದ ಕಾಣುವ ನೋಟದಲ್ಲಿ ಕುದುರೆಗಳ ಓಟದ ಅಶ್ವಶಕ್ತಿ, ಠೇಂಕಾರಗಳ ನೆಗೆತ-ಅಬ್ಬಾ ಎಂಬ ಉದ್ಗಾರ ಹೊರಡಿಸುತ್ತದೆ.

ಗಣೇಶ ಧಾರೇಶ್ವರ ಅವರ ವಿಭಿನ್ನ ಕೃತಿ 'ಜನರೇಷನ್ಸ್, ಟೈಮ್ ಅಂಡ್ ಪರ್ಸೆಪ್ಷನ್ಸ್' ಶೀರ್ಷಿಕೆಯಲ್ಲಿದೆ. ಇದು ರಚನಾ ಶೈಲಿಯಿಂದ ತೀವ್ರಗಮನ ಸೆಳೆಯುತ್ತದೆ. ಅಕ್ರಿಲಿಕ್ ಬಣ್ಣ ಪ್ರಧಾನವಾಗಿ ಫ್ಯಾಬ್ರಿಕ್ ವಿವಿಧ ವಸ್ತುಗಳನ್ನು ಮೈವಳಿಕೆಯ ಮೇಲೆ ಬಳಸಿದ್ದಾರೆ. ಜೀನ್ಸ್ ಪ್ಯಾಂಟ್, ಜಾಕೆಟ್, ಅಂಗಿಯ ಬಿಳಿತೋಳು, ಪ್ಯಾಂಟಿನ ಜೇಬು, ಅದರಲ್ಲಿ ಮೊಬೈಲು-ಹೀಗೆ ಕಲಾವಿದ ಇಂದಿನ ಪೀಳಿಗೆಯ ಒಳನೋಟಗಳನ್ನು ಅಭಿವ್ಯಕ್ತಿಸುತ್ತಾನೆ.

ಅಕ್ರಿಲಿಕ್‌ನಲ್ಲಿ ಒಡಮೂಡಿದ ಹುಮೇರಾ ಅಲಿಯವರ 'ಹಾರ್ಮನಿ' ತೆಳುವಾದ ಬಣ್ಣಗಳ ಸಾಂಗತ್ಯ, ನಿಸರ್ಗದಲ್ಲಿ ಒಡಮೂಡುವ ಲಾಲಿತ್ಯದ ರೂಪಗಳು ಏಕತೆಯ ಧ್ವನಿಗಳಾಗಿವೆ. ಇದೇ ಸ್ವರೂಪದ ಶಿವಕುಮಾರ ಕೆಸರಮಡು ಅವರ ಕೃತಿ ಕಡಿಮೆ ಬಣ್ಣಗಳಲ್ಲಿ ತೆಳು ಮತ್ತು ದಟ್ಟೈಸುವಿಕೆಯ ರಚನಾತಂತ್ರದಿಂದ ಅಲೌಕಿಕ ರೂಪವನ್ನು ಸೃಷ್ಟಿಸಿದೆ.

ವಿನೋದಕುಮಾರ್ ಅವರ 'ಎಕ್ಸ್‌ಪ್ಲೋರ್-2' ಅಕ್ರಿಲಿಕ್ ಮಾಧ್ಯಮದ ರಚನೆ. ಸೂಕ್ಷ್ಮ ಜೀವರೂಪಗಳಲ್ಲಿ ಸೃಷ್ಟಿಯ ಸ್ಥಿತಿಸ್ಥಾಪಕತ್ವವನ್ನು ಸಾರುತ್ತ ಸೃಷ್ಟಿ, ಲಯ, ಮೋಕ್ಷದೆಡೆಗಿನ ಅನುಭೂತಿಯ ಭಾವವು ಉಂಟಾಗುತ್ತದೆ. ವಿಜಯ ನಾಗವೇಕರ ಅವರ 'ಲಿಲಿ' ಕೃತಿ ನೀರಲ್ಲಿ ತೇಲುವ ಕಮಲದ ಹೂವಿನ ಚಿತ್ರವು ಒಂದು ಪ್ರಭಾವಳಿ ಹೊಂದಿದ್ದು, ಇದ್ದೂ ಇಲ್ಲದ ಭಾವನೆಯನ್ನು ಹೊರಹೊಮ್ಮಿಸುತ್ತದೆ.

ಜೆ.ಎಂ.ಎಸ್.ಮಣಿ, ಗುರುದಾಸ ಶೆಣೈ, ಡಿಂಪಲ್ ಶಹಾ, ಪರಮೇಶ ಜೋಳದ, ಸುಬ್ರಮಣಿ ಗೋಪಾಲಸಾಮಿ, ಮಂಜುನಾಥ ಕಲ್ಲೇದೇವರು, ಲಕ್ಷ್ಮೀ ಮೈಸೂರು, ಜಯಂತ ಹುಬ್ಳಿ, ಬಿ.ಎಸ್.ದೇಸಾಯಿ, ಕಂದನ್ ಜಿ., ಸುರೇಶ ಕೆಂಪೇಗೌಡ ಮೊದಲಾದವರ ಕಲಾಕೃತಿಗಳು ಪ್ರದರ್ಶನದಲ್ಲಿವೆ. ❖

'ಮರುಸೃಷ್ಟಿ'ಯ ಗ್ರಾಮದಲ್ಲಿ...

8ನೇ ಪುಟದಿಂದ...

'ಪೇಶ್ವೆ ವಾಡಾ' ಮರಾಠಾ ಪೇಶ್ವೆಯವರ ಕಾಲದಲ್ಲಿನ ವಾಸ್ತುಶಿಲ್ಪ ಹಾಗೂ ಸಾಂಪ್ರದಾಯಿಕ ರಾಜಮನೆತನಗಳಾದ ಗುಜರಾತ್ ಹಾಗೂ ರಾಜಸ್ಥಾನ ಸಮ್ಮಿಳಿತ ಕಲಾಕೃತಿಗಳಿಂದ ನಿರ್ಮಾಣವಾಗಿದೆ. ಮುಂದೆ ಸಾಗಿದಂತೆ 'ಪುರಾತನ ಕಾಲದ ವಸ್ತುಗಳ ಬಜಾರ್'ನ್ನು ಕಾಣುತ್ತೇವೆ. ಆ ಕಾಲದ ಗೃಹಪಯೋಗಿ ವಸ್ತುಗಳು, ಚೀನಿ ಭರಣಿಗಳು, ಅಡುಗೆಮನೆಗೆ ಬಳಸುವ ಲೋಹದ ವಸ್ತುಗಳು, ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು, ಬೀಸುವ ಹಾಗೂ ರುಬ್ಬುವ ಕಲ್ಲುಗಳು, ಮಣ್ಣಿನ ಮಡಿಕೆಗಳು. ಹೀಗೆ ಅನೇಕ ವಸ್ತುಗಳ ಸಂಗ್ರಹಗಳನ್ನು ಕಾಣಬಹುದು.

ವಿಜಯನಗರದ ಕಾಲದ ಕುಕನೂರಿನ 'ಕಮಲ್ ಮಹಲ್'ನಲ್ಲಿ (1341) ವಿಶಿಷ್ಟ ಕಲಾಕೃತಿಗಳಿವೆ. ಮೇಲ್ಭಾಗದಲ್ಲಿ ಕಿನ್ನಾಳ ಕಲೆಯ ವರ್ಣಚಿತ್ರ, ಪ್ರವೇಶದ ಎಡಬಲಗಳಲ್ಲಿ ಮೈಸೂರು ಪೇಂಟಿಂಗ್, ಕಮಾನಿನ ಮೇಲೆ ತಂಜಾವೂರಿನ ಪೇಂಟಿಂಗ್, ಬಟ್ಟೆಗಳ ಮೇಲೆ ಕಲಾಂಕರಿ ಕುಸುರಿಯ ಪೇಂಟಿಂಗ್ ಇರುವುದು ವಿಶೇಷ. ಆ ಕಾಲದ ವಿಶಿಷ್ಟ ಕಲಾಕೃತಿಯ ಕುರುಹು ಆಗಿ ಉಳಿದುಕೊಂಡಿವೆ. 'ಡೆಕ್ಕನ್ ನವಾಬಿ ಮಹಲ್' ಸುಮಾರು 110 ವರ್ಷಗಳ ಪುರಾತನವಾದ ಬರೀದ್ ಶಾಹೀ ಮನೆತನದ ಹುಮನಾಬಾದದ ನವಾಬನಿಗೆ ಸೇರಿದ ಮಹಲು. ನವಾಬ್ ಸಂಸ್ಕೃತಿಯನ್ನು ಬಿಂಬಿಸುವ ಕಟ್ಟಡ ಇದಾಗಿದೆ.

'ಮಂಗಳೂರಿನ ಕ್ರಿಶ್ಚಿಯನ್ ಹೌಸ್' ಸುಮಾರು 135 ವರ್ಷಗಳಷ್ಟು ಹಳೆಯ ಕಟ್ಟಡ. ಈ ಕಟ್ಟಡದಲ್ಲಿ ರೋಮನ್ ಕ್ಯಾಥೋಲಿಕ್‌ನ ವಾಸ್ತುಶಿಲ್ಪವನ್ನು ಕಾಣಬಹುದು. ಬ್ರಿಟಿಷ್ ಹಾಗೂ ಪೋರ್ಚುಗೀಸ್ ಸಂಸ್ಕೃತಿಯನ್ನು ಬಿಂಬಿಸುವ ಮನೆ ಇದಾಗಿದೆ. 'ಛತ್ತೀಸ್‌ಗಡ'ದ ಬಸ್ತಾರ್ ಎಂಬ ಆದಿವಾಸಿಗಳಿಗೆ ಸೇರಿದ ಮುಖವಾಡಗಳ ಹಾಗೂ ದಕ್ಷಿಣಕನ್ನಡದ ಸಂಸ್ಕೃತಿಯಾದ ಭೂತಾರಾಧನೆಯಲ್ಲಿ ಬಳಸಿದ ಮರದ ಮೂರ್ತಿಗಳ ಸಂಗ್ರಹವೂ ಇಲ್ಲಿದೆ. 'ವಿಷ್ಣು ಮಂದಿರ'(18ನೇ ಶತಮಾನದ್ದು) ಹಾಗೂ 'ವೀರಶೈವ ಮಠ'(16ನೇ ಶತಮಾನ) ಮೂಲ ಮಠ ಹಾಗೂ ಎರಡು ಶಾಖಾ ಮಠಗಳ ಎಲ್ಲಾ ವಸ್ತುಗಳನ್ನು ಒಟ್ಟುಗೂಡಿಸಿ ಈ ಒಂದು ಕಟ್ಟಡ ನಿರ್ಮಿಸಲಾಗಿದೆ.

ಕೇರಳ ಸಂಸ್ಕೃತಿಯ 'ಕುಂಜಾರು ಚೌಕಿ ಮನೆ' (1816), ಉತ್ತರ ಕನ್ನಡದ ಭಟ್ಕಳದ 'ನವಯಾತ್ ಮುಸ್ಲಿಮ್ ಮನೆ'(1805), ಕುಂದಾಪುರ ತಾಲ್ಲೂಕಿನ 'ವಡೆರ್ ಹೋಬಳಿ ಮನೆ'(1705) ಇಲ್ಲಿವೆ. ಮುಂದೆ ಸಾಗಿದಂತೆ ಆಗಿನ ಕಾಲದ ಚರ್ಮದ ಕೆಲಸಗಾರರು, ಸ್ಟವ್ ರಿಪೇರಿ ಮಾಡುವ, ಬಂಗಾರದ ಕುಸುರಿ ಕೆಲಸ ಮಾಡುವ ಹೀಗೆ ಎಲ್ಲಾ ಕುಶಲಕರ್ಮಿಗಳಿಗೆ ಸೇರಿದ ಅಂಗಡಿಗಳ ಓಣಿ ಇದೆ. ಕೊನೆಯಲ್ಲಿ ಹರಿಹರ ಮಂದಿರವಿದೆ.

ಹವ್ಯಾಸವೊಂದು ಇಂದು ನೂರಾರು ಪ್ರವಾಸಿಗರನ್ನು ಸೆಳೆಯುವ ಪ್ರದೇಶವಾಗಿ ನಿರ್ಮಾಣವಾಗಿದೆ. ಈ ಸಾಹಸಕ್ಕೆ ನಾರ್ವೆ, ಫಿನ್ಲೆಂಡ್ ಹಾಗೂ ಡೆನ್ಮಾರ್ಕ್ ಸರ್ಕಾರ ಹಾಗೂ ಕರ್ನಾಟಕದ ಪ್ರವಾಸೋದ್ಯಮ ಇಲಾಖೆಯ ಸಹಕಾರವೂ ಸಿಕ್ಕಿದೆ. 1996ರಿಂದ ಮರುನಿರ್ಮಾಣದ ಕೆಲಸ ಪ್ರಾರಂಭಿಸಿ 2015ರವರೆಗೆ ಕೆಲಸ ನಡೆದು ಈ ಗ್ರಾಮ ನಿರ್ಮಾಣವಾಗಿದೆ. ಸದ್ಯಕ್ಕೆ ಈ ಗ್ರಾಮದ ನಿರ್ವಹಣೆಯನ್ನು ಹಸ್ತಶಿಲ್ಪ ಟ್ರಸ್ಟ್ ಮಾಡುತ್ತಿದೆ. ಇಲ್ಲಿನ ವ್ಯವಸ್ಥಾಪಕ ರಮೇಶ ಮಲ್ಯ ಪ್ರವಾಸಿಗರ ಮೊದಲ ಗೈಡ್. ಗ್ರಾಮದ ಪ್ರವೇಶಕ್ಕಾಗಿ ವಯಸ್ಕರಿಗೆ ₹300, ಹಿರಿಯ ನಾಗರಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ₹150 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ❖

ಕುಂಜಾರು ಚೌಕಿ ಮನೆ

ಡೆಕ್ಕನ್ ನವಾಬ್ ಮಹಲ್

ವೀರಶೈವ ಮಠ

ಗೋಲಿ ಸೋಡಾ ಅಂಗಡಿಯ ಮಾದರಿ

–ಪ್ರಜಾವಾಣಿ ಚಿತ್ರ ಇರ್ಷಾದ್ ಮಹಮ್ಮದ್

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಹೊಂದಿಸು ಆನಂದಿಸು

ಅಂದು ಶಾಲೆಯಲ್ಲಿ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಲಾವಣಿಕಾರನೊಬ್ಬ, 'ಗಿಡವನು ಕಡಿವಾಗ ತಡೆಯೋ ತಮ್ಮ ವಿಚಾರ ಮಾಡೋ ನೀಜರ' ಎಂದು ಸುಶ್ರಾವ್ಯವಾಗಿ ಜನಪದ ಧಾಟಿಯಲ್ಲಿ ಲಾವಣಿ ಪದ ಹಾಡುತ್ತಿದ್ದ.

ನಂತರ ಪರಿಸರದ ಕುರಿತು ಭಾಷಣ ಮಾಡಿದ ರವಿಯ ವರ್ಗದ ಗುರುಗಳು ಮನಮುಟ್ಟುವಂತೆ ಮಾತನಾಡಿದರು.

ಇಂದಿನ ಪರಿಸರ, ಹವಾಮಾನ ಬದಲಾವಣೆ, ವೈಪರೀತ್ಯಗಳು, ಅನಿಶ್ಚಿತ ಮಳೆಯ ಬಗ್ಗೆ ಮಾತನಾಡುತ್ತಾ, ಇದಕ್ಕೆಲ್ಲಾ ಗಿಡಮರಗಳ ನಾಶವೇ ಕಾರಣ ಎಂದು ಹೇಳಿದರು.

ಇದನ್ನು ರವಿಯು ತದೇಕಚಿತ್ತದಿಂದ ಆಲಿಸುತ್ತಿದ್ದ. ಅವನ ಮನಸ್ಸಿನ ಮೇಲೆ ಪರಿಸರ ನಾಶವಾಗುತ್ತಿರುವುದು ಗಾಢವಾದ ಪರಿಣಾಮ ಬೀರಿತ್ತು. ಗುರುಗಳು ಹೇಳಿದಂತೆ ಜಮೀನು ಹೆಚ್ಚಿಗೆ ಇದ್ದವರು ತಮ್ಮ ಜಮೀನಿನಲ್ಲಿ ಗಿಡಮರಗಳನ್ನು ಏಕೆ ನೆಡಬಾರದು ಎಂದು ಯೋಚಿಸಿ, ಅವರ ತಂದೆಗೆ ಈ ಮಾತು ತಿಳಿಸಿದ.

ಅವರ ತಂದೆ ಒಪ್ಪಿಕೊಂಡರು. ಆದರೆ ಆತ ತುಂಬಾ ಲೆಕ್ಕಾಚಾರದ ಮನುಷ್ಯ. ಗಿಡ ನೆಡಲು ನನ್ನದೇನೂ ಅಭ್ಯಂತರವಿಲ್ಲ. 5 ತರದ ಗಿಡಗಳನ್ನು ನೆಟ್ಟು 'ಪಂಚವಟಿ' ನಿರ್ಮಿಸೋಣ. ಅದರಿಂದ ಪರಿಸರದಲ್ಲಿ ಉತ್ತಮ ಪ್ರಾಣವಾಯು ದೊರಕುತ್ತದೆ ಎಂದು ಸೂಚಿಸಿದರು. ಆದರೆ, ರವಿಗೆ ಒಂದು ಕೆಲಸ ಕೊಟ್ಟರು. ಅದು ಹೀಗಿತ್ತು. ಹೊಲದಲ್ಲಿ 5X5 = 25 ಗುಂಡಿಗಳನ್ನು ತೆಗೆಸುವುದು. ಪ್ರತಿ ಸಾಲಿನಲ್ಲಿ ಒಂದೊಂದು ಗಿಡ ನೆಡುವುದು. ಅವು ಅಡ್ಡ ಸಾಲಿನಲ್ಲಿಯೂ ಕಂಬ ಸಾಲಿನಲ್ಲಿಯೂ ನೋಡಿದರೆ ಒಂದು ಗಿಡ ಒಮ್ಮೆ ಮಾತ್ರ ಒಂದು ಗುಂಡಿಯಲ್ಲಿ ಕಾಣಬೇಕು. ಅಂಥ ಒಂದು ನಕ್ಷೆ ಬರೆದುಕೊಂಡು ನನ್ನ ಹತ್ತಿರ ಬಾ ಎಂದರು.

ಹಾಗಾದರೆ ಕೆಳಗೆ ಸೂಚಿಸಿದ 5 ಜಾತಿಯ ಗಿಡ (ಪಂಚವಟಿ) ನಿಯಮಾನುಸಾರವಾಗಿ ಹೇಗೆ ನೆಡುತ್ತೀರಿ? ವೃತ್ತದಲ್ಲಿ ಹೆಸರು ಬರೆಯಿರಿ.

ಗಿಡಗಳು

ಬೇವು– 5
ಬಿಲ್ವ – 5
ಬನ್ನಿ – 5
ಅತ್ತಿ– 5
ಅಶ್ವತ್ಥ – 5

ಗುಂಡಿಗಳು

ಇಲ್ಲಿ ಗಿಡಗಳ ಹೆಸರನ್ನು ನಿಯಮದಂತೆ ಬರೆಯಿರಿ

ಹಾಡು

ಗಿಡ (ಲಾವಣಿ ಪದ)

ಗಿಡವನು ಕಡಿವಾಗ ತಡೆಯೋ ತಮ್ಮ
ವಿಚಾರ ಮಾಡೋ ನೀ ಜರss
ಮರವನು ಕಡಿವಾಗ ಮರಗತ್ತೈತೆ ಜೀವ
ಯಾಕೋ ಏನೋ ಮರಖ ಮರ

ಹಣ್ಣು ಹಂಪಲ ತಂಪನು ನೀಡುವ
ಕಾಮಧೇನು ಅಹ ಈ ಮರ
ಬಿಸಿಲ ಬೇಗೆ ನುಂಗಿ ಹಾಯಾಗಿಸುವ
ನಿಸರ್ಗದ ಈ ಚಾಮರ

ಕಲ್ಲು ಒಗೆದರೂ ಅಲ್ಲಗಳೆಯದೇ
ಫಲವನು ನೀಡುವ ಈ ಮರ
ಕ್ಷುಲ್ಲಕ ಹಿತಸಾಧನೆಗೈಯಲು ನೀ
ನಾಶ ಮಾಡದಿರು ಈ ಮರ

ಸೃಷ್ಟಿ ಸೊಬಗಿನ ದೃಷ್ಟಿ ನೋಟಕೆ
ಅಂದ ಚಂದದ ಈ ಮರ
ಗಿಳಿ ಕೋಗಿಲೆಗೆ ಆಸರೆ ನೀಡುವ
ಅಂದ ಚಂದದ ಈ ಮರ

ಶುದ್ಧ ಗಾಳಿಗೆ ರಭಸದ ಮಳೆಗೆ
ಬೇಕೇ ಬೇಕು ಈ ಮರ
ಗಿಡಗಳ ನಾಶ ಸೃಷ್ಟಿ ವಿನಾಶ
ಉಳಿಯಲಿ ಮರಗಳು ಅಜರಾಮರ

ಕಾಡನು ಬೆಳೆಸಿ ನಾಡನು ಉಳಿಸಲು
ಸಸಿಯನು ನಾವು ನೆಡಬೇಕು
ವನಮಹೋತ್ಸವದ ಅರ್ಥವ ತಿಳಿಯಲು
ಅಂಗಳದಲ್ಲೊಂದು ಗಿಡಬೇಕು

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರದ ಬೇರೊಂದು ಪದ ಮಾಡಿ

1 ದಿಟದಾನ = _____
2 ಕೋಳಿದಾರ = ____
3 ದಯಾಪಾತ್ರ = ____
4 ಮಗುಹಾರು = ____

ಡಣ್ಣ ಚಿಕ್ಕು ಕೇಳ್ರಪ್ಪ ಕಥೆಯ — ಒಂಟೆ ಮತ್ತು ನರಿ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂಟೆ ಮತ್ತು ನರಿ ನದಿಯ ದಂಡೆಯ ಮೇಲೆ ವಾಸಿಸುತ್ತಿದ್ದವು. ಒಮ್ಮೆ ನರಿಗೆ ನದಿಯಾಚೆಗಿನ ಕಬ್ಬಿನ ತೋಟದ ಕಬ್ಬು ತಿನ್ನಬೇಕು ಅನಿಸಿತು. ತನ್ನನ್ನು ನದಿ ದಾಟಿಸಿಕೊಡುವಂತೆ ನರಿ ಒಂಟೆಗೆ ಕೋರಿತು

ಒಲ್ಲದ ಮನಸ್ಸಿನಿಂದ ಒಂಟೆಯು ನರಿಯನ್ನು ಬೆನ್ನ ಮೇಲೆ ಕೂರಿಸಿಕೊಂಡು ನದಿ ದಾಟಲಾರಂಭಿಸಿತು. ಒಂಟೆ, ನರಿ ಎರಡೂ ಪಕ್ಕದ ಕಬ್ಬಿನ ಗದ್ದೆಯ ಬಳಿ ತೆರಳಿದವು

ಕಬ್ಬನ್ನು ನರಿ ಮತ್ತು ಒಂಟೆ ತಿಂದು ಹೊಟ್ಟೆ ತುಂಬಿಸಿಕೊಂಡವು. ಖುಷಿಯಾದ ನರಿ ತನಗೆ ಹಾಡಬೇಕೆನಿಸಿದೆ ಎಂದಿತು. ಸಿಕ್ಕಿಬೀಳುವ ಅಪಾಯವಿದೆ, ಹಾಡಬೇಡ ಎಂದು ಒಂಟೆ ಹೇಳಿದರೂ ಕೇಳಲಿಲ್ಲ

ನರಿಯು ಊಳಿಡುವುದನ್ನು ಕೇಳಿದ ಹಳ್ಳಿಗರು ದೊಣ್ಣೆ ಹಿಡಿದು ಬಂದರು. ಆದರೆ, ನರಿ ಓಡಿಹೋಗಿ ಮರೆಯಾಯಿತು. ಆದರೆ, ವೇಗವಾಗಿ ಓಡಲಾಗದೇ ಒಂಟೆ ಸಿಕ್ಕಿಬಿತ್ತು

ಸಿಕ್ಕಿಬಿದ್ದ ಒಂಟೆಯನ್ನು ಕಂಡು ಸುತ್ತುವರಿದ ಹಳ್ಳಿಗರು ದೊಣ್ಣೆಗಳಿಂದ ಬಡಿದರು. ಒಂಟೆ ನೋವಿನಿಂದ ಅರಚಿತು. ಆದರೂ ನರಿ ಹತ್ತಿರ ಬರಲೇ ಇಲ್ಲ. ಒಂಟೆ ತುಂಬಾ ನೊಂದುಕೊಂಡಿತು

ಗಲಾಟೆ ಬಳಿಕ ನರಿಯನ್ನು ಬೆನ್ನ ಮೇಲೆ ಹೊತ್ತ ಒಂಟೆಯು ನದಿಯ ಮಧ್ಯದಲ್ಲಿ ಬರುತ್ತಾ, ನನಗೀಗ ಸ್ನಾನ ಮಾಡಬೇಕಿದೆ ಎಂದಿತು. ಒಂಟೆಯು ನರಿಯನ್ನು ನೀರಿನ ಮಧ್ಯೆ ಎಸೆದು ಹೋಯಿತು

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಸಂಗತಿಗಳನ್ನು ಹೊಂದಿಸಿರಿ

1	ಪಂಚಕೋಶಗಳಲ್ಲಿ ಒಂದು	A	ದೀಪ
2	ಪಂಚಗವ್ಯಗಳಲ್ಲಿ ಒಂದು	B	ಅಪಾನ
3	ಪಂಚತಂತ್ರಗಳಲ್ಲಿ ಒಂದು	C	ಕರದ್ವಯ
4	ಪಂಚದಿವ್ಯಗಳಲ್ಲಿ ಒಂದು	D	ಕಿವಿ
5	ಪಂಚ ನಮಸ್ಕಾರಗಳಲ್ಲಿ ಒಂದು	E	ಅನ್ನಮಯ
6	ಪಂಚಪ್ರಾಣಗಳಲ್ಲಿ ಒಂದು	F	ಬೇಧ
7	ಪಂಚಬಾಣಗಳಲ್ಲೊಂದು	G	ಹಾಲು
8	ಪಂಚಭೂತಗಳಲ್ಲೊಂದು	H	ಗೋಮೂತ್ರ
9	ಪಂಚ ಮಹಾಕಾವ್ಯಗಳಲ್ಲೊಂದು	I	ಬ್ರಹ್ಮಯಜ್ಞ
10	ಪಂಚ ಮಹಾಯಜ್ಞಗಳಲ್ಲೊಂದು	J	ಉದಕ
11	ಪಂಚ ಮಹಾಶಬ್ದಗಳಲ್ಲೊಂದು	K	ನವಮಲ್ಲಿಕಾ
12	ಪಂಚಮುಖಗಳಲ್ಲೊಂದು	L	ಶಿವಲಿಂಗ
13	ಪಂಚಲಿಂಗಗಳಲ್ಲೊಂದು	M	ಪೃಥ್ವಿ
14	ಪಂಚಲೋಹಗಳಲ್ಲೊಂದು	N	ಪೀತ
15	ಪಂಚವರ್ಣಗಳಲ್ಲೊಂದು	O	ರಘುವಂಶ ಮತ್ತು ಕುಮಾರಸಂಭವ
16	ಪಂಚಾಂಗಗಳಲ್ಲೊಂದು	P	ಜಾಗಟೆ
17	ಪಂಚಾಚಾರಗಳಲ್ಲೊಂದು	Q	ತಿಥಿ
18	ಪಂಚಾಮೃತಗಳಲ್ಲೊಂದು	R	ಹಿತ್ತಾಳೆ
19	ಪಂಚಾರತಿ	S	ವಾಮದೇವ
20	ಪಂಚೇಂದ್ರಿಯಗಳಲ್ಲೊಂದು	T	ಸದಾಚಾರ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರಗಳಿಗೆ ಕಾಗುಣಿತಾಕ್ಷರ ಸೇರಿಸಿ ಸುಳಿವು ಆಧರಿಸಿ 5 ಹೊಸ ಪದ ರಚಿಸಿ

	ಕ	ಸ	ಸುಳಿವು
1			ಹಣ
2			ಮಗು
3			ಒಂದು ತರಕಾರಿ
4			ಅಂಗಿಯ ಲಾಡಿ
5			ಕೃಷ್ಣನ ಮಾವ

ಕಳೆದ ಸಂಚಿಕೆಯ ಸರಿ ಉತ್ತರಗಳು

ಹೊಂದಿಸು ಆನಂದಿಸು
1- G 2-F 3- H 4- D 5-B 6-I 7-J 8-C 9-A 10-E

ಅದಲುಬದಲು 1 ಮರದರಸ 2 ಮಾವಿನಮಿಡಿ 3 ಹೇಳಲಾಗಿದೆ 4 ಮನನಮಾಡು

ಜಾಣಪದ ಆಟ 1 ಗಣಿ 2 ಗೋಣಿ 3 ಗಾಣ 4 ಗೇಣು 5 ಗಿಣಿ

ಮಜ ಮಜ ಮಜಕೂರದ ಜೂನ್ 5ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಸರಸ್ವತಿ ಎಂ. ವರದಪುರ

ಪ್ರತೀಕ್ಷಾ ಜೋಯ್ಸ್ ಆನಂದಪುರ

ನಂದಿತಾ ಎಸ್.ಎಂ. ಬೆಂಗಳೂರು

ಇಂಧನ ಬೇಡಿಕೆ ಶೇ 24 ಹೆಚ್ಚಳ



ಬೆಂಗಳೂರು (ರಾಯಿಟರ್ಸ್): ದೇಶದ ಇಂಧನ ಬೇಡಿಕೆಯು 2021ರ ಮೇ ತಿಂಗಳಿಗೆ ಹೋಲಿಸಿದರೆ 2022ರ ಮೇ ನಲ್ಲಿ ಶೇ 23.8ರಷ್ಟು ಏರಿಕೆ ಆಗಿದೆ.

ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಮಾಹಿತಿಯ ಪ್ರಕಾರ, ಮೇ ನಲ್ಲಿ ಇಂಧನ ಬೇಡಿಕೆಯು 1.82 ಕೋಟಿ ಟನ್ ಆಗಿದೆ. 2021ರ ಏಪ್ರಿಲ್ ನಂತರ ಕಂಡುಬಂದಿರುವ ಗರಿಷ್ಠ ಮಟ್ಟದ ಬೇಡಿಕೆ ಇದಾಗಿದೆ.

ಡೀಸೆಲ್ ಬಳಕೆಯು ಕಳೆದ ವರ್ಷದ ಮೇಗೆ ಹೋಲಿಸಿದರೆ ಈ ವರ್ಷದ ಮೇನಲ್ಲಿ ಶೇ 31.7ರಷ್ಟು ಹೆಚ್ಚಾಗಿದ್ದು, 72.9 ಲಕ್ಷ ಟನ್‌ಗೆ ತಲುಪಿದೆ. 2019ರ ಮೇಗೆ ಹೋಲಿಸಿದರೆ ಶೇ 32.6ರಷ್ಟು ಏರಿಕೆ ಆಗಿದೆ. ಪೆಟ್ರೋಲ್ ಬಳಕೆಯು ಶೇ 51.5ರಷ್ಟು ಹೆಚ್ಚಾಗಿ 30 ಲಕ್ಷ ಟನ್‌ಗೆ ತಲುಪಿದೆ.

2021ರ ಮೇನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಗರಿಷ್ಠ ಮಟ್ಟದಲ್ಲಿ ಇತ್ತು. ಇದರಿಂದಾಗಿ ಬೇಡಿಕೆಯು ತೀರಾ ಕಡಿಮೆ ಇತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470

ತಿಪಟೂರು ಕೊಬ್ಬರಿ

ಕನಿಷ್ಠ	13500
ಗರಿಷ್ಠ	14521
ಮಾದರಿ	14500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16200	16400	228.90 ಸೆಂಟ್ಸ್
ಎಸಿ	8960	9000	9025	
ಆರ್‌ಪಿ	9750	10050	10075	ಲಂಡನ್
ಆರ್‌ಸಿ	4800	4600	4625	2077 ಡಾಲರ್ಸ್

ಚಿನ್ನ, ಬೆಳ್ಳಿ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹53,520
ಆಭರಣ ಚಿನ್ನ (1 ಗ್ರಾಂ)	₹4,978
ಬೆಳ್ಳಿ (ಕೆ.ಜಿಗೆ)	₹63,600

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹512

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1500 (1515)
ಸೂರ್ಯಕಾಂತಿ (ರಿಫೈನ್ಡ್)	₹1765 (1775)
ಪಾಮೋಲಿನ್	₹1452(1470)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹390-826
ದ್ವಿತಳಿ (ಬಿ.ವಿ)	₹392-666

ವಿದೇಶಿ ಬಂಡವಾಳ ಹೊರಹರಿವು; ಬಡ್ಡಿದರ ಹೆಚ್ಚಳ ಪರಿಣಾಮ

ಕರಗಿತು ₹5.16 ಲಕ್ಷ ಕೋಟಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದೆ. ಮುಂಬೈ ಷೇರುಪೇಟೆಯಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹5.16 ಲಕ್ಷ ಕೋಟಿ ಕರಗಿದ್ದು, ಒಟ್ಟಾರೆ ಬಂಡವಾಳ ಮೌಲ್ಯವು ₹ 251.84 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 1465 ಅಂಶ ಕುಸಿತ ಕಂಡಿದ್ದರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 382 ಅಂಶ ಇಳಿಕೆ ಆಗಿದೆ.

ಜಾಗತಿಕ ವಿದ್ಯಮಾನಗಳು, ಆರ್‌ಬಿಐನಿಂದ ಬಡ್ಡಿದರ ಏರಿಕೆ ಹಾಗೂ ಹೊಂದಾಣಿಕೆಯ ನೀತಿ ಕೈಬಿಡುವ ನಿರ್ಧಾರ, ಹಣದುಬ್ಬರ ಹೆಚ್ಚಾಗುವ ಆತಂಕ... ಹೀಗೆ ಹಲವು ಅಂಶಗಳು ವಹಿವಾಟಿನ ಮೇಲೆ ಪರಿಣಾಮ ಬೀರಿದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಹೊರಹರಿವು ಮುಂದುವರಿದಿದೆ. ವಾರದ ವಹಿವಾಟಿನಲ್ಲಿ ₹ 12,663 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳೂ ನಷ್ಟ ಅನುಭವಿಸಿವೆ. ಮೊದಲ ಸ್ಥಾನದಲ್ಲಿ ಇರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಬಂಡವಾಳ ಮೌಲ್ಯ ₹44,311ಕೋಟಿ ಕಡಿಮೆ ಆಗಿದ್ದು,ಒಟ್ಟಾರೆ ಬಂಡವಾಳ ಮೌಲ್ಯ ₹18.36 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ಎರಡು ಮತ್ತು ಮೂರನೇ ಸ್ಥಾನದಲ್ಲಿ ಇರುವ ಟಿಸಿಎಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯವು ಕ್ರಮವಾಗಿ ₹ 26,875 ಕೋಟಿ ಮತ್ತು ₹16,433 ಕೋಟಿಗಳಷ್ಟು ಕರಗಿದೆ.

ಸುದ್ದಿ 2 ನಿಮಿಷ

7.14 ಕೋಟಿ ಐಟಿಆರ್ ಸಲ್ಲಿಕೆ

ಪಣಜಿ (ಪಿಟಿಐ): 'ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಯಲ್ಲಿ (ಐಟಿಆರ್) ಏರಿಕೆ ಆಗುತ್ತಿದೆ' ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಅಧ್ಯಕ್ಷೆ ಸಂಗೀತಾ ಸಿಂಗ್ ಶನಿವಾರ ತಿಳಿಸಿದ್ದಾರೆ

'2020–21ನೇ ಹಣಕಾಸು ವರ್ಷದಲ್ಲಿ 6.9 ಕೋಟಿ ಐಟಿಆರ್ ಸಲ್ಲಿಕೆ ಆಗಿತ್ತು. 2021–22ನೇ ಹಣಕಾಸು ವರ್ಷದಲ್ಲಿ 7.14 ಕೋಟಿಗೆ ಏರಿಕೆ ಆಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ತೆರಿಗೆ ಪಾವತಿದಾರರ ಸಂಖ್ಯೆ ಮತ್ತು ಪರಿಷ್ಕೃತ ರಿಟರ್ನ್ಸ್ ಸಲ್ಲಿಸುವವರ ಸಂಖ್ಯೆಯಲ್ಲಿ ಏರಿಕೆ ಆಗುತ್ತಿದೆ. ಆರ್ಥಿಕತೆಯು ಬೆಳವಣಿಗೆ ಕಾಣುತ್ತಿದ್ದರೆ ತೆರಿಗೆ ಸಂಗ್ರಹವೂ ಹೆಚ್ಚಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ವೇಗ ದೊರೆತಂತೆ ಖರೀದಿ ಮತ್ತು ಮಾರಾಟದಲ್ಲಿ ಏರಿಕೆ ಆಗುತ್ತದೆ ಎಂದಿದ್ದಾರೆ.

'2021–22ರಲ್ಲಿ ಸಂಗ್ರಹ ಆಗಿರುವ ತೆರಿಗೆ ಮೊತ್ತವು ಅದಕ್ಕೂ ಹಿಂದಿನ ಹಣಕಾಸು ವರ್ಷಕ್ಕಿಂತ ₹ 14 ಲಕ್ಷ ಕೋಟಿ ಹೆಚ್ಚಿಗೆ ಇದೆ' ಎಂದು ಮಾಹಿತಿ ನೀಡಿದ್ದಾರೆ.

'ಡಿಜಿಟಲ್ ಇಂಡಿಯಾ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ತೆಗೆದುಕೊಂಡಿರುವ ಕ್ರಮಗಳಿಂದಾಗಿಯೂ ತೆರಿಗೆ ಸಂಗ್ರಹ ಹೆಚ್ಚಾಗುತ್ತಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಜನರು ಡಿಜಿಟಲ್ ಪಾವತಿಗೆ ಹೆಚ್ಚು ಗಮನ ಹರಿಸಿದರು. ಇದರಿಂದಾಗಿ ಡಿಜಿಟಲ್ ಪಾವತಿಯ ಬಗ್ಗೆ ಜನರ ಮನೋಭಾವ ಬದಲಾಯಿತು. ಸಕಾಲಕ್ಕೆ ತೆರಿಗೆ ಪಾವತಿಸುವ ಕುರಿತು ಜನರಿಗೆ ತಿಳಿವಳಿಕೆ ಮೂಡಿಸಿರುವುದು ಸಹ ತೆರಿಗೆ ಸಂಗ್ರಹದಲ್ಲಿ ಏರಿಕೆಗೆ ಕಾರಣವಾಗಿದೆ' ಎಂದು ಅವರು ಹೇಳಿದ್ದಾರೆ.

'ತ್ವರಿತ ಚೇತರಿಕೆ ಕಂಡ ಆರ್ಥಿಕತೆ'

ಗುರುಗ್ರಾಮ (ಪಿಟಿಐ): ಭಾರತದ ಆರ್ಥಿಕತೆಯು ಕೋವಿಡ್–19 ಸಾಂಕ್ರಾಮಿಕವು ಸೃಷ್ಟಿಸಿದ ಬಿಕ್ಕಟ್ಟಿನಿಂದ ಅತ್ಯಂತ ವೇಗವಾಗಿ ಚೇತರಿಕೆ ಕಂಡುಕೊಂಡಿದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ (ಸಿಇಎ) ಅನಂತ ನಾಗೇಶ್ವರನ್ ಹೇಳಿದ್ದಾರೆ.

ಹರಿಯಾಣದ ಸಾರ್ವಜನಿಕ ಆಡಳಿತ ಸಂಸ್ಥೆಯಲ್ಲಿ (ಎಚ್‌ಐಪಿಎ) ನಡೆದ 'ಭಾರತದ ಆರ್ಥಿಕತೆ: ನಿರೀಕ್ಷೆ, ಸವಾಲುಗಳು ಮತ್ತು ಕಾರ್ಯಸೂಚಿ' ವಿಷಯದ ಕುರಿತ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು. ಪ್ರಮುಖ ಆರ್ಥಿಕ ಚಟುವಟಿಕೆಗಳು ಹಾಗೂ ಅಂಶಗಳು ಕೋವಿಡ್‌ಗೂ ಮುಂಚಿನ ಮಟ್ಟವನ್ನು ದಾಟಿವೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ನೀತಿಯ ಹಂತದಲ್ಲಿ ತ್ವರಿತ ಮತ್ತು ನಿಖರವಾದ ಕ್ರಮಗಳನ್ನು ತೆಗೆದುಕೊಂಡಿದೆ. ಸಕಾಲಕ್ಕೆ ಆರ್‌ಬಿಐ ಮಧ್ಯಪ್ರವೇಶದಿಂದಾಗಿ ಸರ್ಕಾರ ತೆಗದುಕೊಂಡ ಕ್ರಮಗಳಿಗೆ ಬೆಂಬಲ ದೊರೆತಿದೆ ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಂದಾಜಿನಂತೆಯೇ ಭಾರತದ ಜಿಡಿಪಿ ಗಾತ್ರವು 2027ರ ಒಳಗಾಗಿ ₹ 385 ಲಕ್ಷ ಕೋಟಿಯನ್ನು ತಲುಪುವ ವಿಶ್ವಾಸ ಇದೆ ಎಂದು ನಾಗೇಶ್ವರನ್ ಹೇಳಿದ್ದಾರೆ.

ಸಾಂಕ್ರಾಮಿಕದ 3 ಅಲೆಗಳು ಬಂದರೂ ಭಾರತದ ಆರ್ಥಿಕತೆಯು ಉತ್ತಮ ಚೇತರಿಕೆ ಕಂಡುಕೊಂಡಿದೆ ಎಂದು ಅಮೆರಿಕದ ಟ್ರಷರಿ ಹೇಳಿದೆ. ಎರಡನೇ ಅಲೆಯು 2021ರ ಮಧ್ಯಭಾಗದವರೆಗೂ ಬೆಳವಣಿಗೆಯ ಮೇಲೆ ತೀವ್ರ ಪರಿಣಾಮ ಬೀರಿತು. ಇದರಿಂದಾಗಿ ಆರ್ಥಿಕ ಚೇತರಿಕೆಯು ವಿಳಂಬ ಆಯಿತು. 2021ರ ಎರಡನೇ ಭಾಗದಲ್ಲಿ ಲಸಿಕೆ ನೀಡುವ ಕಾರ್ಯ ಚುರುಕುಗೊಂಡ ಬಳಿಕ ಆರ್ಥಿಕ ಚೇತರಿಕೆಗೆ ವೇಗ ದೊರೆಯಿತು ಎಂದು ವರದಿಯಲ್ಲಿ ತಿಳಿಸಿದೆ.

'ಸುಶಿಕ್ಷಿತೆ ಎಂಬ ಕಾರಣಕ್ಕೆ ಉದ್ಯೋಗಕ್ಕೆ ಒತ್ತಾಯಿಸುವಂತಿಲ್ಲ'

ಮುಂಬೈ (ಪಿಟಿಐ): ಮಹಿಳೆ ಸುಶಿಕ್ಷಿತೆ ಎಂಬ ಕಾರಣಕ್ಕೆ ಕೆಲಸ ಮಾಡಲೇಬೇಕು ಎಂದು ಒತ್ತಾಯಿಸುವಂತೆ ಇಲ್ಲ ಎಂದು ಬಾಂಬೆ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪರಿತ್ಯಕ್ತ ಪತ್ನಿಗೆ ಜೀವನಾಂಶ ಪಾವತಿಸಲು ನಿರ್ದೇಶಿಸಿದ ನ್ಯಾಯಾಲಯದ ಆದೇಶದ ವಿರುದ್ಧ ವ್ಯಕ್ತಿಯ ಮನವಿ ಆಲಿಸಿದ ಕೋರ್ಟ್ ಈ ರೀತಿ ಹೇಳಿದೆ.

ಪುಣೆಯ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ವ್ಯಕ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಭಾರತಿ ಡಾಂಗ್ರೆ ಅವರ ಏಕ ಸದಸ್ಯ ಪೀಠ, 'ಶೈಕ್ಷಣಿಕ ಪದವಿ ಪಡೆದಿದ್ದರೂ ಕೆಲಸ ಮಾಡುವ ಅಥವಾ ಮನೆಯಲ್ಲಿ ಉಳಿಯುವ ಆಯ್ಕೆ ಆಕೆಗೆ ಬಿಟ್ಟಿದ್ದು. ಮಹಿಳೆ (ಆರ್ಥಿಕವಾಗಿ) ಕೊಡುಗೆ ನೀಡಬೇಕು ಎಂಬುದನ್ನು ಸಮಾಜ ಇನ್ನೂ ಒಪ್ಪಿಕೊಂಡಿಲ್ಲ. ಕೆಲಸ ಮಾಡುವುದು ಆಕೆಯ ಆಯ್ಕೆ. ಉದ್ಯೋಗಕ್ಕೆ ಹೋಗುವಂತೆ ಒತ್ತಾಯಿಸುವಂತಿಲ್ಲ. ಪದವೀಧರೆ ಎಂಬ ಕಾರಣಕ್ಕೆ ಮನೆಯಲ್ಲಿ ಇರಬಾರದು ಎನ್ನುವಂತಿಲ್ಲ' ಎಂದು ಡಾಂಗ್ರೆ ಹೇಳಿದರು.

'ಇಂದು ನಾನು ನ್ಯಾಯಮೂರ್ತಿ. ನಾಳೆ, ನಾನು ಮನೆಯಲ್ಲಿ ಇರಬಹುದು ಎಂದು ಭಾವಿಸೋಣ. ಆಗ ನ್ಯಾಯಮೂರ್ತಿಯಾಗಲು ಅರ್ಹನಾಗಿರುವುದರಿಂದ ಮನೆಯಲ್ಲಿ ಕುಳಿತುಕೊಳ್ಳುವಂತಿಲ್ಲ ಎಂದು ಹೇಳುತ್ತೀರಾ' ಎಂದು ಪ್ರಶ್ನಿಸಿದರು.

ವ್ಯಕ್ತಿ ಪರ ವಾದಿಸಿದ ವಕೀಲರು, 'ಕೌಟುಂಬಿಕ ನ್ಯಾಯಾಲಯ ತನ್ನ ಕಕ್ಷಿದಾರನಿಗೆ ಜೀವನಾಂಶ ಪಾವತಿಸಲು ನಿರ್ದೇಶಿಸಿರುವುದು ಸರಿಯಲ್ಲ. ಏಕೆಂದರೆ ಆಕೆ ಶಿಕ್ಷಣ ಪಡೆದಿದ್ದು, ಕೆಲಸ ಮಾಡುವ ಸಾಮರ್ಥ್ಯ ಹೊಂದಿದ್ದಳು' ಎಂದರು.

ಪತ್ನಿಗೆ ಪ್ರತಿ ತಿಂಗಳು ₹5 ಸಾವಿರ ಮತ್ತು ತನ್ನ 13 ವರ್ಷದ ಮಗಳ ಪೋಷಣೆಗೆ ₹7 ಸಾವಿರ ನೀಡುವಂತೆಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದ್ದರು.

'ಮಂಗೋಲಿಯಾಗೆ ಬುದ್ಧನ ಕುರುಹು'

ನವದೆಹಲಿ (ಪಿಟಿಐ): ಇದೇ 14ರಂದು ಮಂಗೋಲಿಯಾದಲ್ಲಿ ನಡೆಯಲಿರುವ ಬುದ್ಧ ದಿನಕ್ಕೆ ಕಾನೂನು ಸಚಿವ ಕಿರಣ್ ರಿಜಿಜು ಅವರ ನೇತೃತ್ವದ 25 ಮಂದಿಯ ನಿಯೋಗವುಭಾರತದಿಂದ ಬುದ್ಧನ ಕುರುಹುಗಳನ್ನು ಕೊಂಡೊಯ್ಯಲಿದೆ.

ಪವಿತ್ರ ಕುರುಹುಗಳನ್ನು ಭಾರತೀಯ ವಾಯುಪಡೆಯ ಸಿ–17 ಗ್ಲೋಬ್ ಮಾಸ್ಟರ್ ಸಾಗಣೆ ವಿಮಾನದಲ್ಲಿ ಕಳುಹಿಸಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಎರಡು ಪ್ರತ್ಯೇಕ ಎನ್‌ಕೌಂಟರ್: ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಶನಿವಾರ ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆಗೆ ಸೇರಿದ ರಶಿಕ್ ಅಹ್ಮದ್ ಗನಿ ಎಂಬ ಹೆಸರಿನ ಭಯೋತ್ಪಾದಕನನ್ನು ಗಡಿ ಭದ್ರತಾ ಪಡೆಯ ಸಿಬ್ಬಂದಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಜಿಲ್ಲೆಯ ಖಾಂಡಿಪೊರಾ ಪ್ರದೇಶದಲ್ಲಿ ಉಗ್ರರಿರುವ ಬಗ್ಗೆ ಖಚಿತ ಮಾಹಿತಿ ಪಡೆದಿದ್ದ ಭದ್ರತಾ ಪಡೆ, ಶೋಧ ಕಾರ್ಯಾಚರಣೆ ನಡೆಸಿತ್ತು. ಈ ವೇಳೆ ಭಯೋತ್ಪಾದಕರು ಸಿಬ್ಬಂದಿಯ ಮೇಲೆ ಗುಂಡಿನ ದಾಳಿ ನಡೆಸಿದರು. ಪ್ರತಿದಾಳಿ ನಡೆಸಿದಾಗ ಒಬ್ಬ ಶೌಚ್ ಕುಲ್‌ಗಾಮ್ ಪ್ರದೇಶದ ಒಬ್ಬ ಭಯೋತ್ಪಾದಕ ಹತನಾದ' ಎಂದು ಹೇಳಿದರು.

ಪುಲ್ವಾಮಾದ ದ್ರಬ್ಗಮ್ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆಯನ್ನು ನಡೆಸುವ ವೇಳೆ ಭದ್ರತಾ ಪಡೆಯ ಸಿಬ್ಬಂದಿಯಿಂದ ಮತ್ತೊಬ್ಬ ಭಯೋತ್ಪಾದಕ ಹತನಾಗಿದ್ದಾನೆ. ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು – ಕಾಶ್ಮೀರ ಹೆದ್ದಾರಿಯಲ್ಲಿ ಸ್ಫೋಟಕ ಪತ್ತೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶ್ರೀನಗರ– ಬಾರಾಮುಲ್ಲಾ ಹೆದ್ದಾರಿಯಲ್ಲಿ ಭದ್ರತಾ ಪಡೆಗಳು ಸ್ಫೋಟಕ (ಐಇಡಿ) ವಶಪಡಿಸಿಕೊಂಡಿದ್ದು, ಭಾರಿ ದುರಂತವೊಂದು ತಪ್ಪಿದಂತಾಗಿದೆ.

ಸೇನೆಯ '5 ರಾಷ್ಟ್ರೀಯ ರೈಫಲ್ಸ್' ಪಡೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬಾರಾಮುಲ್ಲಾ ಜಿಲ್ಲೆಯ ಸಂಗ್ರಾಮದ ಪುಟ್ಟಾ ಎಂಬಲ್ಲಿ ಸ್ಫೋಟಕವನ್ನು ವಶಪಡಿಸಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಖಾಲಿ ಉತ್ತರ ಪತ್ರಿಕೆ ನೀಡಿದವರಿಗೂ ನೇಮಕಾತಿ ಪತ್ರ: ಸಿಬಿಐ ಮಾಹಿತಿ

ಕೋಲ್ಕತ್ತ (ಪಿಟಿಐ): ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ನಡೆದ ಅಕ್ರಮದಲ್ಲಿ ಪಶ್ಚಿಮ ಬಂಗಾಳ ಶಿಕ್ಷಣ ಇಲಾಖೆಯ ಹಲವು ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ಸಿಬಿಐ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆ ಪ್ರಕಾರ, ಖಾಲಿ ಉತ್ತರ ಪತ್ರಿಕೆ ನೀಡಿದ ಅಭ್ಯರ್ಥಿಗಳಿಗೂ ನೇಮಕಾತಿ ಪತ್ರ ನೀಡಿರುವುದು ಪತ್ತೆಯಾಗಿದೆ. ಉತ್ತರ ಪತ್ರಿಕೆಯಲ್ಲಿ ಕೇವಲ ತಮ್ಮ ಹೆಸರು, ನೋಂದಣಿ ಸಂಖ್ಯೆ ಮಾತ್ರ ನಮೂದಿಸಿದ್ದಾರೆ. ಅಕ್ರಮದಲ್ಲಿ ಕಿರಿಯ ಅಧಿಕಾರಿಗಳು, ಗುಮಾಸ್ತರು ಶಾಮೀಲಾಗಿದ್ದಾರೆ ಎಂದು ಅವರು ಆರೋಪಿಸಿದರು.

ಹೆಸರು, ನೋಂದಣಿ ಸಂಖ್ಯೆ ಇರುವ ಹಲವು ಉತ್ತರ ಪತ್ರಿಕೆಗಳು ಪತ್ತೆಯಾಗಿವೆ. ನೇಮಕಾತಿಗೂ ಮೊದಲು ಅಧಿಕಾರಿಗಳು ಮತ್ತು ಅಭ್ಯರ್ಥಿಗಳ ನಡುವೆ ಭಾರಿ ಹಣದ ವಹಿವಾಟು ನಡೆದಿರುವ ಬಗ್ಗೆ ಸಾಕ್ಷ್ಯಗಳು ದೊರೆತಿದೆ ಎಂದು ತಿಳಿಸಿದರು.

ಹೈಕೋರ್ಟ್ ಸೂಚನೆ ಮೇರೆಗೆ ಸಿಬಿಐ ತನಿಖೆ ನಡೆಸುತ್ತಿದ್ದು, ಈ ಸಂಬಂಧ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಅವರನ್ನು ವಿಚಾರಣೆಗೆ ಒಳಪಡಿಸಿದೆ.

ಆಮ್ಲಜನಕ ಕೊರತೆ: ರೋಗಿ ಸಾವು

ನವದೆಹಲಿ (ಪಿಟಿಐ): ದೆಹಲಿಯ ರೋಹಿಣಿ ಪ್ರದೇಶದ ಆಸ್ಪತ್ರೆಯೊಂದರಲ್ಲಿ ಶನಿವಾರ ಬೆಳಗಿನ ಜಾವ ಬೆಂಕಿ ಕಾಣಿಸಿಕೊಂಡಿದ್ದು, ವಿದ್ಯುತ್ ವ್ಯತ್ಯಯದಿಂದ ಉಂಟಾದ ಆಮ್ಲಜನಕ ಕೊರತೆಯಿಂದ 64 ವರ್ಷದ ರೋಗಿ ಮೃತಪಟ್ಟಿದ್ದಾರೆ. ಬ್ರಹ್ಮ ಶಕ್ತಿ ಆಸ್ಪತ್ರೆಯ ಮೂರನೇ ಮಹಡಿಯಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ.

ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ ರೋಗಿ ಹೋಳಿ ಎಂಬುವರನ್ನು ರಕ್ಷಿಸಲಾಯಿತು. ಆದರೆ ಆಮ್ಲಜನಕ ಕೊರತೆಯಿಂದ ಮೃತಪಟ್ಟರು. ವಿವಿಧ ಸೆಕ್ಷನ್ ಅಡಿ ಆಸ್ಪತ್ರೆ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಡಿಸಿಪಿ ಪ್ರಣವ್ ತಯಾಳ್ ತಿಳಿಸಿದರು.

ಕಾರು ಹೊಂಡಕ್ಕೆ ಬಿದ್ದು 9 ಸಾವು

ಪೂರ್ನಿಯಾ, ಬಿಹಾರ (ಪಿಟಿಐ): ಬಿಹಾರದ ಪೂರ್ನಿಯಾ ಜಿಲ್ಲೆಯಲ್ಲಿ ಶನಿವಾರ ಮುಂಜಾನೆ ಕಾರೊಂದು ರಸ್ತೆ ಬದಿಯ ಹೊಂಡಕ್ಕೆ ಬಿದ್ದುದರಿಂದ ಒಂಬತ್ತು ಮಂದಿ ಸಾವಿಗೀಡಾಗಿದ್ದಾರೆ ಹಾಗೂ ಇಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪೂರ್ನಿಯಾದ ತಾರಾಬಾದ್‌ನಲ್ಲಿ ತಿಲಕ ಕಾರ್ಯಕ್ರಮವನ್ನು (ಮದುವೆಗೂ ಮುನ್ನದ ಕಾರ್ಯಕ್ರಮ) ಮುಗಿಸಿಕೊಂಡು ಕಿಶನ್‌ಗಂಜ್ ಜಿಲ್ಲೆಯ ನಾನಿಯಾ ಗ್ರಾಮಕ್ಕೆ ತೆರಳುತ್ತಿದ್ದರು' ಎಂದು ಬೈಸಿಯ ಉಪವಿಭಾಗಾಧಿಕಾರಿ ಕುಮಾರಿ ತೌಶಿ ಹೇಳಿದರು.

ಮುಂಬೈ ಧಾರಣೆ

ಶೇಂಗಾ 11-6-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10350-10400
ದಪ್ಪ ಗುಜರಾತ್(ಹೊಸ)	11150-11200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1450 (1460)
ಪಾಮ್ ವಾರದ ಡೆಲಿವರಿ	1450 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,650 (50,650)
ಬೆಳ್ಳಿ ಕೆ.ಜಿ 61,800 (60,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ತಕ್ಷಣ ಬೇಕಾಗಿದ್ದಾರೆ: ಹೌಸ್‌ಕೀಪಿಂಗ್, ಆಫೀಸ್‌ಬಾಯ್, ಆಫೀಸ್ ಅಸಿಸ್ಟೆಂಟ್,ಸಿವಿಲ್ ಹೆಲ್ಪರ್, ಐಟಿಐ ಕ್ವಾಲಿಫೈಡ್ ಟೆಕ್ನಿಷಿಯನ್.ಸಂಬಳ: 12,500-15,000/-. ಸಂಪರ್ಕಿಸಿ: 080-26951212 / 9148578592

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

ಕಾರ್ಪೊರೇಟ್ ಕಂಪನಿಯಲ್ಲಿ ಟ್ರೈನಿಂಗ್ನೊಂದಿಗೆ 30 ಸಾವಿರ ಸಂಬಳ. ಪದವೀಧರರಿಗೆ ಮಾತ್ರ. ಕರೆ ಮಾಡಿ 7605058339

Marketing & Sales

EXECUTIVES/ MANAGERS in Marketing Required-for a Pharmaceutical Company for South-India region,2.to 6years Experience,Salary+ attractive Sales incentives.Ct: hr.trroylifesciences @gmail.com/ 9606036219

WEEKEND CORNER
ಕ್ಲಾಸಿಫೈಡ್ಸ್

HARIPRASAD'S IAS•KAS•INSTITUTE
Vijayanagar, Bangalore-560104
IAS 2022-23
ಕನ್ನಡ ಸಾಹಿತ್ಯ
ಡಾ. ನರಹಳ್ಳಿ ಬಾಲಸುಬ್ರಮಣ್ಯ [ಖ್ಯಾತ ಸಾಹಿತಿಗಳು ಮತ್ತು ವಿಮರ್ಶಕರು]
ಸಾಹಿತಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ
23 ಜೂನ್ 2022 ರಿಂದ ತರಗತಿಗಳು ಪ್ರಾರಂಭ
Learn From India's Best Teacher For UPSC
KAS / PSI
48ನೇ ಬ್ಯಾಚ್‌ಗೆ ಪ್ರವೇಶ ಪ್ರಾರಂಭ
50% Fees Return
KAS ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದಲ್ಲಿ [ಕೆಲವು ನಿಬಂಧನೆಗಳಿಗೆ ಒಳಪಟ್ಟಿದ್ದು]
Classes Start From : 16th June 2022
✆: 9740472728 / 8660661366

ಅನುಭವಿ ಜ್ಯೋತಿಷ್ಯಗೆ ಒಂದು ಪ್ರಶ್ನೆ

ಮೀನ–12	ಮೇಷ–1	ವೃಷಭ–2	ಮಿಥುನ–3
ಕುಂಭ–11	K. R. ಸತೀಶ		ರಾಹು / ಕಟಕ–4
ಮಕರ 10: ಸೂರ್ಯ ಚಂದ್ರ ಕುಜ ಬುಧ ಗುರು ಶುಕ್ರ ಶನಿ ಕೇತು ಲಗ್ನ	ನಕ್ಷತ್ರ ಉತ್ತರಾಷಾಢ–ಪಾದ–4, ಜನ್ಮ ರಾಶಿ–ಮಕರ, ಜನ್ಮ ಲಗ್ನ–ಮಕರ, ವಾರ–ಭಾನುವಾರ, ಜನನ ಕಾಲ ಬೆಳಿಗ್ಗೆ 6.30, ಯೋಗ ಸಿದ್ಧಿ, ಕೃಷ್ಣ ಪಕ್ಷ ಚತುರ್ಥಿ, ಜನನ ತಾ.........., ...ತಿಳಿಸಿ, ಉತ್ತರ ನಮ್ಮ ಬಳಿ ಇದೆ.		ಸಿಂಹ–5
ಧನುಸ್ಸು–9	ವೃಶ್ಚಿಕ–8	ತುಲಾ–7	ಕನ್ಯಾ–6

RAMASWAMY
ನಿವೃತ್ತ ಅಧಿಕಾರಿ (HAL -Over haul)

ಮೇಲೆ ತಿಳಿಸಿರುವ ಜನ್ಮ ಕುಂಡಲಿಯನ್ನು ಯಾವುದೇ ಜ್ಯೋತಿಷ್ಯರು ಚೆನ್ನಾಗಿ ಪರಿಶೀಲಿಸಿ, ಯಾವುದಾದರೂ ಒಂದು ಹೆಸರಾಕಿ, ಜನನ ತಾರೀಖು, ತಿಂಗಳು ಮತ್ತು ವರ್ಷವನ್ನು ಬರೆದು, ನಮಗೆ ಮೊಬೈಲ್, ಮುಖಾಂತರ ಇದು ಪ್ರಕಟಣೆಯಾದ 48 ಗಂಟೆಯೊಳಗೆ ತಿಳಿಸಿ, ಅಂದರೆ 14–06–2022 ರ ಬೆಳಿಗ್ಗೆ11:00 ಗಂಟೆಯೊಳಗೆ ಸರಿಯಾದ ಉತ್ತರ ತಿಳಿಸಿದರೆ, ಅವರಿಗೆ ಎರಡು ಸಾವಿರ ರೂಪಾಯಿ ಬಹುಮಾನ ಕೊಟ್ಟು ಧನ್ಯವಾದ ಹೇಳುತ್ತೇನೆ. ತಿಳಿಸುವವರ ಮೊಬೈಲ್ ಸಂಖ್ಯೆ, ಹೆಸರು, ವಿಳಾಸ ತಿಳಿಸಿ, ಕುಂಡಲಿಯಲ್ಲಿ ಮಕರ ಒಂದೇ ರಾಶಿಯಲ್ಲಿ ಎಂಟು ಗ್ರಹಗಳು ಮತ್ತು ಲಗ್ನ ಇದೆ ಗಮನಿಸಿ. ರಾಹು ಮಾತ್ರ ಕಟಕದಲ್ಲಿದ್ದಾನೆ. ಇಂಥಹ ಜಾತಕದಲ್ಲಿ ಶತಮಾನಕ್ಕೆ 4–5 ಜನ ಜನಿಸುತ್ತಾರೆ. ಉಳಿದ ಎಲ್ಲಾ ವಿವರವನ್ನು ನಾವೇ ತಿಳಿಸಿದ್ದೇವೆ. ನೀವು ತಾ/ತಿಂ/ವರ್ಷ ಬರೆದರೆ ಸಾಕು, ಈ ಜನ್ಮ ಕುಂಡಲಿ ಸರಿಯಾಗಿರಬೇಕು. ಜಾತಕನ ಹೆಸರು ಮುಖ್ಯವಲ್ಲ. ಬಹುಮಾನ ಮೊದಲು ಉತ್ತರಿಸಿದವರಿಗೆ ಕೊಡುತ್ತೇವೆ. ತಪ್ಪಿದ್ದರೆ ನಾವು ಕ್ಷಮಾಪಣೆ ಕೇಳುತ್ತೇವೆ.
Contact: RAMASWAMY ASTROLEGER
ರಾಮಸ್ವಾಮಿ ಜೋತಿಷ್ಯ ಮತ್ತು ಲೇಖಕರು
1176/1, 36th Main Road, Poornapragna Nagara, Uttarahalli, Bangalore-560061
M: 94482 43757, 94816 43757

WANTED SALES Person / Staff Location - Jayanagar /Malleshwaram Contact 9844187234 Sanjay Jewellers

Wanted

WANTED MARRIED hindu couple husband as driver not more than 40 years and wife as Cook for a family of 5 at Bangalore Good salary Accommodation and food Police verification will be made Call 9741900909

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Marathahalli

COMMERCIAL Building Space for rent at (Madhuloka building, next to Nandana hotel, near vims hospital, Outer Ring Road, Marathahalli), Near (landmark; Radisson blu hotel, Marathahalli) - 1st Floor available for rent (Size 2328.57) Sq. Ft. Tel: 9844441088. WhatsApp ;- 9164019777.

Commercial Land

Out-Station

HASSAN BELURU Road Ring Road to 3 km 45000 Sqft Commercial Alination Land Contact: 9590353813

Commerical

Wilson Garden

PRIME COMMERCIAL corner site for sale measuring 2800 sq ft on banerghatta road, opposite Bosch gate, wilson garden suitable for granite showrooms, contact-9900161826

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಟೀ ಮಾರಾಟಕ್ಕೆ
ಮೇಘಮಲೈ, ತಲೆಯಾರ್, ರಾಕ್‌ವುಡ್, ಬ್ರಿಯಾರ್ ಟೀ ಎಸ್ಟೇಟ್‌ಗಳಿಂದ ಟೀ ಪ್ಯಾಕೆಟ್ ನೇರ ಮಾರಾಟ
ಸಂಪರ್ಕಿಸಿ 8870601744 / 9487531481
WOODBRIAR GROUP
Coimbatore
Producers of Monica, Injipara, Srikundra, Pudhuthottam, Murugan, Venniar, Manalaar
Woodbriar, Sussex, Bulk Tea

ವ್ಯಾಪಾರ

Business to Business

Services

ನಾವು ವೈಯಕ್ತಿಕ, ವ್ಯಾಪಾರ, ಆಸ್ತಿ, ಕೃಷಿ ಮತ್ತು ಶೈಕ್ಷಣಿಕ ಸಾಲವನ್ನು ಒದಗಿಸುತ್ತೇವೆ. (ಏಜೆಂಟರು ಸ್ವಾಗತ) Ph. 8222841175, 8278291749

ಭವಿಷ್ಯ

Astrology

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಪ್ರವಾಸ

Travel

13.7.2022 13/7ದಿನಗಳು ವಿಮಾನ,ACಬಸ್, ಊಟ,ರೂಂ ವಸತಿಯೊಂದಿಗೆ ಕಾಶಿ,ಗಯಾ, ಆಗ್ರಾ,ದೆಹಲಿ,ಅಯೋಧ್ಯ, ನೈಮಿಷರಣ್ಯಾ.,04.09.2022 12ದಿನಗಳು ನೇಪಾಳ,ಕಠ್ಮಂಡು, ಮುಕ್ತಿನಾಥ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).6363416487/ 9902433500

★ಶ್ರೇಯಸ್ ಟೂರ್ಸ್★ 17.06.2022 8ದಿನಗಳು ಡಾರ್ಜಲಿಂಗ್,ಗ್ಯಾಂಗಟೆಕ್, ನಾಂಚಿ,ಮಿರಿಕ್,ಲಾಚೆನ್, 05.07.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ(ಅಮರಕಂಟಕ, ಮಯ್ಯಾರ್,ಚಿತ್ರಕೂಟ,ಕಳ್ಳೆಂಜರ್ ಸಹಿತ),05.07.2022 13ದಿನಗಳು ಚಂಡೀಗಡ್,ಸಿಮ್ಲಾ,ಮನಾಲಿ, 5ದೇವಿಯರು,ವೈಷ್ಣೋದೇವಿ, ಡಾಲ್‌ಹೌಸಿ,ಜಮ್ಮು, ಅಮೃತಸರ್,ಕುರುಕ್ಷೇತ್ರ, 22.07.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ ಸಹಿತ). 22.07.2022 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.(ವಲ್ಲಭಭಾಯಿ ಪ್ರತಿಮೆ,ನಿಷ್ಕಳಂಕ,ಡಿಯು ಸಹಿತ) 8073824856/ 9206979202/ 6366322639

9.7.2022 ಗುಜರಾತ್, ಮಧ್ಯಪ್ರದೇಶ್4.9.2022, 3.10.2022ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್4.9.2022, 4.10.2022ದೆಹಲಿ, ಅಮೃತ್‌ಸರ್, ವೈಷ್ಣೋದೇವಿ,ಕಾಶಿ, ಪ್ರಯಾಗ್‌ರಾಜ್, ಗಯಾ,ನೇಪಾಳ, ಮುಕ್ತಿನಾಥ್, ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
ಪ್ರಜಾವಾಣಿ

Classifieds
EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

In Loving Remembrance

Hosadu Stany Dias
Born: 01-06-1950 - Died : 12-06-2004
We miss you every moment of our lives. Your memories can never fade away from our heart. Super Dad, Loving Husband and a Wonderful Human Being. - Rest in Peace
Deeply Mourned by: Wife, Children & Family.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಾಹುಲ್ ಶ್ರೀವಾಸ್ತವ್– ಟ್ವಿಟರ್ ಚಿತ್ರ

ರಾಹುಲ್ 74ನೇ ಗ್ರ್ಯಾಂಡ್‌ಮಾಸ್ಟರ್

ಚೆನ್ನೈ (ಪಿಟಿಐ): ತೆಲಂಗಾಣದ ಚೆಸ್ ಸ್ಪರ್ಧಿ ಪಿ.ರಾಹುಲ್ ಶ್ರೀವಾಸ್ತವ್ ಅವರು ಭಾರತದ 74ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡರು.

ಫಿಡೆ ರೇಟಿಂಗ್‌ನಲ್ಲಿ 2,500 ಎಲೊ ಪಾಯಿಂಟ್ಸ್ ಗಡಿಯನ್ನು ತಲುಪಿದ್ದರಿಂದ ಅವರಿಗೆ ಈ ಪದವಿ ದೊರೆತಿದೆ. 19 ವರ್ಷದ ರಾಹುಲ್ ಅವರು ಇಟಲಿಯಲ್ಲಿ ನಡೆಯುತ್ತಿರುವ ಕ್ಯಾಥೊಲಿಕಾ ಚೆಸ್ ಫೆಸ್ಟಿವಲ್‌ನ ಎಂಟನೇ ಸುತ್ತಿನಲ್ಲಿ ಡ್ರಾ ಸಾಧಿಸಿದರು. ಈ ಟೂರ್ನಿಗೂ ಮುನ್ನ ಅವರು 2,468 ಎಲೊ ಪಾಯಿಂಟ್ ಹೊಂದಿದ್ದರು.

100 ಗ್ರ್ಯಾಂಡ್‌ಮಾಸ್ಟರ್‌ಗಳನ್ನು ಪಡೆಯುವ ಹಾದಿಯಲ್ಲಿ ಭಾರತ, ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ರಾಹುಲ್, ಭಾರತದ 74ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿಕೊಂಡಿದ್ದಾರೆ.

ಚೆಸ್: ಆನಂದ್‌ಗೆ ಮೂರನೇ ಸ್ಥಾನ

ಸ್ಟಾವೆಂಜರ್, ನಾರ್ವೆ (ಪಿಟಿಐ): ಭಾರತದ ವಿಶ್ವನಾಥನ್ ಆನಂದ್ ಅವರು ಇಲ್ಲಿ ಕೊನೆಗೊಂಡ ನಾರ್ವೆ ಚೆಸ್ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆದುಕೊಂಡರು. ಮ್ಯಾಗ್ನಸ್ ಕಾರ್ಲ್‌ಸನ್ ಪ್ರಶಸ್ತಿ ಗೆದ್ದರು.

ಶನಿವಾರ ನಡೆದ ಒಂಬತ್ತನೇ ಹಾಗೂ ಕೊನೆಯ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್, ನಾರ್ವೆಯ ಆರ್ಯನ್ ತರಿ ವಿರುದ್ಧ ಗೆದ್ದರು. ಇವರ ನಡುವಿನ ಕ್ಲಾಸಿಕಲ್ ಪಂದ್ಯ 22 ನಡೆಗಳ ಬಳಿಕ ಡ್ರಾದಲ್ಲಿ ಕೊನೆಗೊಂಡರೆ, ಆರ್ಮಗೆಡನ್ (ಸಡನ್ ಡೆತ್) ಗೇಮ್‌ನಲ್ಲಿ ಆನಂದ್ 87 ನಡೆಗಳಲ್ಲಿ ಜಯ ಸಾಧಿಸಿದರು. ಆನಂದ್ ಒಟ್ಟು 14.5 ಪಾಯಿಂಟ್ಸ್ ಕಲೆಹಾಕಿದರು. ನಾರ್ವೆಯ ಕಾರ್ಲ್‌ಸನ್ (16.5 ಪಾಯಿಂಟ್ಸ್) ಚಾಂಪಿಯನ್ ಆದರು.

ಪ್ರಜ್ಞಾನಂದಗೆ ಪ್ರಶಸ್ತಿ

ಪ್ರಜ್ಞಾನಂದ

ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ, ನಾರ್ವೆ ಚೆಸ್ ಟೂರ್ನಿಯ 'ಎ' ಗುಂಪಿನಲ್ಲಿ ಚಾಂಪಿಯನ್ ಆದರು. ಒಂಬತ್ತು ಸುತ್ತುಗಳಲ್ಲಿ ಅವರು ಒಟ್ಟು 7.5 ಪಾಯಿಂಟ್ಸ್ ಕಲೆಹಾಕಿದರು.

ಇಸ್ರೇಲ್‌ನ ಮಾರ್ಸೆಲ್ ಎಫ್ರೊಮ್‌ಸ್ಕಿ ಮತ್ತು ಸ್ವೀಡನ್‌ನ ಜುಂಗ್ ಮಿನ್ ಸಿಯೊ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ರೊನಾಲ್ಡೊ ನಿರಾಳ

ಲಾಸ್‌ವೆಗಾಸ್ (ಎಪಿ): ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ವಿರುದ್ಧ ಅಮೆರಿಕದ ನೆವಾಡದ ಮಹಿಳೆಯೊಬ್ಬರು ಮಾಡಿದ್ದ ಅತ್ಯಾಚಾರ ಆರೋಪವನ್ನು ನ್ಯಾಯಾಧೀಶರು ತಳ್ಳಿಹಾಕಿದ್ದಾರೆ.

2009 ರಲ್ಲಿ ಲಾಸ್‌ವೆಗಾಸ್‌ನ ಹೋಟೆಲ್‌ನಲ್ಲಿ ರೊನಾಲ್ಡೊ ತನ್ನ ಮೇಲೆ ಅತ್ಯಾಚಾರ ಎಸಗಿದ್ದಾಗಿ ಮಹಿಳೆ ಆರೋಪಿಸಿದ್ದರು. ಆ ಘಟನೆಯನ್ನು ಬಹಿರಂಗಪಡಿಸದಂತೆ ರೊನಾಲ್ಡೊ ಸುಮಾರು ₹ 29 ಕೋಟಿ ಹಣ ನೀಡಿದ್ದಾರೆ ಎಂದಿದ್ದರು. ರೊನಾಲ್ಡೊ ಅವರಿಂದ ಪರಿಹಾ ರವಾಗಿ ಹೆಚ್ಚಿನ ಹಣ ಪಡೆಯುವ ನಿಟ್ಟಿನಲ್ಲಿ ಆ ಮಹಿಳೆ ನ್ಯಾಯಾಲಯದ ಮೊರೆ ಹೋಗಿದ್ದರು. ಆದರೆ ಅಮೆರಿಕದ ಡಿಸ್ಟ್ರಿಕ್ಟ್ ನ್ಯಾಯಾಧೀಶೆ ಜೆನ್ನಿಫರ್ ಡಾರ್ಸೆ, ಮಹಿಳೆಯ ಅರ್ಜಿಯನ್ನು ತಳ್ಳಿಹಾಕಿದ್ದಾರೆ.

ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ರಿಷಭ್ ಪಂತ್ ನಾಯಕತ್ವಕ್ಕೆ ಸವಾಲು

ಕಟಕ್ (ಪಿಟಿಐ): ಆಕಸ್ಮಿಕ ನಾಯಕ ರಿಷಭ್ ಪಂತ್ ಮುಂದೆ ಈಗ ಭಾರತ ತಂಡವನ್ನು ಗೆಲುವಿನ ಹಾದಿಗೆ ಮರಳಿ ತರುವ ಕಠಿಣ ಸವಾಲು ಇದೆ.

ಭಾರತ ತಂಡವು ಮೂರು ದಿನಗಳ ಹಿಂದೆ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಸೋತಿತ್ತು. ಐದು ಪಂದ್ಯಗಳ ಸರಣಿಯಲ್ಲಿ 0–1ರ ಹಿನ್ನಡೆ ಅನುಭವಿಸಿತ್ತು.

ಅಲ್ಲದೇ ವಿಶ್ವದಾಖಲೆ ನಿರ್ಮಿಸುವ ಅವಕಾಶವನ್ನೂ ಕಳೆದುಕೊಂಡಿತ್ತು. ಟಿ20 ಮಾದರಿಯಲ್ಲಿ ಸತತ 12 ಪಂದ್ಯಗಳನ್ನು ಜಯಿಸಿದ ದಾಖಲೆ ಭಾರತದ್ದು. ಕಳೆದ ಪಂದ್ಯದಲ್ಲಿ ಗೆದ್ದಿದ್ದರೆ ಸಾರ್ವಕಾಲಿಕ ದಾಖಲೆಯಾಗುತ್ತಿತ್ತು. ಆದರೆ, ಈಚೆಗೆ ಐಪಿಎಲ್‌ನಲ್ಲಿ ಅಬ್ಬರಿಸಿದ್ದ ರೀತಿಯಲ್ಲಿಯೇ ಬ್ಯಾಟ್ ಬೀಸಿದ್ದ ರಸಿ ವ್ಯಾನ್ ಡರ್ ಡಸೆ ಮತ್ತು ಡೇವಿಡ್ ಮಿಲ್ಲರ್ ಭಾರತದ ದಾಖಲೆಯ ಕನಸನ್ನು ನುಚ್ಚುನೂರು ಮಾಡಿದ್ದರು. ಆ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ತಂಡವು 212 ರನ್‌ಗಳ ಕಠಿಣ ಗುರಿ ನೀಡಿತ್ತು.

ಭಾನುವಾರ ಬಾರಾಬತಿ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಗೆಲುವಿನ ಹಾದಿಗೆ ಮರಳುವ ಛಲದಲ್ಲಿ ಭಾರತವಿದೆ. ರೋಹಿತ್ ಶರ್ಮಾ ವಿಶ್ರಾಂತಿ ಮತ್ತು ಕೆ.ಎಲ್. ರಾಹುಲ್ ಗಾಯಗೊಂಡ ಕಾರಣ ಕೊನೆಯ ಕ್ಷಣದಲ್ಲಿ ಈ ಸರಣಿಗೆ ರಿಷಭ್ ಪಂತ್ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿತ್ತು.

ಬಾರಾಬತಿ ಕ್ರೀಡಾಂಗಣದ ಪಿಚ್ ಪರಿಶೀಲಿಸಿದ ಭಾರತ ತಂಡದ ನಾಯಕ ರಿಷಭ್ ಪಂತ್ –ಪಿಟಿಐ ಚಿತ್ರ

ಭಾರತ ತಂಡದ ಭವಿಷ್ಯದ ನಾಯಕನೆಂದೇ ಹೇಳಲಾಗುತ್ತಿರುವ ವಿಕೆಟ್‌ಕೀಪರ್ -ಬ್ಯಾಟರ್ ಪಂತ್ ಮೇಲೆ ಈಗ ಎಲ್ಲರ ಚಿತ್ತ ನೆಟ್ಟಿದೆ. ಏಕೆಂದರೆ, ಸಂಪೂರ್ಣ ಫಿಟ್ ಆಗಿ ಕಣಕ್ಕಿಳಿದಿರುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಕೂಡ ನಾಯಕತ್ವದ ರೇಸ್‌ನಲ್ಲಿದ್ದಾರೆನ್ನಲಾಗಿದೆ. ಈಚೆಗೆ ಐಪಿಎಲ್‌ನಲ್ಲಿ ಹಾರ್ದಿಕ್ ನಾಯಕತ್ವದ ಗುಜರಾತ್ ಟೈಟನ್ಸ್ ಪ್ರಶಸ್ತಿ ಜಯಿಸಿತ್ತು. ರಿಷಭ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ಪ್ಲೇ ಆಫ್ ಪ್ರವೇಶಿಸುವಲ್ಲಿ ವಿಫಲವಾಗಿತ್ತು.

ಆದ್ದರಿಂದ ರಿಷಭ್ ಮೇಲೆ ಒತ್ತಡ ಹೆಚ್ಚಿದೆ. ಕಳೆದ ಪಂದ್ಯದಲ್ಲಿ ಇಶಾನ್ ಕಿಶನ್ ಅವರ ಅಮೋಘ ಬ್ಯಾಟಿಂಗ್‌ನಿಂದಾಗಿ ಬೃಹತ್ ಮೊತ್ತ ದಾಖಲಾಗಿತ್ತು. ಆದರೆ, ಬೌಲರ್‌ಗಳು ಮಿಲ್ಲರ್ ಮತ್ತು ರಸಿಯನ್ನು ಕಟ್ಟಿಹಾಕುವಲ್ಲಿ ವಿಫಲವಾಗಿತ್ತು. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಪ್ರವಾಸಿ ತಂಡದ ಬೌಲಿಂಗ್ ಪಡೆ ಕೂಡ ದುಬಾರಿಯಾಗಿತ್ತು. ಆದ್ದರಿಂದ ಎರಡೂ ತಂಡಗಳ ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗಳಾಗುವ ನಿರೀಕ್ಷೆ ಇದೆ.

ತಂಡಗಳು

ಭಾರತ: ರಿಷಭ್ ಪಂತ್ (ನಾಯಕ–ವಿಕೆಟ್‌ಕೀಪರ್), ಋತುರಾಜ್ ಗಾಯಕವಾಡ್, ಇಶಾನ್ ಕಿಶನ್, ದೀಪಕ್ ಹೂಡಾ, ಶ್ರೇಯಸ್ ಅಯ್ಯರ್, ದಿನೇಶ್ ಕಾರ್ತಿಕ್ ಹಾರ್ದಿಕ್ ಪಾಂಡ್ಯ, ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಆವೇಶ್ ಖಾನ್, ಅರ್ಷದೀಪ್ ಸಿಮಗ್, ಉಮ್ರಾನ್ ಮಲಿಕ್

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ರೀಜಾ ಹೆನ್ರಿಕ್ಸ್, ಹೆನ್ರಿಚ್ ಕ್ಲಾಸೆನ್, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಎನ್ರಿಚ್ ನಾರ್ಕಿಯಾ, ವೇಯ್ನ್ ಪಾರ್ನೆಲ್, ಡ್ವೇನ್ ಪ್ರಿಟೋರಿಯಸ್, ಕಗಿಸೊ ರಬಾಡ, ತಬ್ರೇಜ್ ಶಮ್ಸಿ, ಟ್ರಿಸ್ಟನ್ ಸ್ಟಬ್ಸ್, ರಸಿ ವ್ಯಾನ್ ಡರ್ ಡಸೆ, ಮಾರ್ಕೊ ಜಾನ್ಸೆನ್.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಭಾರತಕ್ಕೆ ಮಣಿದ ಬೆಲ್ಜಿಯಂ

ಎಫ್‌ಐಎಚ್ ಪ್ರೊ ಹಾಕಿ; ಮಹಿಳಾ ತಂಡಕ್ಕೆ ಸೋಲು

ಆ್ಯಂಟ್ವರ್ಪ್, ಬೆಲ್ಜಿಯಂ (ಪಿಟಿಐ): ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರ ಅಮೋಘ ಪ್ರದರ್ಶನದ ನೆರವಿನಿಂದ ಭಾರತ ತಂಡ ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನ ಪಂದ್ಯದಲ್ಲಿ ಬೆಲ್ಜಿಯಂ ವಿರುದ್ಧ ಜಯ ಸಾಧಿಸಿತು.

ಶನಿವಾರ ನಡೆದ ಮೊದಲ ಲೆಗ್ ಪಂದ್ಯದಲ್ಲಿ ಭಾರತ ಪೆನಾಲ್ಟಿ ಶೂಟೌಟ್‌ನಲ್ಲಿ 5-4 ರಲ್ಲಿ ಗೆಲುವು ಪಡೆಯಿತು. ನಿಗದಿತ ಅವಧಿಯ ಆಟದಲ್ಲಿ ಉಭಯ ತಂಡಗಳು 3-3 ಗೋಲುಗಳ ಡ್ರಾ ಸಾಧಿಸಿದ್ದವು.

ಪೆನಾಲ್ಟಿ ಶೂಟೌಟ್‌ನಲ್ಲಿ ಎರಡೂ ತಂಡಗಳು 4-4 ರಲ್ಲಿ ಸಮಬಲ ಸಾಧಿಸಿತು. ಭಾರತದ ಕೊನೆಯ ಅವಕಾಶದಲ್ಲಿ ಆಕಾಶ್‌ದೀಪ್ ಸಿಂಗ್ ಗೋಲು ಗಳಿಸಿ 5-4 ಮುನ್ನಡೆ ತಂದಿತ್ತರು. ಬೆಲ್ಜಿಯಂ ತಂಡದ ಅಲೆಕ್ಸಾಂಡರ್ ಹೆಂಡ್ರಿಕ್ಸ್ ಅವರ ಕೊನೆಯ ಪ್ರಯತ್ನವನ್ನು ಶ್ರೀಜೇಶ್ ತಡೆದು ಭಾರತದ ಗೆಲುವಿಗೆ ಕಾರಣರಾದರು.

ನಿಗದಿತ ಅವಧಿಯಲ್ಲಿ ಪಂದ್ಯ 3-3 ರಲ್ಲಿ ಸಮಬಲದಲ್ಲಿ ಕೊನೆಗೊಂಡಿತು. 17ನೇ ನಿಮಿಷದಲ್ಲಿ ಶಂಷೇರ್ ಸಿಂಗ್ ಭಾರತಕ್ಕೆ ಮುನ್ನಡೆ ತಂದಿತ್ತರು.

ಆದರೆ ಆರಂಭಿಕ ಮುನ್ನಡೆಯ ಲಾಭವನ್ನು ಸಮರ್ಥವಾಗಿ ಬಳಸಿಕೊಳ್ಳಲು ಭಾರತ ವಿಫಲವಾಯಿತು. ಸೆಡ್ರಿಕ್ ಚಾರ್ಲಿಯರ್ (20ನೇ ನಿ.) ಆತಿಥೇಯ ತಂಡಕ್ಕೆ ಸಮಬಲ ತಂದಿತ್ತರೆ, ಸೈಮನ್ ಗೊನಾರ್ಡ್ (35ನೇ ನಿ.) ಮುನ್ನಡೆ ತಂದುಕೊಟ್ಟರು.

ಬೆಲ್ಜಿಯಂ ವಿರುದ್ಧದ ಪಂದ್ಯದಲ್ಲಿ ಶಂಷೇರ್ ಸಿಂಗ್ ಭಾರತಕ್ಕೆ ಮೊದಲ ಗೋಲು ತಂದಿತ್ತ ಕ್ಷಣ –ಎಎಫ್‌ಪಿ ಚಿತ್ರ

50ನೇ ನಿಮಿಷದಲ್ಲಿ ನಿಕೊಲಸ್ ಡಿ ಕರ್ಪೆಲ್ ಅವರ ಗೋಲಿನಿಂದ ಬೆಲ್ಜಿಯಂ ಮುನ್ನಡೆಯನ್ನು 3–1ಕ್ಕೆ ಹೆಚ್ಚಿಸಿಕೊಂಡಿತು. ಒತ್ತಡಕ್ಕೆ ಒಳಗಾದರೂ ಕೊನೆಯ ಕ್ವಾರ್ಟರ್‌ನಲ್ಲಿ ಭಾರತ ಅಮೋಘ ಮರುಹೋರಾಟ ನಡೆಸಿತು. ಹರ್ಮನ್‌ಪ್ರೀತ್ ಸಿಂಗ್ (51ನೇ ನಿ.) ಮತ್ತು ಜರ್ಮನ್‌ಪ್ರೀತ್ ಸಿಂಗ್ (57) ಅವರ ನೆರವಿನಿಂದ ಸಮಬಲ ಸಾಧಿಸಿತು.

ಮಹಿಳಾ ತಂಡಕ್ಕೆ ನಿರಾಸೆ: ಇದಕ್ಕೂ ಮುನ್ನ ನಡೆದ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಭಾರತ 1-2 ಗೋಲುಗಳಿಂದ ಬೆಲ್ಜಿಯಂ ಎದುರು ಸೋಲು ಅನುಭವಿಸಿತು.

ನೆಲೆನ್ ಬಾರ್ಬರಾ 3ನೇ ನಿಮಿಷದಲ್ಲಿ ಬೆಲ್ಜಿಯಂ ತಂಡದ ಮೊದಲು ಗೋಲು ಗಳಿಸಿದರೆ, 35ನೇ ನಿಮಿಷದಲ್ಲಿ ಆ್ಯಂಡ್ರೆ ಬಾಲೆಂಜೈನ್ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮರುಹೋರಾಟ ನಡೆಸಿದ ಭಾರತ ತಂಡಕ್ಕೆ 48ನೇ ನಿಮಿಷದಲ್ಲಿ ಲಾಲ್‌ರೆಮ್ಸಿಯಾಮಿ ಗೋಲು ತಂದಿತ್ತರು. ಕೊನೆಯ ಕ್ವಾರ್ಟರ್‌ನಲ್ಲಿ ಸಮಬಲದ ಗೋಲಿಗಾಗಿ ಮೇಲಿಂದ ಮೇಲೆ ಪ್ರಯತ್ನ ನಡೆಸಿದರೂ ಯಶ ಕಾಣಲಿಲ್ಲ.

ರಾಣಿ ಸಾಧನೆ: ಭಾರತ ತಂಡದ ಹಿರಿಯ ಆಟಗಾರ್ತಿ ರಾಣಿ ರಾಂಪಾಲ್ ಅವರಿಗೆ ಇದು 250ನೇ ಅಂತರರಾಷ್ಟ್ರೀಯ ಪಂದ್ಯವಾಗಿತ್ತು.

ಕಾಮನ್‌ವೆಲ್ತ್ ಕ್ರೀಡಾಕೂಟ: ನೀತು, ಜಾಸ್ಮಿನ್‌ಗೆ ಅರ್ಹತೆ

ನಿಖತ್ ಜರೀನ್, ಲವ್ಲಿನಾ ಆಯ್ಕೆ

ನವದೆಹಲಿ (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ನಿಖತ್ ಜರೀನ್ ಮತ್ತು ಒಲಿಂಪಿಕ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಭಾರತ ಮಹಿಳಾ ಬಾಕ್ಸಿಂಗ್ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ಇಲ್ಲಿ ನಡೆದ ಆಯ್ಕೆ ಟ್ರಯಲ್ಸ್‌ನ 50 ಕೆಜಿ ವಿಭಾಗದಲ್ಲಿ ನಿಖತ್ 7–0ಯಿಂದ ಮೀನಾಕ್ಷಿ ಅವರನ್ನು ಪರಾಭವಗೊಳಿಸಿದರು. 70 ಕೆಜಿ ವಿಭಾಗದ ಬೌಟ್‌ನಲ್ಲಿ ಲವ್ಲಿನಾ ಕೂಡ ಇಷ್ಟೇ ಅಂತರದಿಂದ ಪೂಜಾ ಸವಾಲು ಮೀರಿದರು.

ಕಳೆದ ತಿಂಗಳು 52 ಕೆಜಿ ವಿಭಾಗದಲ್ಲಿ ನಿಖತ್ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. ನೀತು ಗಂಗಾಸ್ (48 ಕೆಜಿ) ಮತ್ತು ಜಾಸ್ಮಿನ್ ಲಂಬೊರಿಯಾ (60 ಕೆಜಿ) ಕಾಮನ್‌ವೆಲ್ತ್ ಗೇಮ್ಸ್‌ಗೆ ಆಯ್ಕೆಯಾದ ಇನ್ನಿಬ್ಬರು ಬಾಕ್ಸರ್‌ಗಳು.

ಲವ್ಲಿನಾ ಬೊರ್ಗೊಹೈನ್, ನಿಖತ್ ಜರೀನ್, ನೀತು ಮತ್ತು ಜಾಸ್ಮಿನ್ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು– ಪಿಟಿಐ ಚಿತ್ರ

ಮಾಜಿ ಯೂತ್ ಚಾಂಪಿಯನ್ ಆಗಿರುವ ನೀತು 5–2ರಿಂದ ಮಂಜು ರಾಣಿ ಅವರನ್ನು ಮಣಿಸಿದರು. ಹೋದ ವರ್ಷ ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದ ಜಾಸ್ಮಿನ್ ಅವರು ಪರ್ವೀನ್ ಹೂಡಾ ಅವರಿಗೆ ಸೋಲುಣಿಸಿದರು.

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ಜುಲೈ 28ರಿಂದ ಆಗಸ್ಟ್ 8ರವರೆಗೆ ಕೂಟ ನಡೆಯಲಿದೆ.

ಕಣದಲ್ಲಿ 200 ಆಟಗಾರರು

ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್; ಹರಾಜು ಪ್ರಕ್ರಿಯೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೊಚ್ಚಲ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನ (ಜಿಪಿಬಿಎಲ್) ಎಂಟು ತಂಡಗಳಿಗೆ ಆಟಗಾರರ ಆಯ್ಕೆಗಾಗಿ ಹರಾಜು ಪ್ರಕ್ರಿಯೆ ಭಾನುವಾರ ಇಲ್ಲಿ ನಡೆಯಲಿದೆ.

ಮೊದಲ ಋತುವಿನ ಟೂರ್ನಿಯಲ್ಲಿ ಕರ್ನಾಟಕ ಆಟಗಾರರು ಮಾತ್ರ ಪಾಲ್ಗೊಳ್ಳಲಿದ್ದು, ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ 200 ಸ್ಪರ್ಧಿಗಳು ಹರಾಜಿನಲ್ಲಿ ಭಾಗವಹಿಸಲಿದ್ದಾರೆ.

ಆಟಗಾರರನ್ನು ಐಕಾನ್, ಮೊದಲ ಹಂತ ಮತ್ತು ಎರಡನೇ ಹಂತ ಎಂಬುದಾಗಿ ಮೂರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಎಲ್ಲ ಹಂತದವರಿಗೂ ಪ್ರತ್ಯೇಕ ಮೂಲಬೆಲೆ ಮತ್ತು ಗರಿಷ್ಠ ಬೆಲೆ ನಿಗದಿಪಡಿಸಲಾಗಿದೆ.

ಬಿಡ್ಡಿಂಗ್‌ನಲ್ಲಿ ಒಂದು ತಂಡಕ್ಕೆ ಗರಿಷ್ಠ ₹ 12 ಲಕ್ಷ ಖರ್ಚು ಮಾಡುವ ಅವಕಾಶವಿದೆ. ಐಕಾನ್ ಆಟಗಾರರಿಗೆ ₹ 2.5 ಲಕ್ಷ ಮೂಲಬೆಲೆ, ₹ 3.5 ಲಕ್ಷ ಗರಿಷ್ಠ ಬೆಲೆ ನಿಗದಿಪಡಿಸಲಾಗಿದೆ. ಐಕಾನ್ ಆಟಗಾರರನ್ನು ಸೆಳೆದುಕೊಳ್ಳಲು ಫ್ರಾಂಚೈಸಿಗಳ ನಡುವೆ ತುರುಸಿನ ಪೈಪೋಟಿ ಏರ್ಪಡುವ ಸಾಧ್ಯತೆಯಿದೆ.

'ಯುವ ಹಾಗೂ ಪ್ರತಿಭಾನ್ವಿತ ಆಟಗಾರರು ಹರಾಜಿನಲ್ಲಿ ಪಾಲ್ಗೊಳ್ಳಲಿದ್ದಾರೆ. 400 ಕ್ಕೂ ಅಧಿಕ ಮಂದಿ ಹರಾಜಿಗೆ ಹೆಸರು ನೋಂದಾಯಿಸಿಕೊಂಡಿದ್ದರು. ಜಿಪಿಬಿಎಲ್‌ನ ಕೋಚ್‌ಗಳು ಮತ್ತು ಆಡಳಿತ ಮಂಡಳಿಯು ಅಂತಿಮವಾಗಿ 200 ಮಂದಿಯ ಪಟ್ಟಿ ಸಿದ್ಧಪಡಿಸಿದೆ. ಈ ಆಟಗಾರರನ್ನು ಮೂರು ಹಂತಗಳನ್ನಾಗಿ ವಿಂಗಡಿಸಲಾಗಿದೆ' ಎಂದು ಜಿಪಿಬಿಎಲ್ ಸಂಘಟಕರಲ್ಲಿ ಒಬ್ಬರಾದ ಪ್ರಶಾಂತ್ ರೆಡ್ಡಿ ಹೇಳಿದರು.

'ಒಂದು ತಂಡದಲ್ಲಿ ಗರಿಷ್ಠ ಎಂಟು ಆಟಗಾರರು ಇರಬಹುದು. ಪ್ರತಿ ತಂಡ ಒಬ್ಬ ಐಕಾನ್ ಆಟಗಾರ, ಮೊದಲ ಮತ್ತು ಎರಡನೇ ಹಂತದ ಕನಿಷ್ಠ ಎರಡು ಆಟಗಾರರು ಹಾಗೂ ಇಬ್ಬರು ಮಹಿಳಾ ಸ್ಪರ್ಧಿಗಳನ್ನು ತಂಡಕ್ಕೆ ಸೇರಿಸಿಕೊಳ್ಳಬೇಕು' ಎಂದರು.

ಜಿಪಿಬಿಎಲ್ ಟೂರ್ನಿ ಜುಲೈ 1ರಿಂದ ಹತ್ತು ದಿನಗಳವರೆಗೆ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯಲ್ಲಿ ನಡೆಯಲಿದೆ. ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ಇರಲಿದೆ. ಅಗ್ರ ನಾಲ್ಕು ತಂಡಗಳು ಡಬಲ್ ಎಲಿಮಿನೇಷನ್ ಹಂತ (ಸೆಮಿಫೈನಲ್) ಪ್ರವೇಶಿಸುತ್ತವೆ. ಗುಂಪು ವಿಭಾಗದಲ್ಲಿ ಪ್ರತಿ ತಂಡವೂ ಐದು ಪಂದ್ಯಗಳಲ್ಲಿ ಆಡಲಿದೆ. ಪುರುಷರ ಸಿಂಗಲ್ಸ್, ಮಹಿಳೆಯರ ಸಿಂಗಲ್ಸ್, ಮಿಶ್ರ ಡಬಲ್ಸ್, ಪುರುಷರ ಡಬಲ್ಸ್ ಮತ್ತು ಸೂಪರ್ ಮ್ಯಾಚ್ ಇರಲಿದೆ.

ಪಿ.ವಿ. ಸಿಂಧು, ಕಿಡಂಬಿ ಶ್ರೀಕಾಂತ್, ಸಾಯಿ ಪ್ರಣೀತ್, ಜ್ವಾಲಾ ಗುಟ್ಟಾ, ಅಶ್ವಿನಿ ಪೊನ್ನಪ್ಪ, ಚಿರಾಗ್ ಶೆಟ್ಟಿ, ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ, ಎಚ್.ಎಸ್. ಪ್ರಣಯ್ ಅವರನ್ನು ಎಂಟು ತಂಡಗಳ ಪ್ರಚಾರ ರಾಯಭಾರಿಗಳಾಗಿ ನೇಮಿಸಲಾಗಿದೆ. ಲೀಗ್‌ನ ತಂಡಗಳ ಅನಾವರಣ ಮತ್ತು ಪೋಷಾಕು ಬಿಡುಗಡೆ ಸಮಾರಂಭ ಕಳೆದ ವಾರ ನಡೆದಿತ್ತು.

ತಂಡಗಳು

- ಬೆಂಗಳೂರು ಲಯನ್ಸ್
- ಮಲ್ನಾಡ್ ಫಾಲ್ಕನ್ಸ್
- ಬಂಡಿಪುರ ಟಸ್ಕರ್ಸ್
- ಮೈಸೂರು ಪ್ಯಾಂಥರ್ಸ್
- ಕೊಡವ ಟೈಗರ್ಸ್
- ಮಂಡ್ಯ ಬುಲ್ಸ್
- ಕೆಜಿಎಫ್ ವೂಲ್ವ್ಸ್
- ಮಂಗಳೂರು ಶಾರ್ಕ್ಸ್

'ಐಕಾನ್' ಆಟಗಾರರು

ಮಿಥುನ್ ಮಂಜುನಾಥ್, ರಘು ಮರಿಸ್ವಾಮಿ, ಡೇನಿಯಲ್ ಫರೀದ್, ಸನೀತ್ ದಯಾನಂದ್, ಪ್ರಕಾಶ್ ರಾಜ್, ಸಾಯ್ ಪ್ರತೀಕ್, ಜನನಿ ಅನಂತಕುಮಾರ್ ಮತ್ತು ತಾನ್ಯಾ ಹಿರೇಮಠ್ ಅವರಿಗೆ ಐಕಾನ್ ಆಟಗಾರರ ಸ್ಥಾನ ನೀಡಲಾಗಿದೆ.

ಎಷ್ಟು ಹಣ? (₹ಗಳಲ್ಲಿ)

- 12 ಲಕ್ಷ — ಹರಾಜಿನಲ್ಲಿ ಪ್ರತಿ ತಂಡ ಖರ್ಚು ಮಾಡಬಹುದಾದ ಮೊತ್ತ
- 2.5 ಲಕ್ಷ — ಐಕಾನ್ ಆಟಗಾರರ ಮೂಲಬೆಲೆ
- 75 ಸಾವಿರ — ಮೊದಲ ಹಂತದ ಆಟಗಾರರ ಮೂಲಬೆಲೆ
- 25 ಸಾವಿರ — ಎರಡನೇ ಹಂತದ ಆಟಗಾರರ ಮೂಲಬೆಲೆ
- 60 ಲಕ್ಷ — ಒಟ್ಟು ಬಹುಮಾನ ಮೊತ್ತ
- 24 ಲಕ್ಷ — ವಿಜೇತರು ಪಡೆಯುವ ಹಣ
- 12 ಲಕ್ಷ — 'ರನ್ನರ್ ಅಪ್' ತಂಡಕ್ಕೆ ದೊರೆಯುವ ಹಣ

ಕ್ರಿಕೆಟ್: ಅಫ್ಗಾನಿಸ್ತಾನಕ್ಕೆ ಜಯ

ಹರಾರೆ: ನಜೀಬುಲ್ಲಾ ಜದ್ರಾನ್ (ಔಟಾಗದೆ 44; 25ಎ, 2ಬೌಂಡರಿ, 3ಸಿಕ್ಸರ್) ಅವರ ಬ್ಯಾಟಿಂಗ್ ಬಲದಿಂದ ಅಫ್ಗಾನಿಸ್ತಾನ ತಂಡವು ಜಿಂಬಾಬ್ವೆ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ 6 ವಿಕೆಟ್‌ನಿಂದ ಜಯಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಜಿಂಬಾಬ್ವೆ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸಿಕಂದರ್ ರಝಾ (45; 31ಎ) ಅವರ ಬ್ಯಾಟಿಂಗ್‌ನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಅಫ್ಗಾನಿಸ್ತಾನ ತಂಡವು ಇನಿಂಗ್ಸ್‌ನಲ್ಲಿ ಇನ್ನೂ ನಾಲ್ಕು ಎಸೆತಗಳು ಬಾಕಿಯಿರುವಾಗಲೇ ಅಫ್ಗನ್ ತಂಡವು ಗುರಿ ಮುಟ್ಟಿತು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರ್‌ಗಳಲ್ಲಿ 8ಕ್ಕೆ159 (ವೆಸ್ಲಿ ಮಾದೆವೆರ್ 32, ರೆಗಿಸ್ ಚಕ್‌ಬ್ವಾ 29, ಸಿಕಂದರ್ ರಝಾ 45, ನಿಜತ್ ಮಸೂದ್ 39ಕ್ಕೆ3) ಅಫ್ಗಾನಿಸ್ತಾನ: 19.2 ಓವರ್‌ಗಳಲ್ಲಿ 4ಕ್ಕೆ160 (ಹಜರತ್‌ಉಲ್ಲಾ ಝುಝೈ 45, ರೆಹಮಾನುಲ್ಲಾ ಗುರ್ಬಾಜ್ 33, ನಜೀಬುಲ್ಲಾ ಜದ್ರಾನ್ ಔಟಾಗದೆ 44, ರಿಯಾನ್ ಬುರಿ 14ಕ್ಕೆ3) ಫಲಿತಾಂಶ: ಅಫ್ಗಾನಿಸ್ತಾನಕ್ಕೆ 6 ವಿಕೆಟ್‌ಗಳ ಜಯ. 3 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ

ಡೆರಿಲ್, ಟಾಮ್ ದ್ವಿಶತಕದ ಜೊತೆಯಾಟ

ನಾಟಿಂಗ್‌ಹ್ಯಾಮ್: ಡೆರಿಲ್ ಮಿಚೆಲ್ (190; 318ಎ, 4X23, 6X4) ಮತ್ತು ಟಾಮ್ ಬ್ಲಂಡೆಲ್ (106; 198ಎ, 4X14) ಅವರಿಬ್ಬರ ದ್ವಿಶತಕದ ಜೊತೆಯಾಟದ ಬಲದಿಂದ ನ್ಯೂಜಿ ಲೆಂಡ್ ತಂಡವು ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ದೊಡ್ಡ ಮೊತ್ತ ಗಳಿಸಿತು.

ಟೆಸ್ಟ್ ಸರಣಿಯ ಎರಡನೇ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶನಿವಾರ ದಿನದಾಟದಲ್ಲಿ ಕಿವೀಸ್ ತಂಡವು 145.3 ಓವರ್‌ಗಳಲ್ಲಿ 553 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಇನಿಂಗ್ಸ್‌ನಲ್ಲಿ ಕಿವೀಸ್ ತಂಡವು 169 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಈ ಸಂದರ್ಭದಲ್ಲಿ ಜೊತೆಗೂಡಿದ ಬ್ಲಂಡೆಲ್ ಮತ್ತು ಡೆರಿಲ್ ಐದನೇ ವಿಕೆಟ್ ಜೊತೆಯಾಟದಲ್ಲಿ 236 ರನ್ ಸೇರಿಸಿದರು.

ಡೆರಿಲ್ ಮಿಚೆಲ್

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 145.3 ಓವರ್‌ಗಳಲ್ಲಿ 553 (ಡೆರಿಲ್ ಮಿಚೆಲ್ 190, ಟಾಮ್ ಬ್ಲಂಡಲ್ 106, ಮೈಕೆಲ್ ಬ್ರೆಸ್‌ವೆಲ್ 49, ಜೇಮ್ಸ್ ಆ್ಯಂಡರ್ಸನ್ 62ಕ್ಕೆ3, ಸ್ಟುವರ್ಟ್ ಬ್ರಾಡ್ 107ಕ್ಕೆ2, ಬೆನ್ ಸ್ಟೋಕ್ಸ್ 85ಕ್ಕೆ2, ಜ್ಯಾಕ್ ಲೀಚ್ 140ಕ್ಕೆ2)

ಟೈಗರ್ ವುಡ್ಸ್

ಬಿಲಿಯನೇರ್ ಕ್ಲಬ್‌ಗೆ ಟೈಗರ್

ಮಿಯಾಮಿ (ಎಎಫ್‌ಪಿ): ಗಾಲ್ಫ್ ಕ್ರೀಡೆಯ ದಂತಕಥೆ ಟೈಗರ್ ವುಡ್ಸ್ ಓನ್ ಬಿಲಿಯನೇರ್ ಕ್ಲಬ್‌ಗೆ ಸೇರಿಕೊಂಡಿದ್ದಾರೆ. ಎನ್‌ಬಿಎ ದಿಗ್ಗಜರಾದ ಮೈಕೆಲ್ ಜೋರ್ಡಾನ್ ಮತ್ತು ಲಿಬಾರ್ನ್ ಜೇಮ್ಸ್ ಅವರ ಸಾಲಿಗೆ ಸೇರಿಕೊಂಡಿದ್ದಾರೆ.

ಶುಕ್ರವಾರ ಫೋರ್ಬ್ಸ್ ನಿಯತಕಾಲಿಕೆ ಪ್ರಕಟಿಸಿರುವ ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಟೈಗರ್ ಸ್ಥಾನ ಪಡೆದಿದ್ದಾರೆ. ಅವರ ಒಟ್ಟು ಮೌಲ್ಯವು ₹ 7790 ಕೋಟಿ ಯಾಗಿದೆ. 27 ವರ್ಷದ ವೃತ್ತಿ ಜೀವನದಲ್ಲಿ ಟೈಗರ್ಸ್ ನಗದು ಪ್ರಶಸ್ತಿ, ಜಾಹೀರಾತು ಆದಾಯ ಮತ್ತು ವಾಣಿಜ್ಯ ವಹಿವಾಟಿನಿಂದ ಬಂದ ಆದಾಯ ಸೇರಿಕೊಂಡಿದೆ. ಹೋದ ವರ್ಷ ಕಾರು ಅಪಘಾತದಲ್ಲಿ ಅವರ ಕಾಲಿಗೆ ಗಂಭೀರ ಗಾಯವಾಗಿತ್ತು. 46 ವರ್ಷದ ಟೈಗರ್ ಗಾಯದಿಂದ ಚೇತರಿಸಿಕೊಂಡು ಗಾಲ್ಫ್‌ಗೆ ಮರಳಿದ್ದಾರೆ.

ಫುಟ್‌ಬಾಲ್: ಭಾರತ ಜಯಭೇರಿ

ಕೋಲ್ಕತ್ತ (ಪಿಟಿಐ): ನಾಯಕ ಸುನಿಲ್ ಚೆಟ್ರಿ ಹಾಗೂ ಸಹಲ್ ಅಬ್ದುಲ್ ಸಮದ್ ಗಳಿಸಿದ ಸೊಗಸಾದ ಗೋಲುಗಳ ಬಲದಿಂದ ಭಾರತ ತಂಡವು ಏಷ್ಯಾಕಪ್ ಅರ್ಹತಾ ಟೂರ್ನಿಯಲ್ಲಿ ಜಯ ಗಳಿಸಿತು.

ಶನಿವಾರ ಇಲ್ಲಿಯ ಸಾಲ್ಟ್‌ಲೇಕ್ ಅಂಗಣದಲ್ಲಿ ನಡೆದ ಪಂದ್ಯದಲ್ಲಿ ಚೆಟ್ರಿ, 86ನೇ ನಿಮಿಷದಲ್ಲಿ ಲಭಿಸಿದ ಫ್ರಿಕಿಕ್‌ನಲ್ಲಿ ಕಾಲ್ಚಳಕ ತೋರಿದರು. ಇದು 83ನೇ ಅಂತರರಾಷ್ಟ್ರೀಯ ಗೋಲಾಗಿತ್ತು. ಜುಬ್‌ಯಾರ್ ಅಮಿರಿ (88ನೇ ನಿ.) ಗಳಿಸಿದ ಗೋಲಿನ ಬಲದಿಂದ ಅಫ್ಗಾನಿಸ್ತಾನ ಸಮಬಲ ಸಾಧಿಸಿತ್ತು.

ಇಂಜುರಿ ಅವಧಿಯಲ್ಲಿ ಮೋಡಿ ಮಾಡಿದ ಸಮದ್, ಭಾರತದ ಗೆಲುವನ್ನು ಖಚಿತಪಡಿಸಿದರು. ಇದೇ 14ರಂದು ಅಂತಿಮ ಅರ್ಹತಾ ಪಂದ್ಯದಲ್ಲಿ ಭಾರತ ತಂಡವು ಹಾಂಗ್‌ಕಾಂಗ್ ಸವಾಲು ಎದುರಿಸಲಿದೆ.

ಹೆಡರ್ ಮಾಡಲು ಯತ್ನಿಸಿದ ಸುನಿಲ್ ಚೆಟ್ರಿ (ಮಧ್ಯೆ)– ಪಿಟಿಐ ಚಿತ್ರ

ಜಾವೆಲಿನ್: ಚಿನ್ನ ಗೆದ್ದ ಮನು

ಡಿ.ಪಿ.ಮನು

ಬೆಂಗಳೂರು: ಕರ್ನಾಟಕದ ಡಿ.ಪಿ. ಮನು ಅವರು ಚೆನ್ನೈನಲ್ಲಿ ನಡೆಯುತ್ತಿರುವ 61ನೇ ಅಂತರರಾಜ್ಯ ಅಥ್ಲೆಟಿಕ್ಸ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಮನು 84.35 ಮೀ. ಸಾಧನೆ ಮಾಡಿದರು. ಶಿವಪಾಲ್ ಸಿಂಗ್ (82.28 ಮೀ.) ಅವರು 2018 ರಲ್ಲಿ ಗುವಾಹಟಿಯಲ್ಲಿ ನಡೆದಿದ್ದ ಕೂಟದಲ್ಲಿ ಮಾಡಿದ್ದ ದಾಖಲೆಯನ್ನು ಮುರಿದರು.

ಉತ್ತರ ಪ್ರದೇಶದ ರೋಹಿತ್ ಯಾದವ್ (82.54 ಮೀ.) ಬೆಳ್ಳಿ ಜಯಿಸಿದರೆ, ರಾಜಸ್ತಾನದ ಯಶ್ವೀರ್ ಸಿಂಗ್ (78.62 ಮೀ.) ಕಂಚು ಜಯಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಪಠ್ಯ ಪರಿಷ್ಕರಣೆ: ಸಾರ್ವಜನಿಕರ ಆಕ್ಷೇಪಕ್ಕೆ ಆಹ್ವಾನ ಬೇಕಾ?
ಸಂವಾದ ಮಧ್ಯಾಹ್ನ 12 ರಿಂದ 1
ಭಾಗವಹಿಸುವವರು:
ವಿ.ಪಿ. ನಿರಂಜನಾರಾಧ್ಯ, ಅಭಿವೃದ್ಧಿ ಶಿಕ್ಷಣ ತಜ್ಞ, ಬೆಂಗಳೂರು
ಸುಧಾಕರ ಹೊಸಹಳ್ಳಿ, ಪ್ರಾದೇಶಿಕ ನಿರ್ದೇಶಕ, ಕರ್ನಾಟಕ ರಾಜ್ಯ ಮುಕ್ತ ವಿ.ವಿ, ಮಂಡ್ಯ
ಪಲ್ಲವಿ ಇಡೂರು, ರಾಜಕೀಯ ವಿಶ್ಲೇಷಕಿ, ಲೇಖಕಿ, ಬೆಂಗಳೂರು
ವಿನಯ್ ಬಿದರೆ, ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ, ಬೆಂಗಳೂರು

ಭಾರತ–ಚೀನಾ ಗಡಿ: ಯೋಧ ನಾಪತ್ತೆ

ಡೆಹ್ರಾಡೂನ್ (ಪಿಟಿಐ): ಅರುಣಾಚಲ ಪ್ರದೇಶದ ಭಾರತ-ಚೀನಾ ಗಡಿಯಲ್ಲಿ ನಿಯೋಜನೆಗೊಂಡಿದ್ದ ಡೆಹ್ರಾಡೂನ್‌ನ ಸೇನಾ ಯೋಧ 13 ದಿನಗಳಿಂದ ನಾಪತ್ತೆಯಾಗಿದ್ದು, ಅವರ ಕುಟುಂಬ ಸದಸ್ಯರಲ್ಲಿ ಆತಂಕ ಮೂಡಿಸಿದೆ.

ಥಕ್ಲಾ ಪೋಸ್ಟ್ ಬಳಿ ನಿಯೋಜನೆಗೊಂಡಿದ್ದ 7ನೇ ಗರವಾಲ್ ರೈಫಲ್ಸ್ ಪಡೆಯ ಯೋಧ ಪ್ರಕಾಶ್ ಸಿಂಗ್ ರಾಣಾ ಮೇ 29ರಿಂದ ನಾಪತ್ತೆಯಾಗಿರುವ ಬಗ್ಗೆ ಆತನ ಪತ್ನಿಗೆ ಸೇನಾ ಅಧಿಕಾರಿಗಳು ದೂರವಾಣಿ ಮೂಲಕ ತಿಳಿಸಿದ್ದಾರೆ.

ಕರ್ತವ್ಯಲೋಪ: ಬೊಲಿವಿಯದ ಮಾಜಿ ಅಧ್ಯಕ್ಷರಿಗೆ 10 ವರ್ಷ ಸಜೆ

ಲಾ ಪಾಜ್, ಬೊಲಿವಿಯ (ಎ.ಪಿ): 2019ರಲ್ಲಿ ಅಧಿಕಾರ ಸ್ವೀಕಾರ ಅವಧಿಯಲ್ಲಿ ನಡೆದಿದ್ದ ಗಲಭೆ, ದಾಂದಲೆ ಪ್ರಕರಣದಲ್ಲಿ ಬೊಲಿವಿಯದ ಮಾಜಿ ಅಧ್ಯಕ್ಷೆ ಜೀನೈನ್ ಅನೇಜ್ ಅವರಿಗೆ ಕೋರ್ಟ್ 10 ವರ್ಷ ಸಜೆ ವಿಧಿಸಿದೆ.

ಹಿಂಸಾತ್ಮಕ ಘಟನೆಗಳ ಹಿನ್ನೆಲೆಯಲ್ಲಿ ಅದಕ್ಕೂ ಹಿಂದೆ ಅಧ್ಯಕ್ಷರಾಗಿದ್ದ ಇವೊ ಮೊರೆಲೆಸ್ ರಾಜೀನಾಮೆ ನೀಡಿದ್ದರು. ಅನೇಜ್ ವಿರುದ್ಧ ಕರ್ತವ್ಯಲೋಪ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸಿದ ಆರೋಪಗಳಡಿ ಪ್ರಕರಣ ದಾಖಲಾಗಿತ್ತು.

ಅಲ್ಲದೆ ಕೋರ್ಟ್ ಇದೇ ಸಂದರ್ಭದಲ್ಲಿ ಸೇನೆಯ ಕಮಾಂಡರ್ ವಿಲಿಯಂ ಕಲಿಮನ್ ಮತ್ತು ಮಾಜಿ ಪೊಲೀಸ್ ಕಮಾಂಡರ್ ವ್ಲಾಡಿಮಿರ್ ಕಾರ್ಲೆರೊನ್ ಅವರಿಗೂ 10 ವರ್ಷ ಸಜೆ ವಿಧಿಸಿ ತೀರ್ಪು ಪ್ರಕಟಿಸಿತು.

2019ರ ಗಲಭೆಯಲ್ಲಿ 37 ಪ್ರತಿಭಟನಾಕಾರರು ಮೃತಪಟ್ಟಿದ್ದರು. ಅಹಿತಕರ ಬೆಳವಣಿಗೆ ಹಿಂದೆಯೇ ಅಧ್ಯಕ್ಷರಾಗಿದ್ದ ಮೊರಲೆಸ್ ಅವರು ಮೆಕ್ಸಿಕೊದಲ್ಲಿ ಕೆಲದಿನ ಆಶ್ರಯ ಪಡೆಯುವಂತಾಗಿತ್ತು.

ಕ್ಷಿಪಣಿ ದಾಳಿಗೆ ರಷ್ಯಾ ಸಿದ್ಧತೆ –ಬ್ರಿಟನ್ ಗುಪ್ತಚರ ವರದಿ

ಉಕ್ರೇನ್ ಪೂರ್ವ ಭಾಗ ವಶಕ್ಕೆ ಯತ್ನ

ಕೀವ್ (ಎಪಿ): ಕಲ್ಲಿದ್ದಲು ಗಣಿಗಳು, ಕೈಗಾರಿಕೆಗಳನ್ನು ಒಳಗೊಂಡ ಉಕ್ರೇನ್ ಪೂರ್ವ ಭಾಗವನ್ನು ವಶಕ್ಕೆ ಪಡೆಯಲು ರಷ್ಯಾ ಯತ್ನಿಸುತ್ತಿದ್ದು, 1960ರ ಅವಧಿಯ, ಅಧಿಕ ಸಾಮರ್ಥ್ಯದ ಕ್ಷಿಪಣಿ ಪ್ರಯೋಗಿಸಲು ಸಿದ್ಧತೆ ನಡೆಸಿದೆ ಎಂದು ಬ್ರಿಟನ್‌ನ ಗುಪ್ತದಳದ ವರದಿ ಎಚ್ಚರಿಸಿದೆ.

ಸಾಂಪ್ರದಾಯಿಕ ಸಿಡಿತಲೆ ಅಳವಡಿಸಿದ, 5.5 ಟನ್ ತೂಕದ ಕೆಎಚ್ -22 ಹೆಸರಿನ ಕ್ಷಿಪಣಿಗಳನ್ನು ಪ್ರಯೋಗಿಸಿದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿ ಉಂಟುಮಾಡಬಲ್ಲವು. ರಷ್ಯಾದಲ್ಲಿ ಪ್ರಸ್ತುತ ಆಧುನಿಕ ಶಸ್ತ್ರಾಸ್ತ್ರಗಳ ಕೊರತೆ ಎದುರಾಗಿದೆ. ಈಗಾಗಿ, ಕೆಎಚ್–22 ಕ್ಷಿಪಣಿಗಳನ್ನು ಪ್ರಯೋಗಿಸಲು ಸಿದ್ಧತೆ ನಡೆಸಿದೆ ಎಂದು ವರದಿ ಹೇಳಿದೆ.

ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳ ಹಿಡಿತದಲ್ಲಿ 2014ರಿಂದ ಇರುವ ಉಕ್ರೇನ್‌ನ ಪೂರ್ವ ಭಾಗ ವಶಕ್ಕೆ ಪಡೆಯಲು ರಷ್ಯಾ ಗಮನ ಕೇಂದ್ರೀಕರಿಸಿದೆ. ಯುದ್ಧದ ಪರಿಣಾಮ ನಾಗರಿಕರು ಈ ಭಾಗದಿಂದ ಈಗಾಗಲೇ ಗುಳೆ ಹೋಗುತ್ತಿದ್ದಾರೆ.

ನಮ್ಮ ಮಾತು ಆಲಿಸಲಿಲ್ಲ: ಅಮೆರಿಕ ಲಾಸ್ ಏಂಜೆಲೀಸ್ ವರದಿ: ರಷ್ಯಾ ಸೇನೆಯು ಉಕ್ರೇನ್ ಗಡಿಯಲ್ಲಿ ಒಳನುಸುಳಲು ಸಿದ್ಧತೆ ನಡೆಸಿದೆ ಎಂಬ ಮಾಹಿತಿಯನ್ನು ದೇಶದ ಗುಪ್ತದಳವು ಕ್ರೋಡೀಕರಿಸಿತ್ತು. ಆದರೆ, ಇದನ್ನು ನಂಬಲು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹಿಂದೆ ಸಿದ್ಧರಿರಲಿಲ್ಲ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಪೂರ್ವ ಉಕ್ರೇನ್‌ನ ಡಾನ್‌ಬಾಸ್‌ನ ಲಿಸಿಚಾನ್‌ಸ್ಕ್ ನಗರದಲ್ಲಿ ರಷ್ಯಾದ ಶೆಲ್ ದಾಳಿಯಿಂದ ಮನೆ ಹೊತ್ತಿ ಉರಿಯುತ್ತಿರುವುದು –ಎಎಫ್‌ಪಿ ಚಿತ್ರ

ರಷ್ಯಾ ಮತ್ತು ಉಕ್ರೇನ್ ನಡುವೆ 4 ತಿಂಗಳಿಂದ ನಡೆಯುತ್ತಿರುವ ಯುದ್ಧದಲ್ಲಿ ಉಕ್ರೇನ್ ಪರ ಅಮೆರಿಕ ನಿಂತಿದೆ. '2ನೇ ಮಹಾಯುದ್ಧದ ಬಳಿಕ ಇಂಥ ಬೆಳವಣಿಗೆ ಆಗಿರಲಿಲ್ಲ. ವ್ಲಾಡಿಮಿರ್ ಪುಟಿನ್ ದಾಳಿ ನಡೆಸಬಹುದು ಎಂಬ ಮಾಹಿತಿ ನಿಚ್ಚಳವಾಗಿತ್ತು. ಅದರಲ್ಲಿ ಅನುಮಾನವೇ ಇರಲಿ' ಎಂದಿದ್ದಾರೆ.

ನಿರ್ಬಂಧದಿಂದ ಹೆಚ್ಚು ಪರಿಣಾಮ ಇಲ್ಲ- ರಷ್ಯಾ: ಉಕ್ರೇನ್ ಮೇಲೆ ಯುದ್ಧ ಸಾರಿದ್ದಕ್ಕೆ ಪ್ರತಿಯಾಗಿ ಪಾಶ್ಚಿಮಾತ್ಯ ದೇಶಗಳು ಹೇರಿರುವ ನಿರ್ಬಂಧದಿಂದ ಈವರೆಗೆ, ನಾವು ಆತಂಕಪಟ್ಟಿದ್ದಕ್ಕಿಂತ ಪರಿಣಾಮ ಕಡಿಮೆ ಇದೆ. ಇದು, ದೇಶದ ಕಂಪನಿಗಳ ಸಾಮರ್ಥ್ಯ ಬಿಂಬಿಸಲಿದೆ. ಆದರೆ, ಪೂರ್ಣ ಪರಿಣಾಮ ಅಂದಾಜಿಗೆ ಈಗ ಕಾಲ ಪಕ್ವವಲ್ಲ' ಎಂದು ರಷ್ಯಾದ ಕೇಂದ್ರೀಯ ಬ್ಯಾಂಕ್ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಕಠ್ಮಂಡು: ಭೂಕಂಪದ ಅನುಭವ, ಆತಂಕ

ಕಠ್ಮಂಡು (ಪಿಟಿಐ): ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಶನಿವಾರ ಬೆಳಗಿನ ಜಾವ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆಯು 4.7ರಷ್ಟು ದಾಖಲಾಗಿತ್ತು.

ಭೂಕಂಪದ ಅನುಭವದ ಹಿಂದೆಯೇ ಆತಂಕಗೊಂಡ ಹಲವು ನಾಗರಿಕರು ಮನೆಯಿಂದ ಹೊರಗೆ ಧಾವಿಸಿ ಬಂದರು. ಮಧ್ಯರಾತ್ರಿ 2.36ಗಂಟೆಗೆ ಭೂಕಂಪನ ಸಂಭವಿಸಿದ್ದು, ಭಕ್ತಾಪುರ ಜಿಲ್ಲೆ ಇದರ ಕೇಂದ್ರ ಸ್ಥಾನವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಭೂಕಂಪದಿಂದ ಅನಾಹುತ ಸಂಭವಿಸಿರುವ ಯಾವುದೇ ವರದಿ ಬಂದಿಲ್ಲ.

ವಂಚನೆ ಆರೋಪ ಭಾರತೀಯ ಪ್ರಜೆ ಬಂಧನ

ವಾಷಿಂಗ್ಟನ್ (ಪಿಟಿಐ): ಹಿರಿಯ ನಾಗರಿಕರನ್ನು ಗುರಿಯಾಗಿಸಿ ನಡೆಸುತ್ತಿದ್ದ ವಂಚನೆ ಜಾಲದ ಆರೋಪದಡಿ ಭಾರತೀಯ ಪ್ರಜೆಯೊಬ್ಬನನ್ನು ಸ್ಥಳೀಯ ಅಧಿಕಾರಿಗಳು ಬಂಧಿಸಿದ್ದಾರೆ.

ಸಂಚು ಮತ್ತು ಇ–ಮೇಲ್ ವಂಚನೆ ಕುರಿತ ಆರೋಪದಡಿ ಬಂಧಿತ ಅನಿರುದ್ಧ ಕಲ್ಕೋಟೆಯನ್ನು (24) ಹ್ಯೂಸ್ಟನ್‌ನ ಮ್ಯಾಜಿಸ್ಟ್ರೇಟ್ ಎದುರು ಹಾಜರುಪಡಿಸಲಾಯಿತು. ಈ ಕೃತ್ಯದಲ್ಲಿ ಹ್ಯೂಸ್ಟನ್ ನಿವಾಸಿ ಎಂ.ಡಿ.ಅಜದ್ (25) ಸಹ ಭಾಗಿ ಎಂದು ತಿಳಿಸಿದರು.

ಚೀನಾದಿಂದ ಗಡಿ ನೆಲೆ ಭದ್ರ – ಆಸ್ಟಿನ್

ಸಿಂಗಪುರ (ಪಿಟಿಐ): 'ಭಾರತದ ಜೊತೆಗಿನ ಅಂತರ ರಾಷ್ಟ್ರೀಯ ಗಡಿಯುದ್ದಕ್ಕೂ ತನ್ನ ನೆಲೆ ಬಲಪಡಿಸಲು ಚೀನಾ ನಿರಂತರವಾಗಿ ಯತ್ನ ನಡಸಿದೆ' ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಜೇಮ್ಸ್ ಆಸ್ಟಿನ್ ಶನಿವಾರ ತಿಳಿಸಿದರು.

ಚೀನಾವು ತನ್ನ ಗಡಿ ಹಕ್ಕು ಸ್ಥಾಪಿಸಲು ಮುನ್ನುಗ್ಗುತ್ತಿದ್ದು, ಆಕ್ರಮಣಕಾರಿ ಮನೋಭಾವ ತೋರುತ್ತಿದೆ. ಆದರೆ, ಇದರ ವಿರುದ್ಧ ರಕ್ಷಣೆಗಾಗಿ ಅಮೆರಿಕ ಎಂದಿಗೂ ತನ್ನ ಮಿತ್ರ ರಾಷ್ಟ್ರಗಳ ಜೊತೆಗೆ ನಿಲ್ಲಲಿದೆ ಎಂದು ಅವರು ಹೇಳಿದರು.

ಶೂಟಿಂಗ್: ಲೇಖರಾಗೆ ಎರಡನೇ ಚಿನ್ನ

ಅವನಿ ಲೇಖರಾ

ನವದೆಹಲಿ: ಭಾರತದ ಅವನಿ ಲೇಖರಾ ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಪ್ಯಾರಾ ಶೂಟಿಂಗ್ ವಿಶ್ವಕಪ್‌ನಲ್ಲಿ ಎರಡನೇ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ.

ಮಹಿಳೆಯರ ರೈಫಲ್ 3 ಪೋಸಿಷನ್ಸ್ ಎಸ್‌ಎಚ್1 ವಿಭಾಗದಲ್ಲಿ 458.3 ಪಾಯಿಂಟ್ಸ್ ಗಳಿಸಿ ಪದಕ ಜಯಿಸಿದರು. ಸ್ಲೊವೇಕಿಯಾದ ವೆರೋನಿಕಾ ವಡೊವಿಕೊವಾ ಮತ್ತು ಸ್ವೀಡನ್‌ನ ಆ್ಯನಾ ನಾರ್ಮಬ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಫೈನಲ್‌ಗೆ ಬೆರೆಟಿನಿ

ಸ್ಟುಟ್‌ಗಾರ್ಟ್, ಜರ್ಮನಿ (ಎಎಫ್‌ಪಿ): ಇಟಲಿಯ ಮ್ಯಾಟಿಯೊ ಬೆರೆಟಿನಿ ಅವರು ಸ್ಟುಟ್‌ಗಾರ್ಟ್ ಎಟಿಪಿ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ.

ಬೆರೆಟಿನಿ ಸೆಮಿಫೈನಲ್‌ನಲ್ಲಿ 7-6 (9/7), 7-6(7/5)ರಿಂದ ಜರ್ಮನಿಯ ಆಸ್ಕರ್ ಒಟ್ಟೆ ಅವರನ್ನು ಸೋಲಿಸಿದರು.





ಕಿರುಕುಳ ಆರೋಪ ಸಮಗ್ರ ತನಿಖೆ: ಸಾಯ್

ನವದೆಹಲಿ (ಪಿಟಿಐ): ಮಹಿಳಾ ಸೈಕ್ಲಿಸ್ಟ್‌ವೊಬ್ಬರು ರಾಷ್ಟ್ರೀಯ ತಂಡದ ಕೋಚ್ ಆರ್.ಕೆ.ಶರ್ಮ ವಿರುದ್ಧ ಮಾಡಿರುವ ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಲು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್)ಶನಿವಾರ ನಿರ್ಧರಿಸಿದೆ.

ಸ್ಲೊವೇನಿಯದಲ್ಲಿ ತರಬೇತಿ ಶಿಬಿರದ ವೇಳೆ ಕೋಚ್ ಅಸಭ್ಯವಾಗಿ ವರ್ತಿಸಿದ್ದಾಗಿ ಸೈಕ್ಲಿಸ್ಟ್ ದೂರು ನೀಡಿದ್ದರು.

'ಸಾಯ್ ತನಿಖಾ ತಂಡವು, ದೂರುದಾರ ಸೈಕ್ಲಿಸ್ಟ್ ಹಾಗೂ ಆರೋಪ ಎದುರಿಸುತ್ತಿರುವ ಕೋಚ್ ಅವರನ್ನು ಈಗಾಗಲೇ ವಿಚಾರಣೆಗೆ ಒಳಪಡಿಸಿದೆ.

ತಂಡದಲ್ಲಿದ್ದ ಇತರ ಐವರು ಸೈಕ್ಲಿಸ್ಟ್‌ಗಳನ್ನೂ ಮಾತನಾಡಿಸಿ, ಮಾಹಿತಿ ಕಲೆಹಾಕಲಾಗುವುದು' ಎಂದು ಪ್ರಾಧಿಕಾರದ ಮೂಲಗಳು ಮಾಹಿತಿ ನೀಡಿವೆ

ವಿಶ್ವ ಸ್ಕ್ವಾಷ್: ಅನಾಹತ್ ಆಯ್ಕೆ

ನವದೆಹಲಿ (ಪಿಟಿಐ): ಭಾರತದ ಅನಾಹತ್ ಸಿಂಗ್ ಅವರು ವಿಶ್ವ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದ್ದಾರೆ. ಚೆನ್ನೈನಲ್ಲಿ ನಡೆದ ಟ್ರಯಲ್ಸ್‌ನಲ್ಲಿ ದೆಹಲಿಯ ಬಾಲಕಿ ಅನಾಹತ್ ಅಗ್ರಸ್ಥಾನ ಗಳಿಸಿದರು. ಆಗಸ್ಟ್‌ನಲ್ಲಿ ಫ್ರಾನ್ಸ್‌ನ ನ್ಯಾನ್ಸಿಯಲ್ಲಿ ನಿಗದಿಯಾಗಿದೆ.

ಅನಾಹತ್ ಆಯ್ಕೆ ಟ್ರಯಲ್ಸ್‌ನ ಫೈನಲ್‌ನಲ್ಲಿ 3-0ಯಿಂದ ಐಶ್ವರ್ಯ ಖೂಬ್‌ಚಾಂದಿನಿ ಎದುರು ಗೆದ್ದರು.

ಬೆಂಗಳೂರು ರೇಸ್

ಫಾರೆಸ್ಟ್ ಫ್ಲೇಮ್ ಗೆಲ್ಲುವ ನಿರೀಕ್ಷೆ

ಕೃಷ್ಣರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾರೆಸ್ಟ್ ಫ್ಲೇಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಿವೈನ್ ಬ್ಲೆಸ್ಸಿಂಗ್ಸ್ 1, ಅನ್‌ಸಾಲ್ಡೊ 2, ಬಾರೊನೆಸ್ 7
2ನೇ ರೇಸ್: ಶುಭಂಕರ್ 3, ಸೂಪರ್ ರಫಿಯನ್ 2, ಮೆಸರ್ಸ್ ಥ್ಯಾಚರ್ 6
3ನೇ ರೇಸ್: ಆಲ್ ಅಟ್ರ್ಯಾಕ್ಟಿವ್ 8, ಎಟರ್ನಲ್ ಬ್ಲೇಝ್ 2, ಪ್ರೆಸಿಡೆನ್ಸಿಯಲ್ 6
4ನೇ ರೇಸ್: ಫಾರೆಸ್ಟ್ ಫ್ಲೇಮ್ 1, ಎ ಸ್ಟಾರ್ ಈಸ್ ಬಾರ್ನ್ 2, ಮಿರಾಕಲ್ 3
5ನೇ ರೇಸ್: ರಾಯಲ್ ಗ್ಲೋರಿ 11, ಗ್ಯಾಲಪಿಂಗ್ ಅಹೆಡ್ 4, ಎಂಪೈರ್ ಆಫ್ ಡ್ರೀಮ್ಸ್ 3
6ನೇ ರೇಸ್: ಸ್ಕ್ರಿಬ್ಲಿಂಗ್ ಹಾಪ್ಪರ್ 3, ಏರ್‌ಕ್ರಾಫ್ಟ್ 6, ಮೆಷರ್ ಆಫ್ ಟೈಮ್ 2
7ನೇ ರೇಸ್: ತೆನಾಲಿ 2, ಕ್ಲೆವರ್ ಹಾನ್ಸ್ 7, ಮಿಲ್‌ಬ್ರೂಕ್ 1

ಉತ್ತಮ ಬೆಟ್: ರಾಯಲ್ ಗ್ಲೋರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7